सत्यमेव जयते

ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ

ಲೋಕೋಪಯೋಗಿ ಇಲಾಖೆಯಲ್ಲಿ ರಸ್ತೆ ಕಾಮಗಾರಿಗಳ ಯೋಜನೆ ಮತ್ತು ಗುತ್ತಿಗೆ ನಿರ್ವಹಣೆ ಮೇಲಿನ ಕಾರ್ಯನಿರ್ವಹಣಾ ಸಮೀಕ್ಷೆ ಮಾರ್ಚ್ 2021ಕ್ಕೆ ಕೊನೆಗೊಂಡ ವರ್ಷಕ್ಕೆ

भारत के नियंत्रक एवं महालेखापरीक्षक
COMPTROLLER & AUDITOR GENERAL OF INDIA

SUPREME AUDIT INSTITUTION OF INDIA
लोकहितार्थ सत्यनिष्ठा
Dedicated to Truth in Public Interest

सत्यमेव जयते

ಕರ್ನಾಟಕ ಸರ್ಕಾರ

2022ನೇ ವರ್ಷದ ವರದಿ ಸಂಖ್ಯೆ 8

ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ

ಲೋಕೋಪಯೋಗಿ ಇಲಾಖೆಯಲ್ಲಿ ರಸ್ತೆ ಕಾಮಗಾರಿಗಳ ಯೋಜನೆ ಮತ್ತು ಗುತ್ತಿಗೆ ನಿರ್ವಹಣೆ ಮೇಲಿನ ಕಾರ್ಯನಿರ್ವಹಣಾ ಸಮೀಕ್ಷೆ

ಮಾರ್ಚ್ 2021ಕ್ಕೆ ಕೊನೆಗೊಂಡ ವರ್ಷಕ್ಕೆ

ಕರ್ನಾಟಕ ಸರ್ಕಾರ

2022ನೇ ವರ್ಷದ ವರದಿ ಸಂಖ್ಯೆ 8

ವಿಷಯ ಸೂಚಿ

ವಿಷಯ	ಕಂಡಿಕೆ ಸಂಖ್ಯೆ	ಪುಟ ಸಂಖ್ಯೆ
ಮುನ್ನುಡಿ		v
ಕಾರ್ಯನಿರ್ವಹಣಾ ಸಾರಾಂಶ		vii–x
ಅಧ್ಯಾಯ–I: ಪರಿಚಯ		
ಹಿನ್ನೆಲೆ	1.1	1
ಲೆಕ್ಕಪರಿಶೋಧನಾ ಉದ್ದೇಶಗಳು	1.2	4
ಲೆಕ್ಕಪರಿಶೋಧನಾ ಮಾನದಂಡ	1.3	4
ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ	1.4	5
ಕೃತಜ್ಞತೆ	1.5	5
ಅಧ್ಯಾಯ–II: ಯೋಜನೆ ಮತ್ತು ನೀತಿ ಅನುಷ್ಠಾನ		
ಮುಖ್ಯ ರಸ್ತೆ ಜಾಲದ ಅಭಿವೃದ್ಧಿಯಲ್ಲಿ ನಿಧಾನದ ಪ್ರಗತಿ	2.1	7
ರಸ್ತೆ ಮಾಹಿತಿ ವ್ಯವಸ್ಥೆ	2.2	8
ಯೋಜನೆಯ ಅನುಪಸ್ಥಿತಿ	2.3	9
ಅಧ್ಯಾಯ–III: ವೆಚ್ಚ ಅಂದಾಜು ಮತ್ತು ಕಾಮಗಾರಿಗಳ ಮಂಜೂರಾತಿ		
ರಸ್ತೆ ಅಂದಾಜುಗಳ ತಯಾರಿಕೆ ಮತ್ತು ಮಂಜೂರಾತಿಯಲ್ಲಿ ಅಕ್ರಮಗಳು	3.1	12
ತಪ್ಪಾದ ಅಂದಾಜುಗಳು	3.2	17
ರಸ್ತೆ ಸುರಕ್ಷತಾ ಲೆಕ್ಕಪರಿಶೋಧನೆ	3.3	24
ಅಧ್ಯಾಯ–IV: ಟೆಂಡರ್ ಮಾಡುವುದು, ಮೌಲ್ಯಮಾಪನ ಮತ್ತು ಗುತ್ತಿಗೆಗಳ ವಹಿಸುವಿಕೆ		
ಟೆಂಡರ್ ಆಹ್ವಾನಿಸುವ ಸೂಚನೆ ಮತ್ತು ಬಿಡ್ ದಾಖಲೆ	4.1	27
ಬಿಡ್‌ಗಳ ಮೌಲ್ಯಮಾಪನದಲ್ಲಿ ಮತ್ತು ಗುತ್ತಿಗೆದಾರರ ಆಯ್ಕೆಯಲ್ಲಿ ನ್ಯೂನತೆಗಳು	4.2	34
ಗುತ್ತಿಗೆಗಳನ್ನು ವಹಿಸುವಲ್ಲಿ ನ್ಯೂನತೆಗಳು	4.3	42
ಬಳಕೆದಾರ ಏಜೆನ್ಸಿಗಳಿಂದ ವರ್ಗಾವಣೆ ಶುಲ್ಕಗಳನ್ನು ವಸೂಲು ಮಾಡದಿರುವುದು	4.4	51
ಅಧ್ಯಾಯ–V: ಗುತ್ತಿಗೆ ವ್ಯತ್ಯಯಗಳು, ಮುಂಗಡಗಳು ಮತ್ತು ವಸೂಲಾತಿಗಳು		
ಗುತ್ತಿಗೆ ವ್ಯತ್ಯಯಗಳು	5.1	53
ಅನಧಿಕೃತ ಮುಂಗಡ ಪಾವತಿಗಳು	5.2	56
ಗುತ್ತಿಗೆದಾರರಿಂದ ಅಸಮರ್ಪಕ ಕಾರ್ಯಕ್ಷಮತಾ ಭದ್ರತೆಗಳು	5.3	56
ಒಡ್ಡು ಹಾಕಲು ಬಳಸಿದ ಭೂಮಿಯ ಮೇಲೆ ರಾಜಧನವನ್ನು ವಸೂಲು ಮಾಡದಿರುವುದು	5.4	57
ಇ–ಮಾಪನ ಪುಸ್ತಕ	5.5	58
ಅಧ್ಯಾಯ–VI: ಗುಣಮಟ್ಟ ನಿಯಂತ್ರಣ ಮತ್ತು ಮಾನವ ಸಂಪನ್ಮೂಲ		
ಕ್ಷೇತ್ರೀಯ ಪ್ರಯೋಗಶಾಲೆಗಳನ್ನು ಸ್ಥಾಪಿಸದಿರುವುದು	6.1	59

ಪರೀಕ್ಷಾ–ವರದಿಗಳಿಲ್ಲದೇ ಬಿಲ್‌ಗಳನ್ನು ಪಾವತಿ ಮಾಡಿರುವುದು	6.2	60
ಗುಣಮಟ್ಟ ನಿಯಂತ್ರಣದಲ್ಲಿ ಇಲಾಖಾ ಅಧಿಕಾರಿಗಳ ಮೇಲ್ವಿಚಾರಣೆಯ ಕೊರತೆ	6.3	61
ಲೋಕೋಪಯೋಗಿ ಇಲಾಖೆಯ ವಿಭಾಗಗಳಲ್ಲಿ ಮೂರನೇ ವ್ಯಕ್ತಿಯಿಂದ ಕಾಮಗಾರಿಗಳ ತಪಾಸಣೆ	6.4	62
ವಿವೇಚನೆಯಿಲ್ಲದ ಮಾನವ ಶಕ್ತಿಯ ನಿಯೋಜನೆ	6.5	62

ಅನುಬಂಧಗಳಲ ಪಟ್ಟಿ

ಅನುಬಂಧ ಸಂಖ್ಯೆ	ವಿವರಗಳು	ಪುಟ ಸಂಖ್ಯೆ
ಅನುಬಂಧ–3.1	ಸಂಚಾರ ದಟ್ಟಣೆಯ ತಪ್ಪು ನಿರ್ಧರಣೆಯಿಂದ ಅನಗತ್ಯ ವೆಚ್ಚ	65
ಅನುಬಂಧ–3.2	ಮಣ್ಣಿನ ಸಿಬಿಆರ್ ಮೌಲ್ಯದ ನಿರ್ಧರಣೆ	66
ಅನುಬಂಧ–3.3	ನೆಡುತೋಪು ಕಾಮಗಾರಿಗಳು	68
ಅನುಬಂಧ–3.4	ಅಂದಾಜುಗಳಲ್ಲಿ ಅಧಿಕ ಅವಕಾಶ ಮಾಡಿರುವುದು	71
ಅನುಬಂಧ–3.5	ಜಿಎಸ್‌ಬಿಯ ಅತಿಯಾದ ದಪ್ಪದ ಅವಕಾಶ ಮತ್ತು ಕಾರ್ಯಗತಗೊಳಿಸುವಿಕೆ	72
ಅನುಬಂಧ–3.6	ಸಾಗಣೆದಾರಿಯಿಂದ ಹೊರಕ್ಕೆ ಡಬ್ಲ್ಯುಎಮ್‌ಎಮ್ ಹಾಕಿರುವುದರಿಂದ ವ್ಯರ್ಥ ವೆಚ್ಚ	73
ಅನುಬಂಧ–3.7	ಬಿಟುಮಿನಸ್ ಮೇಲ್ಮೈಯನ್ನು ತೆಗೆದುಹಾಕಲು ತಪ್ಪಾದ ಐಟಂ ದರವನ್ನು ಅಳವಡಿಸಿಕೊಳ್ಳುವುದು	74
ಅನುಬಂಧ–3.8	ಬಿಟುಮೆನ್ ಕಡಿಮೆ ಬಳಕೆಯಿಂದಾಗಿ ಹೆಚ್ಚುವರಿ ಪಾವತಿ	75
ಅನುಬಂಧ–3.9	ಮಿತವ್ಯಯಕಾರಿಯಲ್ಲದ ಮಣ್ಣು ಅಗೆತ ಮತ್ತು ತೆಗೆಯುವಿಕೆಯ ಕಾರ್ಯಗತಗೊಳಿಸುವಿಕೆ	76
ಅನುಬಂಧ–3.10	ರಸ್ತೆ ಉತ್ಖನನದ ಮಿತವ್ಯಯಕಾರಿಯಲ್ಲದ ಕಾರ್ಯಗತಗೊಳಿಸುವಿಕೆ	77
ಅನುಬಂಧ–3.11	ಪ್ರೈಮರ್/ಟ್ಯಾಕ್ ಕೋಟ್‌ನ ತಪ್ಪಾದ ಅಳವಡಿಕೆ	78
ಅನುಬಂಧ–3.12	ಪ್ರಾಸಂಗಿಕ ಕಾಮಗಾರಿಯನ್ನು ಪ್ರತ್ಯೇಕ ಐಟಂ ಆಗಿ ತಪ್ಪಾಗಿ ಸೇರಿಸುವುದು	79
ಅನುಬಂಧ–3.13	ಸಿಮೆಂಟ್ ಕಾಂಕ್ರೀಟ್ ರಸ್ತೆಗಳ ನಿರ್ಮಾಣದಲ್ಲಿ ಅಧಿಕ ಸಿಮೆಂಟ್‌ಗೆ ಅವಕಾಶ ಮಾಡಿರುವುದು	80
ಅನುಬಂಧ–3.14	ರಸ್ತೆ ಉತ್ಖನನದಿಂದ ಪಡೆದ ಮಣ್ಣಿನ ಬಳಕೆ ಮಾಡದಿರುವುದು	81
ಅನುಬಂಧ–3.15	ರೋಡ್ ಸ್ಟಡ್‌ಗಳ ಅಧಿಕ ಪರಿಮಾಣ	81
ಅನುಬಂಧ–3.16	ರಸ್ತೆ ಸುರಕ್ಷತಾ ಲೆಕ್ಕಪರಿಶೋಧನೆ	82
ಅನುಬಂಧ–4.1	ನಿರ್ಬಂಧಿತ ಟೆಂಡರ್ ಷರತ್ತುಗಳು	83
ಅನುಬಂಧ–4.2	ನಿರ್ಬಂಧಿತ ಟೆಂಡರ್ ಷರತ್ತುಗಳು	84
ಅನುಬಂಧ–4.2(ಎ)	ನಿರ್ಬಂಧಿತ ಟೆಂಡರ್ ಷರತ್ತುಗಳು	85
ಅನುಬಂಧ–4.3	ಬಿಡ್‌ಗಳ ಸಲ್ಲಿಕೆಗೆ ಸಾಕಷ್ಟಿಲ್ಲದ ಸಮಯಾವಕಾಶ	87
ಅನುಬಂಧ–4.4	ತಾಂತ್ರಿಕ ಮಂಜೂರಾತಿಗಿಂತ ಮೊದಲೇ ಟೆಂಡರ್‌ಗಳನ್ನು ಆಹ್ವಾನಿಸುವ ಸೂಚನೆಯನ್ನು ಜಾರಿಗೊಳಿಸಿರುವುದು	88

ಅನುಬಂಧ–4.5	ಗುತ್ತಿಗೆದಾರರ ಪಟ್ಟಿ ಮಾಡುವಲ್ಲಿ ನ್ಯೂನತೆಗಳು	89
ಅನುಬಂಧ–4.6	ಟೆಂಡರ್‌ಗಳ ನಿಯಮಬಾಹಿರ ಅಂಗೀಕಾರ	90
ಅನುಬಂಧ–4.7	ಟೆಂಡರ್‌ಗಳ ನಿಯಮಬಾಹಿರ ಅಂಗೀಕಾರ	93
ಅನುಬಂಧ–4.8	ಟೆಂಡರ್‌ಗಳ ನಿಯಮಬಾಹಿರ ಅಂಗೀಕಾರ	93
ಅನುಬಂಧ–4.9	ಪ್ರಮಾಣೀಕರಿಸದ ವಹಿವಾಟು ಪ್ರಮಾಣಪತ್ರಗಳ ಸ್ವೀಕಾರ	94
ಅನುಬಂಧ–4.10	ಮುಂಗಡ ಹಣ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳದಿರುವುದು	95
ಅನುಬಂಧ–4.11	ಗುತ್ತಿಗೆಗಳನ್ನು ಅಂತಿಮಗೊಳಿಸುವಲ್ಲಿ ವಿಳಂಬ	96
ಅನುಬಂಧ–4.12	ಗುತ್ತಿಗೆಗಳನ್ನು ಅಂತಿಮಗೊಳಿಸುವಲ್ಲಿ ವಿಳಂಬ	97
ಅನುಬಂಧ–4.13	ಗುತ್ತಿಗೆದಾರರಿಂದ ವಿಮಾ ರಕ್ಷಣೆ ಒದಗಿಸದಿರುವುದು	98
ಅನುಬಂಧ–4.14	ದೋಷ ಹೊಣೆಗಾರಿಕಾ ಅವಧಿ	99
ಅನುಬಂಧ–4.15	ಭೂಮಿಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳದೇ ಕಾಮಗಾರಿಗಳನ್ನು ವಹಿಸಿರುವುದು	100
ಅನುಬಂಧ–4.16	ಬಳಕೆದಾರ ಏಜೆನ್ಸಿಗಳಿಂದ ವರ್ಗಾವಣೆ ಶುಲ್ಕಗಳನ್ನು ವಸೂಲಿ ಮಾಡದಿರುವುದು	101
ಅನುಬಂಧ–5.1	ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬ	102
ಅನುಬಂಧ–5.2	ಪೂರ್ಣಗೊಂಡ ವರದಿಗಳನ್ನು ಸಲ್ಲಿಸದಿರುವುದು	103
ಅನುಬಂಧ–5.3	ಅನಧಿಕೃತ ಮುಂಗಡ ಪಾವತಿಗಳು	104
ಅನುಬಂಧ–5.4	ಅನಧಿಕೃತ ಮುಂಗಡ ಪಾವತಿಗಳು	106
ಅನುಬಂಧ–5.5	ಗುತ್ತಿಗೆದಾರರಿಂದ ಅಸಮರ್ಪಕ ಕಾರ್ಯಕ್ಷಮತಾ ಭದ್ರತೆಗಳು	108
ಅನುಬಂಧ–5.6	ಬದುವಿನ ನಿರ್ಮಾಣಕ್ಕೆ ಬಳಸಿದ ಮಣ್ಣಿನ ಮೇಲೆ ರಾಜಧನ ವಸೂಲು ಮಾಡದಿರುವುದು	110
ಅನುಬಂಧ–6.1	ಕ್ಷೇತ್ರೀಯ ಪ್ರಯೋಗಶಾಲೆಗಳನ್ನು ಸ್ಥಾಪಿಸದಿರುವುದು	113
ಅನುಬಂಧ–6.2	ಪರೀಕ್ಷಾ–ವರದಿಗಳಿಲ್ಲದೇ ಬಿಲ್‌ಗಳನ್ನು ಪಾವತಿ ಮಾಡಿರುವುದು	114
ಅನುಬಂಧ–6.3	ವಿವೇಚನಾರಹಿತ ಮಾನವಸಂಪನ್ಮೂಲದ ನಿಯೋಜನೆ	115

ಮುನ್ನುಡಿ

1. ಮಾರ್ಚ್ 2021ಕ್ಕೆ ಕೊನೆಗೊಂಡ ವರ್ಷದ ಈ ವರದಿಯನ್ನು ಭಾರತ ಸಂವಿಧಾನದ 151(2)ನೇ ವಿಧಿಯಡಿಯಲ್ಲಿ ರಾಜ್ಯ ವಿಧಾನಮಂಡಲದಲ್ಲಿ ಮಂಡಿಸಲು ಕರ್ನಾಟಕ ಸರ್ಕಾರದ ರಾಜ್ಯಪಾಲರಿಗೆ ಸಲ್ಲಿಸಲು ತಯಾರಿಸಲಾಗಿದೆ.

2. ಈ ವರದಿಯು 'ಲೋಕೋಪಯೋಗಿ ಇಲಾಖೆಯಲ್ಲಿ ರಸ್ತೆ ಕಾಮಗಾರಿಗಳ ಯೋಜನೆ ಮತ್ತು ನಿರ್ವಹಣೆ' ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ಒಳಗೊಂಡಿದೆ.

3. ಈ ವರದಿಯಲ್ಲಿ ತಿಳಿಸಿರುವ ಪ್ರಕರಣಗಳು 2016–21ರ ಅವಧಿಯಲ್ಲಿ ಲೆಕ್ಕಪರಿಶೋಧನೆಯು ಗಮನಿಸಿದ ಪ್ರಕರಣಗಳಾಗಿವೆ.

4. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಜಾರಿ ಮಾಡಿರುವ ಲೆಕ್ಕಪರಿಶೋಧನಾ ಮಾನದಂಡಗಳಿಗೆ ಅನುಗುಣವಾಗಿ ಲೆಕ್ಕಪರಿಶೋಧನೆಯನ್ನು ನಡೆಸಲಾಗಿದೆ.

5. ಈ ಭಾಷಾಂತರಿಸಿದ ಆವೃತ್ತಿಯಲ್ಲಿನ ಯಾವುದೇ ಸಂದೇಹಗಳಿಗೆ ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

ಕಾರ್ಯನಿರ್ವಹಣಾ ಸಾರಾಂಶ

ಕಾರ್ಯನಿರ್ವಹಣಾ ಸಾರಾಂಶ

ಈ ಲೆಕ್ಕಪರಿಶೋಧನೆಯನ್ನು ಸಿಎಜಿ ಏಕೆ ಮಾಡಿದರು?

ರಾಜ್ಯದಲ್ಲಿ ಸುರಕ್ಷಿತ, ತಾಂತ್ರಿಕವಾಗಿ ಉತ್ತಮ ಮತ್ತು ವೆಚ್ಚದಾಯಕ ರಸ್ತೆ ಜಾಲವನ್ನು ಯೋಜಿಸುವುದು, ವಿನ್ಯಾಸಗೊಳಿಸುವುದು, ನಿರ್ಮಿಸುವುದು ಮತ್ತು ನಿರ್ವಹಿಸುವುದು ರಾಜ್ಯ ಲೋಕೋಪಯೋಗಿ ಇಲಾಖೆಯ ಧ್ಯೇಯವಾಗಿದೆ. ರಾಜ್ಯದಲ್ಲಿ ಉತ್ತಮವಾಗಿ ನಿರ್ವಹಿಸಲಾದ ರಸ್ತೆ ಜಾಲದ ಮೂಲಕ ರಾಜ್ಯದ ಸಾಮಾಜಿಕ–ಆರ್ಥಿಕ ಬೆಳವಣಿಗೆಗೆ ಸುಸ್ಥಿರ ರಸ್ತೆ ಜಾಲವನ್ನು ಖಚಿತಪಡಿಸುವುದು ಇಲಾಖೆಯು ಪ್ರಮುಖ ಉದ್ದೇಶವಾಗಿದೆ. ಮಾರ್ಚ್ 2021 ರಲ್ಲಿದ್ದಂತೆ ಕರ್ನಾಟಕದಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ಪ್ರಮುಖ ರಸ್ತೆಗಳ ಜಾಲವು 91,960 ಕಿಮೀಗಳಷ್ಟು ವಿಸ್ತಾರವಾಗಿದೆ. 2016–21ರಲ್ಲಿ, ರಾಜ್ಯ ಸರ್ಕಾರವು ರಾಜ್ಯ ಹೆದ್ದಾರಿಗಳು ಮತ್ತು ಪ್ರಮುಖ ಜಿಲ್ಲಾ ರಸ್ತೆಗಳ ಸುಧಾರಣೆ ಮತ್ತು ನವೀಕರಣಕ್ಕಾಗಿ ₹17,046.97 ಕೋಟಿ ಬಂಡವಾಳ ವೆಚ್ಚವನ್ನು ಭರಿಸಿತ್ತು. ಎಲ್ಲಾ ರೀತಿಯ ರಸ್ತೆ ಕಾಮಗಾರಿಗಳನ್ನು ಗುತ್ತಿಗೆದಾರರನ್ನು ತೊಡಗಿಸಿಕೊಂಡು ಕಾರ್ಯಗತಗೊಳಿಸಲಾಗುತ್ತದೆ. ಏಪ್ರಿಲ್ 2016ರಿಂದ ಮಾರ್ಚ್ 2021 ರವರೆಗಿನ ಅವಧಿಯನ್ನು ವ್ಯಾಪಿಸಿರುವ ಈ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು (i) ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ವ್ಯವಸ್ಥಿತವಾಗಿ ಯೋಜಿಸಲಾಗಿದೆಯೇ, ಆದ್ಯತೆ ನೀಡಲಾಗಿದೆಯೇ ಮತ್ತು ಯೋಜಿತ ಚಲನಶೀಲತೆ/ಸಂಚಾರ ಅಗತ್ಯಗಳನ್ನು ಸಾಧಿಸಲು ವಿನ್ಯಾಸಗೊಳಿಸಲಾಗಿತ್ತೇ, (ii) ನಿರ್ದಿಷ್ಟ ಗುಣಮಟ್ಟದ ಕಾಮಗಾರಿಗಳನ್ನು ವೆಚ್ಚ ಮತ್ತು ಸಮಯಗಳನ್ನು ಮೀರಿಸದೆ ಕಾರ್ಯಗತಗೊಳಿಸಲು ಗುತ್ತಿಗೆ ನಿರ್ವಹಣೆ ಪರಿಣಾಮಕಾರಿಯಾಗಿತ್ತೇ; ಮತ್ತು *(iii)* ಅಪೇಕ್ಷಿತ ಉದ್ದೇಶಗಳನ್ನು ಸಾಧಿಸಲು ಮೇಲ್ವಿಚಾರಣಾ ವ್ಯವಸ್ಥೆಯು ಸಾಕಷ್ಟಿದ್ದಿತೇ ಮತ್ತು ಪರಿಣಾಮಕಾರಿಯಾಗಿದ್ದಿತೇ ಎಂಬುದನ್ನು ಪರಿಶೀಲಿಸಲು ಕೈಗೊಳ್ಳಲಾಯಿತು

ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಪ್ರಮುಖ ಅಂಶಗಳು

ಕರ್ನಾಟಕ ರಸ್ತೆ ವಲಯದ ನೀತಿ, 2009ರ ಪ್ರಮುಖ ಉದ್ದೇಶಗಳಾದ ರಾಜ್ಯ ಹೆದ್ದಾರಿಗಳ ಪ್ರಮುಖ ರಸ್ತೆ ಜಾಲದ ಅಭಿವೃದ್ಧಿ ಮತ್ತು ಐಆರ್‌ಸಿ ಮಾನದಂಡಗಳ ಪ್ರಕಾರ ಕನಿಷ್ಠ ಎರಡು–ಲೇನ್ ಅಗಲದೊಂದಿಗೆ ಪ್ರಮುಖ ಜಿಲ್ಲಾ ರಸ್ತೆಗಳ ನಿರ್ಮಾಣ ಇನ್ನೂ ಸಾಕಾರಗೊಂಡಿರಲಿಲ್ಲ. ರಾಜ್ಯದಲ್ಲಿ ರಸ್ತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಯಾವುದೇ ನಿಯತಕಾಲಿಕ ಯೋಜನೆ ಇರಲಿಲ್ಲ.

ರಸ್ತೆ ಕಾಮಗಾರಿಗಳ ಅಂದಾಜು ವೆಚ್ಚವನ್ನು ಐಆರ್‌ಸಿ ನಿಯಮಗಳು ಮತ್ತು ಸರ್ಕಾರದ ಸೂಚನೆಗಳಿಗೆ ಅನುಗುಣವಾಗಿ ತಯಾರಿಸಿರಲಿಲ್ಲ. ತತ್ಪರಿಣಾಮವಾಗಿ, ಅಂದಾಜುಗಳು ಗಂಭೀರ ನ್ಯೂನತೆಗಳನ್ನು ಒಳಗೊಂಡಿದ್ದು, ಲೆಕ್ಕಪರಿಶೋಧನೆಯಿಂದ ಪರೀಕ್ಷಾ–ತನಿಖೆ ಮಾಡಲ್ಪಟ್ಟ ₹38.63 ಕೋಟಿ ಮೌಲ್ಯದ ತಪ್ಪಿಸಬಹುದಾದ ಹೆಚ್ಚುವರಿ ವೆಚ್ಚ, ಸರ್ಕಾರಕ್ಕೆ ನಷ್ಟ ಇತ್ಯಾದಿಗಳಿಗೆ ಕಾರಣವಾಯಿತು.

ತಾಂತ್ರಿಕ ಮಂಜೂರಾತಿಗೆ ಮುಂಚಿತವಾಗಿ ರಸ್ತೆ ಸುರಕ್ಷತಾ ಲೆಕ್ಕಪರಿಶೋಧನೆಗಳನ್ನು ನಡೆಸಿರಲಿಲ್ಲವಾಗಿ ಅದು ಅಂದಾಜುಗಳು ರಸ್ತೆ ಸುರಕ್ಷತಾ ಕ್ರಮಗಳಿಗೆ ಸಾಕಷ್ಟು ನಿಬಂಧನೆಗಳನ್ನು ಹೊಂದುವುದರಿಂದ ವಂಚಿತವಾದಂತಾಯಿತು.

ಟೆಂಡರ್ ಆಹ್ವಾನಿಸುವ ಪ್ರಾಧಿಕಾರಗಳು ಯಂತ್ರೋಪಕರಣಗಳಿಗೆ ಹೆಚ್ಚಿನ ವಿಶಿಷ್ಟತೆಗಳನ್ನು ನಿಗದಿಪಡಿಸಿದ್ದರು ಮತ್ತು ಕಾಮಗಾರಿಗಳಿಗೆ ಅಗತ್ಯವಿದ್ದುದಕ್ಕಿಂತ ಹೆಚ್ಚಿನ ವರ್ಗದ ಗುತ್ತಿಗೆದಾರರಿಂದ ಮಾತ್ರ ಟೆಂಡರ್‌ಗಳನ್ನು ಆಹ್ವಾನಿಸಲಾಗಿತ್ತು. ಬಿಡ್ ಸಾಮರ್ಥ್ಯವನ್ನು ಪರಿಶೀಲಿಸಲು ಗುತ್ತಿಗೆದಾರರ ದತ್ತಸಂಚಯ ಅಸ್ತಿತ್ವದಲ್ಲಿರಲಿಲ್ಲ. ತತ್ಪರಿಣಾಮವಾಗಿ, ಇಲಾಖೆಯು ಅನರ್ಹ ಗುತ್ತಿಗೆದಾರರಿಗೆ ಭಾಗವಹಿಸಲು ಅವಕಾಶ ನೀಡಿತು ಅಥವಾ ಅರ್ಹ ಗುತ್ತಿಗೆದಾರರನ್ನು ಭಾಗವಹಿಸದಂತೆ ನಿರ್ಬಂಧಿಸಿ ಆ ಮೂಲಕ ಸ್ಪರ್ಧೆಯನ್ನು ಸೀಮಿತಗೊಳಿಸಿತು.

ಉಪಯುಕ್ತತೆಗಳ ವರ್ಗಾವಣೆಯಲ್ಲಿ ಅಸ್ತಿತ್ವದಲ್ಲಿರುವ **IRC** ನಿಬಂಧನೆಗಳನ್ನು ಅನುಸರಿಸಲಾಗಿಲ್ಲ, ಪರಿಣಾಮವಾಗಿ ರಾಜ್ಯದ ಬೊಕ್ಕಸಕ್ಕೆ ಹೆಚ್ಚುವರಿ ಹೊರೆಯಾಗಿದೆ.

₹2,738.86 ಕೋಟಿ ಮೊತ್ತದ 373 ಕಾಮಗಾರಿಗಳನ್ನು ಒಳಗೊಂಡ (ಆಯ್ಕೆಮಾಡಿದ ಕಾಮಗಾರಿಗಳ ಶೇಕಡಾ 75ರಷ್ಟು) ಗುತ್ತಿಗೆಗಳನ್ನು ಕೇವಲ ಒಂದು ಅಥವಾ ಎರಡು ಬಿಡ್‌ಗಳನ್ನು ಸ್ವೀಕರಿಸಿ, ಮರುಟೆಂಡರ್ ಮಾಡದೇ ವಹಿಸಲಾಗಿದ್ದು, ಕಾರ್ಯಗತಗೊಳಿಸಿದ ಕಾಮಗಾರಿಗಳಿಗೆ ಸ್ಪರ್ಧಾತ್ಮಕ ದರಗಳನ್ನು ಪಡೆಯುವ ಅವಕಾಶದಿಂದ ರಾಜ್ಯವು ವಂಚಿತವಾಯಿತು. ಅಲ್ಲದೆ, ಶೇಕಡಾ 10ಕ್ಕಿಂತ ಹೆಚ್ಚು ಟೆಂಡರ್ ಪ್ರೀಮಿಯಂನೊಂದಿಗೆ 43 ಏಕೈಕ ಬಿಡ್‌ಗಳಲ್ಲಿ ಗುತ್ತಿಗೆಗಳನ್ನು ವಹಿಸಿದ್ದು ₹18.68 ಕೋಟಿ ಹೆಚ್ಚುವರಿ ಆರ್ಥಿಕ ಪರಿಣಾಮ ಉಂಟಾಗುವಲ್ಲಿ ಪರಿಣಮಿಸಿತು.

ಮಳೆಯ ಅತಿವೃಷ್ಟಿ, ಗ್ರಾಮಸ್ಥರ ಪ್ರತಿಭಟನೆ, ಜಮೀನು ವ್ಯಾಜ್ಯಗಳು, ಮುಂತಾದ ಕ್ಷುಲ್ಲಕ ಕಾರಣಗಳಿಂದ ಹೆಚ್ಚಿನ ಸಂಖ್ಯೆಯ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅಸಾಮಾನ್ಯ ವಿಳಂಬವಾಗಿತ್ತು. ಆದರೆ, ವಿಳಂಬಕ್ಕೆ ನಿರ್ದಿಷ್ಟವಾದ ಕಾರಣಗಳನ್ನು ಸೂಚಿಸುವ ಯಾವುದೇ ದಾಖಲೆಗಳನ್ನು ಲೋಕೋಪಯೋಗಿ ಇಲಾಖೆ ನಿರ್ವಹಿಸಿರಲಿಲ್ಲ ಮತ್ತು ವಾಡಿಕೆಯಂತೆ ಕಾಮಗಾರಿಗಳಿಗೆ ಸಮಯದ ವಿಸ್ತರಣೆಯನ್ನು ನೀಡಲಾಗಿತ್ತು. ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್ ಅಡಿಯಲ್ಲಿ ಒದಗಿಸಲಾದ ಮಾಪನದ ತಾಕ್ಷಣಿಕ ಸಲ್ಲಿಕೆಯನ್ನು ಬಳಸಿರಲಿಲ್ಲ (ಜೂನ್ 2022) ಮತ್ತು ಕಾಮಗಾರಿಗಳ ಅಳತೆಗಳನ್ನು ಎಕ್ಸೆಲ್ ಸ್ಪ್ರೆಡ್‌ಶೀಟ್‌ಗಳಲ್ಲಿ ದಾಖಲಿಸಲಾಗಿದ್ದು, ಇದು ಗುತ್ತಿಗೆದಾರರ ಬಿಲ್‌ಗಳನ್ನು ತಯಾರಿಸುವ ಉದ್ದೇಶಕ್ಕೆ ಮಾಹಿತಿಯ ವಿಶ್ವಾಸಾರ್ಹ ಮೂಲವಾಗಿರಲಿಲ್ಲ.

333 ಪ್ರಕರಣಗಳಲ್ಲಿ ಕ್ಷೇತ್ರೀಯ ಪ್ರಯೋಗಶಾಲೆಗಳನ್ನು ಸ್ಥಾಪಿಸಲು ವಿಭಾಗಗಳು ಗುತ್ತಿಗೆದಾರರಿಗೆ **₹1,480.37** ಕೋಟಿ ಬಿಡುಗಡೆ ಮಾಡಿದ್ದವು, ಆದರೆ ಗುತ್ತಿಗೆದಾರರು ಕ್ಷೇತ್ರೀಯ ಪ್ರಯೋಗಶಾಲೆಗಳನ್ನು ಸ್ಥಾಪಿಸಿರಲಿಲ್ಲ ಮತ್ತು ಗುಣಮಟ್ಟ ನಿಯಂತ್ರಣ ಪರೀಕ್ಷಾ ವರದಿಗಳನ್ನು ಬಿಲ್‌ಗಳಿಗೆ ಲಗತ್ತಿಸಿರಲಿಲ್ಲ. ಗುಣಮಟ್ಟ ನಿಯಂತ್ರಣ ಕ್ರಮಗಳ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ವಿಫಲವಾದ ಗುತ್ತಿಗೆದಾರರಿಗೆ ಅವರು ಒದಗಿಸಿದ ಕಾರ್ಯಕ್ಷಮತಾ ಖಾತರಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಮೂಲಕ ಇಲಾಖೆಯು ದಂಡ ವಿಧಿಸಬಹುದು ಮತ್ತು ಸಂಹಿತೆ ನಿಬಂಧನೆಗಳನ್ನು ಜಾರಿಗೊಳಿಸಲು ವಿಫಲರಾದ ಇಇಗಳ ವಿರುದ್ಧ ಕ್ರಮ ಕೈಗೊಳ್ಳಬಹುದು. ಗುತ್ತಿಗೆದಾರರ ಬಿಲ್‌ಗಳನ್ನು ಅಂಗೀಕರಿಸುವ ಮೊದಲು ಕ್ಯೂಎ ಮಾನದಂಡಗಳನ್ನು ಅನುಸರಿಸಲು ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಗೆ ಅಗತ್ಯ ಸೂಚನೆಗಳನ್ನು ನೀಡಲಾಗುವುದು ಎಂದು ಸರ್ಕಾರವು ತಿಳಿಸಿತು.

ಸಿಎಜಿ ಏನು ಶಿಫಾರಸು ಮಾಡಿದ್ದಾರೆ

ಕಾರ್ಯನೀತಿ, ವೈಜ್ಞಾನಿಕ ಮತ್ತು ವೆಚ್ಚ ಪರಿಣಾಮಕಾರಿ ಅಂದಾಜುಗಳನ್ನು ತಯಾರಿಸುವುದು, ಟೆಂಡರ್ ಕರೆಯುವುದು, ಗುತ್ತಿಗೆಗಳನ್ನು ನೀಡುವುದು ಮತ್ತು ನಿರ್ವಹಿಸುವುದರಲ್ಲಿ ಪಾರದರ್ಶಕತೆ ಇವುಗಳಿಗೆ ಸಂಬಂಧಿಸಿದಂತೆ ಹದಿನೈದು (15) ಶಿಫಾರಸುಗಳಿವೆ. ವರದಿಯಲ್ಲಿ ಕೆಳಗಿನ ಶಿಫಾರಸುಗಳನ್ನು ಮಾಡಲಾಗಿದೆ:

- ಸಂಪೂರ್ಣ ರಸ್ತೆ ದತ್ತಾಂಶವನ್ನು ಕೆಆರ್‌ಎಎಮ್‌ಎಸ್‌ಗೆ ರವಾನಿಸಿ ನಿಯತಕಾಲಿಕವಾಗಿ ಇಂದೀಕರಿಸುವುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು.
- ಉದ್ದೇಶಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ರಸ್ತೆ ಅಭಿವೃದ್ಧಿಗೆ ಸಮಗ್ರ ವಾರ್ಷಿಕ ಮತ್ತು ಪಂಚವಾರ್ಷಿಕ ಯೋಜನೆಗಳನ್ನು ಸಿದ್ಧಪಡಿಸುವುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು.
- ತಾಂತ್ರಿಕ ಮಂಜೂರಾತಿಯನ್ನು ನೀಡುವ ಪ್ರಾಧಿಕಾರಗಳು ಅಂದಾಜುಗಳನ್ನು ಕೂಲಂಕಷವಾಗಿ ಪರಿಶೀಲಿಸುವುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು ಮತ್ತು ತಪ್ಪಾದ ಅಂದಾಜಿನಿಂದಾಗಿ ನಷ್ಟ/ ಹಾನಿಗಳ ಸಂದರ್ಭಗಳಲ್ಲಿ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು.

- ಪ್ರಾಥಮಿಕ/ವಿವರವಾದ ಅಂದಾಜುಗಳು ಕಾರ್ಯಗತಗೊಳಿಸಬೇಕಾದ ಕಾಮಗಾರಿಗಳ ವೆಚ್ಚ, ವ್ಯಾಪ್ತಿ ಮತ್ತು ಗುಣಮಟ್ಟವನ್ನು ವ್ಯಾಖ್ಯಾನಿಸುವುದರಿಂದ, ನಿಗದಿತ ಪರೀಕ್ಷೆಗಳು ಮತ್ತು ಸಮೀಕ್ಷೆಯ ಫಲಿತಾಂಶಗಳಿಂದ ಬೆಂಬಲಿತವಾಗಿ, ಅವುಗಳನ್ನು ಐಆರ್‌ಸಿ ನಿಯಮಗಳು ಮತ್ತು ಸರ್ಕಾರದ ಸೂಚನೆಗಳ ಪ್ರಕಾರ ಕಟ್ಟುನಿಟ್ಟಾಗಿ ಸಿದ್ಧಪಡಿಸಬೇಕು.

- ರಸ್ತೆ ಸುರಕ್ಷತಾ ಲೆಕ್ಕಪರಿಶೋಧನೆಗಳನ್ನು ಕಡ್ಡಾಯವಾಗಿ ನಡೆಸುವುದನ್ನು ಮತ್ತು ತಾಂತ್ರಿಕ ಮಂಜೂರಾತಿ ನೀಡುವ ಮೊದಲು ಅಂದಾಜುಗಳಲ್ಲಿ ಅಗತ್ಯವಿರುವ ರಸ್ತೆ ಸುರಕ್ಷತಾ ನಿಬಂಧನೆಗಳನ್ನು ಸೇರಿಸಲಾಗಿದೆ ಎಂಬುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು.

- ಸಾಲ್ವೆನ್ಸಿ ಮಿತಿ, ಲಭ್ಯವಿರುವ ಉಪಕರಣಗಳು ಮತ್ತು ತಾಂತ್ರಿಕ ಸಿಬ್ಬಂದಿಯ ವಿವರಗಳು, ಬ್ಯಾಲೆನ್ಸ್ ಶೀಟ್‌ಗಳು, ಕಾರ್ಯಗತಗೊಳಿಸಿದ ಕಾಮಗಾರಿಗಳು ಇತ್ಯಾದಿಗಳನ್ನು ಒಳಗೊಂಡಂತೆ ನೋಂದಾಯಿತ ಗುತ್ತಿಗೆದಾರರ ಸಂಪೂರ್ಣ ದತ್ತಸಂಚಯವನ್ನು ಇಲಾಖೆಯು ನಿರ್ವಹಿಸುವುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು.

- ಸರ್ಕಾರದ ಸೂಚನೆಗಳನ್ನು ಉಲ್ಲಂಘಿಸಿ ಏಕೈಕ ಬಿಡ್ಡನ್ನು ಸ್ವೀಕರಿಸಿದ ಟೆಂಡರ್ ಅಂಗೀಕರಿಸುವ ಪ್ರಾಧಿಕಾರದ ವಿರುದ್ಧ ಶಿಸ್ತು ಕ್ರಮವನ್ನು ಪ್ರಾರಂಭಿಸಲು ರಾಜ್ಯ ಸರ್ಕಾರವು ಕೆಪಿಡಬ್ಲ್ಯುಡಿ ಸಂಹಿತೆಯಡಿಯಲ್ಲಿ ಅಗತ್ಯ ನಿಬಂಧನೆಗಳನ್ನು ಸೇರಿಸಬೇಕು.

- ಎಲ್ಲಾ ವಿಧದ ದುಷ್ಕೃತ್ಯಗಳಲ್ಲಿ ಭಾಗಿಯಾಗಿರುವ ಟೆಂಡರ್‌ದಾರರನ್ನು ಕಪ್ಪುಪಟ್ಟಿಗೆ ಸೇರಿಸಲು ಮತ್ತು ಇಎಮ್‌ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲು ಅಗತ್ಯವಾದ ನಿಬಂಧನೆಯನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು.

- ಎಮ್‌ಒಆರ್‌ಟಿಹೆಚ್ ಮಾರ್ಗಸೂಚಿಗಳ ಪ್ರಕಾರ ಸಮಯಾವಧಿಯನ್ನು ನಿಗದಿಪಡಿಸಲು ಸರ್ಕಾರವು ಅಗತ್ಯ ಕ್ರಮವನ್ನು ತೆಗೆದುಕೊಳ್ಳಬೇಕು.

- ಎಮ್‌ಒಆರ್‌ಟಿಹೆಚ್ ಮಾರ್ಗಸೂಚಿಗಳ ಪ್ರಕಾರ **DLP** ಅನ್ನು ನಿಗದಿಪಡಿಸಲು ಸರ್ಕಾರವು ಅಗತ್ಯ ಕ್ರಮವನ್ನು ತೆಗೆದುಕೊಳ್ಳಬೇಕು.

- ರಸ್ತೆ ಸುಧಾರಣೆ ಅಥವಾ ಅಭಿವೃದ್ಧಿ ಕಾಮಗಾರಿಗಳ ಸ್ಥಳದಿಂದ ಉಪಯುಕ್ತತೆಗಳನ್ನು ವರ್ಗಾಯಿಸಲು ನೀತಿ ಅಥವಾ ಮಾರ್ಗಸೂಚಿಗಳನ್ನು ರೂಪಿಸುವುದನ್ನು ಸರ್ಕಾರವು ಪರಿಗಣಿಸಬೇಕು.

- ಕಾಮಗಾರಿಗಳ ಅನುಷ್ಠಾನದಲ್ಲಿ ಉಂಟಾದ ಅಡಚಣೆಯನ್ನು ಸ್ಪಷ್ಟವಾಗಿ ದಾಖಲಿಸುವ ಮತ್ತು ಒಪ್ಪಂದದ ನಿಬಂಧನೆಗಳಿಗೆ ಅನುಸಾರವಾಗಿ ಕಾರ್ಯನಿರ್ವಹಿಸುವ 'ಅಡಚಣೆ ರಿಜಿಸ್ಟರ್' ಅನ್ನು ಲೋಕೋಪಯೋಗಿ ಇಲಾಖೆ ನಿರ್ವಹಿಸುವುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು. ಅಲ್ಲದೆ, ಋಣಭಾರ ಮುಕ್ತ ಭೂಮಿಯ ಲಭ್ಯತೆಯನ್ನು ಖಚಿತಪಡಿಸಿಕೊಂಡ ನಂತರ ಮತ್ತು ಅರಣ್ಯ ಇಲಾಖೆಯಿಂದ ಅಗತ್ಯ ಅನುಮತಿಯನ್ನು ಪಡೆದ ನಂತರವೇ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂಬುದನ್ನೂ ಸಹ ಖಚಿತಪಡಿಸಿಕೊಳ್ಳಬೇಕು.

- ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್‌ನಲ್ಲಿ ಕಾಮಗಾರಿಯ ಪ್ರಗತಿಯನ್ನು ತಾಕ್ಷಣಿಕವಾಗಿ ವರದಿ ಮಾಡುವುದನ್ನು ಸರ್ಕಾರವು ಕಡ್ಡಾಯ ಮಾಡಬೇಕು. ಇದರಿಂದಾಗಿ ಕಾಮಗಾರಿಯ ಎಲ್ಲಾ ಅಳತೆಗಳನ್ನು ಅಪ್ಲಿಕೇಶನ್‌ನಲ್ಲಿ ದಾಖಲಿಸಿದಂತಾಗುತ್ತದೆ ಮತ್ತು ಪಾರದರ್ಶಕತೆಯನ್ನು ಕಾಪಾಡಿಕೊಳ್ಳಲು ಇ–ಪಾವತಿಯನ್ನು ಸಕ್ರಿಯಗೊಳಿಸುತ್ತದೆ.

- ಕ್ಷೇತ್ರೀಯ ಪ್ರಯೋಗಶಾಲೆಗಳನ್ನು ಸ್ಥಾಪಿಸದ ಮತ್ತು ಅಗತ್ಯ ಪರೀಕ್ಷಾ ವರದಿಗಳನ್ನು ಸಲ್ಲಿಸದ ಗುತ್ತಿಗೆದಾರರ ಕಾರ್ಯಕ್ಷಮತೆ ಬ್ಯಾಂಕ್ ಖಾತರಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಸರ್ಕಾರವು ಅಗತ್ಯ

ಆದೇಶಗಳನ್ನು ನೀಡಬೇಕು ಮತ್ತು ಸಂಹಿತೆಯ ನಿಬಂಧನೆಗಳನ್ನು ಅನುಸರಿಸಲು ವಿಫಲವಾದ ಇಇಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು.

- ಗುಣಮಟ್ಟ ನಿಯಂತ್ರಣ/ಪರೀಕ್ಷಾ ವರದಿಗಳನ್ನು ಖಚಿತಪಡಿಸಿಕೊಳ್ಳದೇ ಗುತ್ತಿಗೆದಾರರಿಗೆ ಪಾವತಿ ಮಾಡುವ ಅಧಿಕಾರಿಗಳ ಮೇಲೆ ಹೊಣೆಗಾರಿಕೆಯನ್ನು ನಿಗದಿಪಡಿಸಲು ಸರ್ಕಾರವು ಆದೇಶಗಳನ್ನು ಹೊರಡಿಸಬೇಕು.

01

ಅಧ್ಯಾಯ

ಪರಿಚಯ

ಅಧ್ಯಾಯ – 1


ಪರಿಚಯ

1.1 ಹಿನ್ನೆಲೆ

ಸಂಪರ್ಕವನ್ನು ಸುಧಾರಿಸಲು ಕರ್ನಾಟಕವು 2016–21ರ ಅವಧಿಯಲ್ಲಿ ರಸ್ತೆ ಕ್ಷೇತ್ರದಲ್ಲಿ ಭಾರಿ ಹೂಡಿಕೆ ಮಾಡಿದೆ ಮತ್ತು ರಾಜ್ಯದಲ್ಲಿ ರಸ್ತೆಗಳು ಮತ್ತು ಸೇತುವೆಗಳ ನಿರ್ಮಾಣ ಮತ್ತು ನಿರ್ವಹಣೆಯ ಜವಾಬ್ದಾರಿಯನ್ನು ಲೋಕೋಪಯೋಗಿ ಇಲಾಖೆ (ಪಿಡಬ್ಲ್ಯುಡಿ) ಹೊಂದಿದೆ. ಮಾರ್ಚ್ 2021ರಲ್ಲಿದ್ದಂತೆ, ಲೋಕೋಪಯೋಗಿ ಇಲಾಖೆ ವ್ಯಾಪ್ತಿ ಯಲ್ಲಿರುವ ಪ್ರಮುಖ ರಸ್ತೆಗಳ ಜಾಲವು 29,073 ಕಿಮೀ ರಾಜ್ಯ ಹೆದ್ದಾರಿಗಳು (ಎಸ್‌ಹೆಚ್) ಮತ್ತು 55,429 ಕಿ.ಮೀ.ಗಳ ಪ್ರಮುಖ ಜಿಲ್ಲಾ ರಸ್ತೆಗಳನ್ನು (ಎಮ್‌ಡಿಆರ್) ಒಳಗೊಂಡಿದೆ. ಕರ್ನಾಟಕವು 7,458 ಕಿ.ಮೀ. ರಾಷ್ಟ್ರೀಯ ಹೆದ್ದಾರಿಗಳನ್ನು (ಎನ್‌ಹೆಚ್) ಸಹ ಹೊಂದಿದೆ, ಇದನ್ನು ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಹೆಚ್‌ಎಐ) ಮತ್ತು ಲೋಕೋಪಯೋಗಿ ಇಲಾಖೆಯ ರಾಷ್ಟ್ರೀಯ ಹೆದ್ದಾರಿ ವಿಭಾಗಗಳಿಂದ ನಿರ್ಮಿಸಲಾಗಿದೆ ಮತ್ತು ನಿರ್ವಹಿಸಲಾಗುತ್ತಿದೆ. ರಾಜ್ಯದಲ್ಲಿನ ರಸ್ತೆಗಳ ಮೂರು ಪ್ರಮುಖ ವರ್ಗೀಕರಣ ಗಳನ್ನು **ನಕ್ಷೆ–1.1ರಲ್ಲಿ** ತೋರಿಸಲಾಗಿದೆ.

ನಕ್ಷೆ–1.1: 31–3–2021ರಲ್ಲಿದ್ದಂತೆ ರಾಜ್ಯದಲ್ಲಿ ರಸ್ತೆಗಳ ವರ್ಗೀಕರಣ

(ಒಟ್ಟು ಉದ್ದಕ್ಕೆ ಎನ್‌ಹೆಚ್+ಎಸ್‌ಹೆಚ್+ಎಮ್‌ಡಿಆರ್ ಗಳ ಶೇಕಡಾವಾರು ಕಿ.ಮೀಗಳಲ್ಲಿ)



(ಆಧಾರ: ಲೋಕೋಪಯೋಗಿ ಇಲಾಖೆ ಜಾಲತಾಣ)

ಲೋಕೋಪಯೋಗಿ ಇಲಾಖೆಯು ಎರಡು ಪ್ರತ್ಯೇಕ ಯೋಜನಾ ಪ್ರಾಧಿಕಾರಗಳನ್ನು ಸ್ಥಾಪಿಸಿತು. ಅವುಗಳೆಂದರೆ 1999ರಲ್ಲಿ ಕಂಪನಿಗಳ ಕಾಯಿದೆ, 1956ರ ಅಡಿಯಲ್ಲಿ ಸಾರ್ವಜನಿಕ ಲಿಮಿಟೆಡ್ ಕಂಪನಿಯಾಗಿ ಸಂಪೂರ್ಣವಾಗಿ ಸರ್ಕಾರಿ ಸ್ವಾಮ್ಯದ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವನ್ನು (KRDCL) ಮತ್ತು 2001ರಲ್ಲಿ ಬಾಹ್ಯ ನೆರವಿನೊಂದಿಗೆ ಸುಧಾರಣಾ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಕರ್ನಾಟಕ ರಾಜ್ಯ ಹೆದ್ದಾರಿ ಸುಧಾರಣಾ ಯೋಜನೆ (KSHIP).

ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆ, 2014ರ (KPWD ಕೋಡ್) ಕಂಡಿಕೆ 128ರ ಪ್ರಕಾರ, ರಸ್ತೆಗಳ ಸಂದರ್ಭದಲ್ಲಿ, ಎಲ್ಲಾ ಕಾಮಗಾರಿಗಳನ್ನು ಕರ್ನಾಟಕ ರಸ್ತೆಗಳು ಮತ್ತು ಸೇತುವೆಗಳ ವಿಶಿಷ್ಟತೆಗಳು, ರಸ್ತೆಗಳು ಮತ್ತು ಸೇತುವೆಗಳ ಭಾರತೀಯ ರಸ್ತೆಗಳ ಕಾಂಗ್ರೆಸ್ ಕೋಡ್, ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯದ (MORTH) ಮತ್ತು ಕಾಲಕಾಲಕ್ಕೆ ತಿದ್ದುಪಡಿ ಮಾಡಲ್ಪಟ್ಟ ವಿಶಿಷ್ಟತೆಗಳು ಮತ್ತು ಭಾರತೀಯ ಮಾನದಂಡಗಳ ಬ್ಯೂರೋ, ಇವುಗಳ ಪ್ರಕಾರ ಕೈಗೊಳ್ಳಲಾಗುತ್ತದೆ.

1.1.1 ರಸ್ತೆಗಳ ಸ್ಥಿತಿ ಮತ್ತು ರಸ್ತೆ ಕಾಮಗಾರಿಗಳ ಮೇಲಿನ ವೆಚ್ಚ

2016–21ರ ಅವಧಿಯಲ್ಲಿ, ರಾಜ್ಯ ಸರ್ಕಾರವು ನಬಾರ್ಡ್[1] ನೆರವಿನಡಿಯಲ್ಲಿ ಮತ್ತು ಕೆಎಸ್‌ಹೆಚ್‌ಐಪಿ ಹಾಗು ಕೆಆರ್‌ಡಿಸಿಎಲ್‌ಗಳು ಕೈಗೊಂಡ ಬದ್ಧ ಯೋಜನೆಗಳನ್ನು ಹೊರತುಪಡಿಸಿ ರಸ್ತೆ ಸುಧಾರಣಾ[2] ಕಾಮಗಾರಿಗಳು ನವೀಕರಣಕ್ಕಾಗಿ[3] ₹17,046.97 ಕೋಟಿ ಬಂಡವಾಳ ವೆಚ್ಚವನ್ನು ಮಾಡಿತ್ತು. 2016–21ರ ಅವಧಿಯಲ್ಲಿ ಭರಿಸಿದ ಒಟ್ಟು ವೆಚ್ಚದ ವರ್ಷವಾರು ಸ್ಥಿತಿಯನ್ನು **ಕೋಷ್ಟಕ–1.1** ರಲ್ಲಿ ನೀಡಲಾಗಿದೆ:

ಕೋಷ್ಟಕ–1.1: ಎಸ್‌ಹೆಚ್ ಮತ್ತು ಎಮ್‌ಡಿಆರ್‌ಗಳ ಸುಧಾರಣೆ ಮತ್ತು ನವೀಕರಣದ ಮೇಲಿನ ವೆಚ್ಚ

(₹ ಕೋಟಿಗಳಲ್ಲಿ)

ವರ್ಷ	ಸುಧಾರಣೆ		ನವೀಕರಣ		ಒಟ್ಟು ವೆಚ್ಚ
	ಅನುದಾನ	ವೆಚ್ಚ	ಅನುದಾನ	ವೆಚ್ಚ	
2016–17	3388.41	3383.68	103.04	101.62	3485.30
2017–18	2911.37	2909.47	112.00	84.99	2994.46
2018–19	3004.50	2996.28	160.68	159.14	3155.42
2019–20	2760.03	2478.00	106.20	82.37	2560.37
2020–21	4743.50	4743.47	108.00	107.95	4851.42
ಒಟ್ಟು	**16807.81**	**16510.90**	**589.92**	**536.07**	**17046.97**

(ಆಧಾರ: ಲೋಕೋಪಯೋಗಿ ಇಲಾಖೆಯ ವಾರ್ಷಿಕ ವರದಿ)

₹17,046.97 ಕೋಟಿ ಒಟ್ಟು ವೆಚ್ಚದಲ್ಲಿ ಶೇಕಡಾ 97 ರಷ್ಟು ಹಣವನ್ನು ಅಸ್ತಿತ್ವದಲ್ಲಿರುವ ರಸ್ತೆಗಳ ಅಗಲೀಕರಣ ಮತ್ತು ಬಲವರ್ಧನೆಗೆ ಬಳಸಲಾಗಿತ್ತು ಮತ್ತು ಉಳಿದ ಶೇಕಡಾ ಮೂರರಷ್ಟು ಹಣವನ್ನು ಸಾಗಾಣಿಕೆ ರಸ್ತೆ ನವೀಕರಣಕ್ಕೆ ಬಳಸಲಾಗಿದೆ.

2016–21ರ ಅವಧಿಯಲ್ಲಿ ರಾಜ್ಯ ಹೆದ್ದಾರಿಗಳು ಮತ್ತು ಪ್ರಮುಖ ಜಿಲ್ಲಾ ರಸ್ತೆಗಳ ಅಸ್ತಿತ್ವದಲ್ಲಿರುವ ಉದ್ದದ ಸ್ಥಿತಿಯನ್ನು **ಕೋಷ್ಟಕ–1.2** ರಲ್ಲಿ ನೀಡಲಾಗಿದೆ:

ಕೋಷ್ಟಕ–1.2: ರಸ್ತೆಗಳ ವಿವಿಧ ವರ್ಗಗಳ ಸ್ಥಿತಿ (2016–21)

(ಕಿ.ಮಿ.ಗಳಲ್ಲಿ)

ರಸ್ತೆಯ ವರ್ಗ	2017	2018	2019	2020	2021
ರಾಜ್ಯ ಹೆದ್ದಾರಿಗಳು	19556	19209	19446	19468	29073
ಪ್ರಮುಖ ಜಿಲ್ಲಾ ರಸ್ತೆಗಳು	49923	49923	49553	49526	55429
ಒಟ್ಟು	69479	69132	68999	68994	84502

(ಆಧಾರ: ಸೆಪ್ಟಂಬರ್ 2021ರಲ್ಲಿದ್ದಂತೆ ವಾರ್ಷಿಕ ವರದಿ, ರಸ್ತೆ ಅಂಕಿಅಂಶಗಳು ಮತ್ತು ಪಿಡಬ್ಲ್ಯುಡಿ ಜಾಲತಾಣ)


ಟೆಂಡರ್ ಪ್ರಕ್ರಿಯೆ: ರಾಜ್ಯ ಲೋಕೋಪಯೋಗಿ ಇಲಾಖೆಯಲ್ಲಿ ಅನುಸರಿಸುವ ಟೆಂಡರ್ ಪ್ರಕ್ರಿಯೆಯ ಚಿತ್ರಾತ್ಮಕ ಪ್ರಸ್ತುತಿಯನ್ನು ಕೆಳಗೆ ನೀಡಲಾಗಿದೆ

[1] ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗಾಗಿನ ರಾಷ್ಟ್ರೀಯ ಬ್ಯಾಂಕ್


[2] ಐಆರ್‌ಸಿ 37ರ ಪ್ರಕಾರ ಬಲವರ್ಧನೆ ಮತ್ತು ಪುನರ್‌ನಿರ್ಮಾಣ

[3] IRC–81 ರ ಪ್ರಕಾರ ಸಂಚಾರಿ ತೀವ್ರತೆಗೆ ಅನುಗುಣವಾಗಿ ನಾಲ್ಕರಿಂದ ಐದು ವರ್ಷಗಳಿಗೊಮ್ಮೆ ಮೇಲ್ಮೈ ಪದರದ ಮರು ನಿರ್ಮಾಣ

ಟೆಂಡರ್ ಪ್ರಕ್ರಿಯೆಯ ಚಿತ್ರಾತ್ಮಕ ಪ್ರಸ್ತುತಿ



ಆಧಾರ: ಕೆಪಿಡಬ್ಲ್ಯುಡಿ ಸಂಹಿತೆ ಮತ್ತು ಕೆಟಿಪಿಪಿ ಅಧಿನಿಯಮದಿಂದ ಸಂಯೋಜಿಸಲಾಗಿದೆ



ಆಧಾರ: ಇಲಾಖೆಯ ಜಾಲತಾಣ

ಸರ್ಕಾರದ ಮಟ್ಟದಲ್ಲಿ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು, ಲೋಕೋಪಯೋಗಿ ಇಲಾಖೆಯ ಮುಖ್ಯಸ್ಥರಾಗಿದ್ದು, ಅವರಿಗೆ ಕಾರ್ಯದರ್ಶಿಗಳು, ಮುಖ್ಯ ಇಂಜಿನಿಯರ್‌ಗಳು (ಸಿಇ), ಸೂಪರಿಂಟೆಂಡಿಂಗ್ ಎಂಜಿನಿಯರ್‌ಗಳು (ಎಸ್‌ಇ) ಮತ್ತು ಕಾರ್ಯನಿರ್ವಾಹಕ ಎಂಜಿನಿಯರ್‌ಗಳು (ಇಇ) ನೆರವು ನೀಡುತ್ತಾರೆ. ಸಿಇಗಳು ತಮ್ಮ ವೃತ್ತಗಳಲ್ಲಿ ಇಲಾಖೆಯ ಆಡಳಿತ ನಿಯಂತ್ರಣಕ್ಕೆ ಹೊಣೆಗಾರರಾಗಿರುತ್ತಾರೆ ಮತ್ತು ವಿವರವಾದ ಅಂದಾಜುಗಳು, ತಾಂತ್ರಿಕ ಮಂಜೂರಾತಿಗಳು, ಒಪ್ಪಂದಗಳನ್ನು ಅಂತಿಮಗೊಳಿಸುವುದು, ಸಮಯ ವಿಸ್ತರಣೆಯನ್ನು ಮಂಜೂರು ಮಾಡುವುದು ಇತ್ಯಾದಿಗಳನ್ನು ನಿರ್ವಹಿಸುತ್ತಾರೆ. ಎಸ್‌ಇಗಳ ನೇತೃತ್ವದ ವಲಯಗಳು, ದರಪಟ್ಟಿಯ (ಎಸ್‌ಆರ್) ತಯಾರಿ ಮತ್ತು ಅವುಗಳ ಆವರ್ತಕ ಪರಿಷ್ಕರಣೆ, ಒಪ್ಪಂದಗಳ ಅಂತಿಮಗೊಳಿಸುವಿಕೆ, ಇತ್ಯಾದಿಗಳಿಗೆ ಹೊಣೆಗಾರರಾಗಿರುತ್ತಾರೆ. ವೃತ್ತಗಳನ್ನು ಮತ್ತೆ ವಿಭಾಗಗಳಾಗಿ ವಿಭಜಿಸಲಾಗಿದ್ದು ಅವುಗಳಿಗೆ ಇಇಗಳು ಮುಖ್ಯಸ್ಥರಾಗಿದ್ದು ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ನೇರವಾಗಿ ಜವಾಬ್ದಾರರಾಗಿರುತ್ತಾರೆ.

ಜೂನ್ 2022ರಲ್ಲಿದ್ದಂತೆ ಲೋಕೋಪಯೋಗಿ ಇಲಾಖೆಯಲ್ಲಿ ನಾಲ್ಕು ವಲಯಗಳು[4], 10 ವೃತ್ತಗಳು[5], 41 ವಿಭಾಗಗಳು (3 ಕಟ್ಟಡ ವಿಭಾಗಗಳು ಮತ್ತು ಒಂದು ವಿದ್ಯುತ್ ವಿಭಾಗ ಒಳಗೊಂಡಂತೆ) ಹಾಗೂ 204 ಉಪವಿಭಾಗಗಳಿವೆ

1.2 ಲೆಕ್ಕಪರಿಶೋಧನಾ ಉದ್ದೇಶಗಳು

ಈ ಕೆಳಗಿನವುಗಳನ್ನು ನಿರ್ಧರಿಸುವ ಉದ್ದೇಶದೊಂದಿಗೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸಲಾಯಿತು:

(i) ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ವ್ಯವಸ್ಥಿತವಾಗಿ ಯೋಜಿಸಲಾಗಿತ್ತೇ, ಆದ್ಯತೆ ನೀಡಲಾಗಿತ್ತೇ ಮತ್ತು ಯೋಜಿತ ಸಂಚಾರ ಅಗತ್ಯತೆಗಳನ್ನು ಸಾಧಿಸಲು ವಿನ್ಯಾಸಗೊಳಿಸಲಾಗಿತ್ತೇ.

(ii) ವೆಚ್ಚ ಮತ್ತು ಸಮಯ ಮೀರದೆ ನಿರ್ದಿಷ್ಟ ಗುಣಮಟ್ಟದ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಗುತ್ತಿಗೆ ನಿರ್ವಹಣೆ ಪರಿಣಾಮಕಾರಿಯಾಗಿತ್ತೇ; ಮತ್ತು

(iii) ಅಪೇಕ್ಷಿತ ಉದ್ದೇಶಗಳನ್ನು ಸಾಧಿಸಲು ಅಸ್ತಿತ್ವದಲ್ಲಿದ್ದ ಮೇಲ್ವಿಚಾರಣಾ ವ್ಯವಸ್ಥೆಯು ಸಾಕಷ್ಟು ಮತ್ತು ಪರಿಣಾಮಕಾರಿಯಾಗಿತ್ತೇ.

1.3 ಲೆಕ್ಕಪರಿಶೋಧನಾ ಮಾನದಂಡ

ಈ ಕೆಳಗಿನ ಮಾನದಂಡಗಳೊಂದಿಗೆ ಲೆಕ್ಕಪರಿಶೋಧನಾ ಉದ್ದೇಶಗಳನ್ನು ಪರೀಕ್ಷಿಸಲಾಯಿತು:

(i) ಕರ್ನಾಟಕ ಹಣಕಾಸು ಸಂಹಿತೆ, ಆಯವ್ಯಯ ಕೈಪಿಡಿ, ಲೋಕೋಪಯೋಗಿ ಇಲಾಖಾ ಸಂಹಿತೆ, ಲೋಕೋಪಯೋಗಿ ಲೆಕ್ಕಪತ್ರ ಸಂಹಿತೆ;

(ii) ಕರ್ನಾಟಕ ಸಾರ್ವಜನಿಕ ಖರೀದಿಯಲ್ಲಿ ಪಾರದರ್ಶಕತೆ ಅಧಿನಿಯಮ;

(iii) ಲೋಕೋಪಯೋಗಿ ಇಲಾಖಾ ಪ್ರಮಾಣಿತ ಟೆಂಡರ್ ದಸ್ತಾವೇಜು (2008), ದರಪಟ್ಟಿಗಳು ಮತ್ತು ಐಆರ್‌ಸಿ ವಿಶಿಷ್ಟತೆಗಳು;

(iv) ಕರ್ನಾಟಕ ರಸ್ತೆ ಅಭಿವೃದ್ಧಿ ನೀತಿ 1998 ಮತ್ತು 2009;

(v) ಆಗಿಂದ್ದಾಗ್ಗೆ ಹೊರಡಿಸಲಾದ ಸರ್ಕಾರೀ ಆದೇಶಗಳು ಮತ್ತು ಸುತ್ತೋಲೆಗಳು; ಮತ್ತು

[4] ಬೆಂಗಳೂರಿನಲ್ಲಿ ದಕ್ಷಿಣವಲಯ, ಧಾರವಾಡದಲ್ಲಿ ಉತ್ತರವಲಯ, ಕಲಬುರಗಿಯಲ್ಲಿ ಈಶಾನ್ಯ ವಲಯ ಮತ್ತು ಶಿವಮೊಗ್ಗದಲ್ಲಿ ಕೇಂದ್ರವಲಯ.

[5] ಕಟ್ಟಡ ವೃತ್ತವನ್ನು ಒಳಗೊಂಡಂತೆ ದಕ್ಷಿಣವಲಯದಲ್ಲಿ ನಾಲ್ಕು ವೃತ್ತ ಕಛೇರಿಗಳು, ಉತ್ತರವಲಯ, ಕೇಂದ್ರ ವಲಯ ಮತ್ತು ಈಶಾನ್ಯ ವಲಯ, ಇವುಗಳಡಿಯಲ್ಲಿ ಪ್ರತಿಯೊಂದರಲ್ಲೂ ಎರಡು ವೃತ್ತ ಕಛೇರಿಗಳು.

(vi) ಇತರ ರಾಜ್ಯಗಳಲ್ಲಿ, ಸಿಪಿಡಬ್ಲ್ಯುಡಿ[6], ಎನ್‌ಹೆಚ್‌ಎಐ ಮತ್ತು ಎಮ್‌ಓಆರ್‌ಟಿಹೆಚ್, ಇವುಗಳಲ್ಲಿ ಅನುಸರಿಸಲಾದ ಉತ್ತಮ ಅಭ್ಯಾಸಗಳು ಮತ್ತು ಮಾರ್ಗಸೂಚಿಗಳು

1.4 ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ

2016–17ರಿಂದ 2020–21ರವರೆಗಿನ ಅವಧಿಯನ್ನು ವ್ಯಾಪಿಸಿದಂತೆ ಆಗಸ್ಟ್ 2021ರಿಂದ ಮಾರ್ಚ್‌2022 ರವರೆಗೆ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ಮುಖ್ಯ ಇಂಜಿನಿಯರ್‌ಗಳು ಮತ್ತು ರಾಜ್ಯದಲ್ಲಿರುವ 37 ರಸ್ತೆ ಕಾಮಗಾರಿ ಸಂಬಂಧಿತ ವಿಭಾಗಗಳಲ್ಲಿ 18 ವಿಭಾಗಗಳಲ್ಲಿನ[7] ದಾಖಲೆಗಳ ಪರಿಶೀಲನೆಯ ಮೂಲಕ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸಲಾಯಿತು. ಲೋಕೋಪಯೋಗಿ ಇಲಾಖೆಯ ನಾಲ್ಕು ವಲಯಗಳಿಂದ (ದಕ್ಷಿಣ, ಉತ್ತರ, ಈಶಾನ್ಯ ಮತ್ತು ಮಧ್ಯ) 'ಬದಲಿ ಇಲ್ಲದೆ ಸರಳ ಯಾದೃಚ್ಛಿಕ ಮಾದರಿ' ವಿಧಾನವನ್ನು ಆಧರಿಸಿ ವಿಭಾಗಗಳನ್ನು ಆಯ್ಕೆ ಮಾಡಲಾಯಿತು. ಜೊತೆಗೆ, ಯೋಜನೆ ಮತ್ತು ರಸ್ತೆ ಆಸ್ತಿ ನಿರ್ವಹಣಾ ಕೇಂದ್ರವನ್ನು (ಪಿಆರ್‌ಎಎಮ್‌ಸಿ) ಆಯ್ಕೆಮಾಡಲಾಯಿತು ಏಕೆಂದರೆ ಅದು ರಸ್ತೆ ಕಾಮಗಾರಿಗಳ ಯೋಜನೆ ಮತ್ತು ಆಯವ್ಯಯದ ಹೊಣೆಗಾರಿಕೆಯನ್ನು ಹೊಂದಿತ್ತು ಹಾಗೂ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (ಎಸ್‌ಹೆಚ್‌ಡಿಪಿ) ಪ್ರಮುಖ ಕಾಮಗಾರಿಗಳನ್ನು ನಿರ್ವಹಿಸುವುದರಿಂದ ಅದನ್ನೂ ಆಯ್ಕೆ ಮಾಡಲಾಯಿತು. ಕಾರ್ಯದರ್ಶಿಯವರ ಕೋರಿಕೆಯ ಮೇರೆಗೆ, ಪಿಡಬ್ಲ್ಯೂಡಿ, ಚಿಕ್ಕಮಗಳೂರು ಮತ್ತು ಶಿರಸಿ ವಿಭಾಗಗಳನ್ನು ಸಹ ಲೆಕ್ಕಪರಿಶೋಧನೆ ಮಾಡಲಾಯಿತು.

ಲೆಕ್ಕಪರಿಶೋಧನಾ ಉದ್ದೇಶಗಳು, ಮಾನದಂಡಗಳು, ವ್ಯಾಪ್ತಿ ಮತ್ತು ವಿಧಾನಗಳನ್ನು ಕುರಿತು ಚರ್ಚಿಸಲು ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಯವರೊಂದಿಗೆ ಪ್ರವೇಶ ಸಭೆಯನ್ನು ನಡೆಸಲಾಯಿತು (ಆಗಸ್ಟ್ 2021). ಲೆಕ್ಕಪರಿಶೋಧನೆಯ ವ್ಯಾಪ್ತಿಯು ಹೊಸ ರಸ್ತೆಗಳ ನಿರ್ಮಾಣ ಮತ್ತು ಅಸ್ತಿತ್ವದಲ್ಲಿರುವ ರಸ್ತೆಗಳ ವಿಸ್ತರಣೆ, ಬಲಪಡಿಸುವಿಕೆ ಮತ್ತು ನವೀಕರಣಗಳನ್ನು ಒಳಗೊಂಡಿತ್ತು. ಕೆಆರ್‌ಡಿಸಿಎಲ್ ಮತ್ತು ಕೆಎಸ್‌ಎಚ್‌ಐಪಿ ಕಾರ್ಯಗತಗೊಳಿಸಿರುವ ಕಾಮಗಾರಿಗಳು ಮತ್ತು ರಸ್ತೆಗಳ ನಿರ್ವಹಣೆಗೆ ಸಂಬಂಧಿಸಿದ ಕಾಮಗಾರಿಗಳನ್ನು ಈ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯಲ್ಲಿ ಸೇರಿಸಿಲ್ಲ.

ಲೆಕ್ಕಪರಿಶೋಧನಾ ವಿಧಾನವು ದಾಖಲೆಗಳ ಪರಿಶೀಲನೆಯ ಮೂಲಕ ದತ್ತಾಂಶ/ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಣೆ ಮಾಡುವುದು, ಲೆಕ್ಕಪರಿಶೋಧನಾ ವಿಚಾರಣೆಗಳನ್ನು ನೀಡಿ ಉತ್ತರಗಳನ್ನು ಪಡೆಯುವುದು ಮತ್ತು ನಿವೇಶನಗಳ ಛಾಯಾಚಿತ್ರಗಳಂತಹ ಇತರ ಪುರಾವೆಗಳನ್ನು ಸಂಗ್ರಹಿಸುವುದನ್ನು ಒಳಗೊಂಡಿತ್ತು. ಆಯ್ದ 20 ಪಿಡಬ್ಲ್ಯುಡಿ ವಿಭಾಗಗಳು ಮತ್ತು ಎಸ್‌ಹೆಚ್‌ಡಿಪಿಗಳಲ್ಲಿ ₹3583.28 ಕೋಟಿ ಮೌಲ್ಯದ 499 ಗುತ್ತಿಗೆಗಳನ್ನು ಲೆಕ್ಕಪರಿಶೋಧನೆಯಲ್ಲಿ ಪರೀಕ್ಷಾ–ತನಿಖೆ ಮಾಡಲಾಯಿತು.

ಲೆಕ್ಕಪರಿಶೋಧನಾ ಆವಿಷ್ಕಾರಗಳು, ತೀರ್ಮಾನಗಳು ಮತ್ತು ಶಿಫಾರಸುಗಳನ್ನು ಚರ್ಚಿಸಲು ಲೋಕೋಪಯೋಗಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳೊಂದಿಗೆ ನಿರ್ಗಮನ ಸಭೆಯನ್ನು ನಡೆಸಲಾಯಿತು (ಏಪ್ರಿಲ್ 2022). ನಿರ್ಗಮನ ಸಭೆಯಲ್ಲಿ ನೀಡಿರುವ ಸರ್ಕಾರದ ಉತ್ತರಗಳು/ ಅಭಿಪ್ರಾಯಗಳನ್ನು ಸಂಬಂಧಿತ ಕಂಡಿಕೆಗಳಲ್ಲಿ ಅಳವಡಿಸಲಾಗಿದೆ.

1.5 ಕೃತಜ್ಞತೆ

ಈ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸುವಾಗ ವಿವಿಧ ಹಂತಗಳಲ್ಲಿ ಲೋಕೋಪಯೋಗಿ ಇಲಾಖೆಯ ಆಯ್ದ ವಿಭಾಗಗಳು, ಮುಖ್ಯ ಇಂಜಿನಿಯರ್‌ಗಳು, ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳು ಮತ್ತು ಕಾರ್ಯನಿರ್ವಾಹಕ ಇಂಜಿನಿಯರ್‌ಗಳು ನೀಡಿದ ಸಹಕಾರವನ್ನು ಲೆಕ್ಕಪರಿಶೋಧನೆಯು ಸ್ಮರಿಸುತ್ತದೆ.

[6] ಕೇಂದ್ರ ಲೋಕೋಪಯೋಗಿ ಇಲಾಖೆ.

[7] ಬೆಂಗಳೂರು, ಮೈಸೂರು, ಮಂಡ್ಯ, ಕೋಲಾರ, ರಾಮನಗರ, ತುಮಕೂರು, ಹಾಸನ, ಶಿವಮೊಗ್ಗ, ಚಿತ್ರದುರ್ಗ, ಮಂಗಳೂರು, ಧಾರವಾಡ, ಬೆಳಗಾವಿ, ಬಾಗಲಕೋಟೆ, ಚಿಕ್ಕೋಡಿ, ಕಲಬುರಗಿ, ಬೀದರ್, ರಾಯಚೂರು ಮತ್ತು ಬಳ್ಳಾರಿ



ಅಧ್ಯಾಯ

ಯೋಜನೆ ಮತ್ತು ನೀತಿ ಅನುಷ್ಠಾನ

ಅಧ್ಯಾಯ – 2

ಯೋಜನೆ ಮತ್ತು ನೀತಿ ಅನುಷ್ಠಾನ

ಯೋಜನೆ ಉದ್ದೇಶಗಳಿಗಾಗಿ ಅತ್ಯಗತ್ಯವಾದ ಪ್ರಮುಖ ರಸ್ತೆಜಾಲದ ದತ್ತಸಂಚಯವನ್ನು ಅಭಿವೃದ್ಧಿಪಡಿಸಿ ಇಂದೀಕರಿಸಲು ಪಿಡಬ್ಲ್ಯುಡಿ ವಿಫಲವಾಗಿದೆ. ಅಲ್ಲದೆ, ರಾಜ್ಯದಲ್ಲಿ ರಸ್ತೆ ಅಭಿವೃದ್ಧಿಗೆ ನಿಯತಕಾಲಿಕ ಯೋಜನೆ ಸಿದ್ಧಪಡಿಸುವ ವ್ಯವಸ್ಥೆ ಅಸ್ತಿತ್ವದಲ್ಲಿರಲಿಲ್ಲ. ರಸ್ತೆ ಕಾಮಗಾರಿಗಳಿಗೆ ಸೂಕ್ತ ಯೋಜನೆ ಹಾಗೂ ಆದ್ಯತೀಕರಣದ ಅನುಪಸ್ಥಿತಿಯಲ್ಲಿ ಕಾಮಗಾರಿಗಳನ್ನು ತಾತ್ಪೂರ್ತಿಕವಾಗಿ ಕೈಗೆತ್ತಿಕೊಳ್ಳಲಾಗುತ್ತಿತ್ತು.

ರಾಜ್ಯ ಸರ್ಕಾರವು 1998ರಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನೀತಿಯನ್ನು ರೂಪಿಸಿತು ಮತ್ತು ರಸ್ತೆ ವಲಯದಲ್ಲಿ ಕ್ರಮಬದ್ಧ, ಪರಿಣಾಮಕಾರಿ ಮತ್ತು ನಿಯಂತ್ರಿತ ಅಭಿವೃದ್ಧಿಗಾಗಿ ಸಂಸ್ಥೆಗಳನ್ನು ಬಲಪಡಿಸಲು ಮತ್ತು ಆಸ್ತಿಗಳ ನಿರ್ವಹಣೆಗಾಗಿ ಅದನ್ನು 2010ರಲ್ಲಿ ಕರ್ನಾಟಕ ರಸ್ತೆ ವಲಯದ ನೀತಿ, 2009 (ನೀತಿ) ಎಂದು ಪರಿಷ್ಕರಿಸಲಾಯಿತು.

2.1 ಪ್ರಮುಖ ರಸ್ತೆ ಜಾಲದ ಅಭಿವೃದ್ಧಿಯಲ್ಲಿ ನಿಧಾನದ ಪ್ರಗತಿ[1] (ಸಿಆರ್‌ಎನ್)

ಎಲ್ಲಾ ರಸ್ತೆ ವಲಯಗಳ ಯೋಜನೆ ಮತ್ತು ನಿಯಂತ್ರಕ ಕಾರ್ಯಗಳನ್ನು ಮೇಲ್ವಿಚಾರಣೆ ಮಾಡಲು ಎರಡು–ಲೇನ್‌ಗಳ ಕನಿಷ್ಠ ಅಗಲ ಮತ್ತು ಏಕ ಪ್ರಾಧಿಕಾರದ ರಚನೆಯೊಂದಿಗೆ ಐಆರ್‌ಸಿ ಮಾನದಂಡಗಳ ಪ್ರಕಾರ ರಾಷ್ಟ್ರೀಯ ಹೆದ್ದಾರಿಗಳು, ರಾಜ್ಯ ಹೆದ್ದಾರಿಗಳು ಮತ್ತು ಪ್ರಮುಖ ಜಿಲ್ಲಾ ರಸ್ತೆಗಳ ಪ್ರಮುಖ ರಸ್ತೆ ಜಾಲವನ್ನು ಅಭಿವೃದ್ಧಿಪಡಿಸಲು ನೀತಿಯು ಆಲೋಚಿಸಿತ್ತು. ಸದರಿ ಪ್ರಾಧಿಕಾರದ ರಚನೆಯಾದ ನಂತರ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ತಾತ್ಪೂರ್ತಿಕವಾಗಿ ಗುರುತಿಸುವ ಅಸ್ತಿತ್ವದಲ್ಲಿರುವ ಕಾರ್ಯವಿಧಾನವನ್ನು ತಾಂತ್ರಿಕ/ಇಂಜಿನಿಯರಿಂಗ್ ಮತ್ತು ಆರ್ಥಿಕ ಕಾರ್ಯವಿಧಾನಗಳಿಗೆ ಅನುಗುಣವಾಗಿ ಮಾರ್ಪಡಿಸಬೇಕು.

ಅಂತೆಯೇ, ನೀತಿ ಅಭಿವೃದ್ಧಿ ಮತ್ತು ಯೋಜನೆ, ರಸ್ತೆ ಸುರಕ್ಷತೆ, ಮಾಹಿತಿ ತಂತ್ರಜ್ಞಾನ ಮತ್ತು ತರಬೇತಿ ಬೆಂಬಲಕ್ಕಾಗಿ ಸಂಪೂರ್ಣ ಲೋಕೋಪಯೋಗಿ ಇಲಾಖೆಯ ಕೇಂದ್ರ ಕಚೇರಿಯಾಗಿ ಪಿಆರ್‌ಎಎಮ್‌ಸಿಯನ್ನು ಸ್ಥಾಪಿಸಲಾಯಿತು (ಆಗಸ್ಟ್ 2012). ಮುಂದುವರೆದು, ಸಿಆರ್‌ಎನ್ ದತ್ತಸಂಚಯವನ್ನು ಸೆರೆಹಿಡಿಯಲು ಲೋಕೋಪಯೋಗಿ ಇಲಾಖೆಯು ಕರ್ನಾಟಕ ರಸ್ತೆ ಆಸ್ತಿ ನಿರ್ವಹಣಾ ವ್ಯವಸ್ಥೆಯನ್ನು (KRAMS) ಅಭಿವೃದ್ಧಿಪಡಿಸಿತು. ತಾಂತ್ರಿಕ/ಎಂಜಿನಿಯರಿಂಗ್ ಮತ್ತು ಆರ್ಥಿಕ ಅಗತ್ಯತೆಗಳ ಆಧಾರದ ಮೇಲೆ ವ್ಯವಸ್ಥಿತ ಪ್ರಕ್ರಿಯೆಯಲ್ಲಿ ರಸ್ತೆ ಜಾಲದ ನಿರ್ವಹಣೆ ಮತ್ತು ಅಭಿವೃದ್ಧಿ ಅಗತ್ಯತೆಗಳನ್ನು ಗುರುತಿಸಲು ಕೆಆರ್‌ಎಎಮ್‌ಎಸ್ ನಲ್ಲಿ ಸಮಗ್ರ ರಸ್ತೆ ದತ್ತಸಂಚಯವು ಅತ್ಯಗತ್ಯವಾಗಿತ್ತು.

ಕ್ರಮವಾಗಿ 29,073 ಕಿಮೀಗಳು ಮತ್ತು 55,429 ಕಿಮೀಗಳ ರಾಜ್ಯ ಹೆದ್ದಾರಿಗಳು ಮತ್ತು ಪ್ರಮುಖ ಜಿಲ್ಲಾ ರಸ್ತೆಗಳ ಒಟ್ಟು ರಸ್ತೆ ಉದ್ದಕ್ಕೆ ಪ್ರತಿಯಾಗಿ ಫೆಬ್ರವರಿ 2020ರಲ್ಲಿದ್ದಂತೆ ರಾಜ್ಯ ಹೆದ್ದಾರಿಗಳ ಸಿಆರ್‌ಎನ್ 18,661 ಕಿಮೀ ಮತ್ತು ಪ್ರಮುಖ ಜಿಲ್ಲಾ ರಸ್ತೆಗಳ ಸಿಆರ್‌ಎನ್ 9,603 ಕಿಮೀ ಇರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದರೆ, ಫೆಬ್ರವರಿ 2022ರಲ್ಲಿದ್ದಂತೆ ಕೆಆರ್‌ಎಎಮ್‌ಎಸ್ 16,210 ಕಿಮೀಗಳ ರಾಜ್ಯ ಹೆದ್ದಾರಿಗಳು ಮತ್ತು 1,272 ಕಿಮೀಗಳ ಪ್ರಮುಖ ಜಿಲ್ಲಾ ರಸ್ತೆಗಳಿಗೆ ಸಂಬಂಧಿಸಿದ ದತ್ತಸಂಚಯವನ್ನು ಮಾತ್ರ ಹೊಂದಿತ್ತು. ಅಲ್ಲದೆ, ಮಾರ್ಚ್ 2021 ರಲ್ಲಿದ್ದಂತೆ, ಕೇವಲ ಶೇಕಡಾ 26ರಷ್ಟು ರಾಜ್ಯ ಹೆದ್ದಾರಿಗಳು ಎರಡು ಲೇನ್ ಅಥವಾ

[1] ಸಿಆರ್‌ಎನ್: ರಾಜ್ಯವೊಂದರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಬೆಂಬಲಿಸಲು ಅಗತ್ಯವಿರುವ ಕನಿಷ್ಠ ರಸ್ತೆ ಜಾಲ

ಅದಕ್ಕಿಂತ ಹೆಚ್ಚಿನ ಅಗಲವನ್ನು ಹೊಂದಿದ್ದರೆ ಶೇಕಡಾ 79ರಷ್ಟು ಪ್ರಮುಖ ಜಿಲ್ಲಾ ರಸ್ತೆಗಳು ಒಂದೇ ಲೇನ್ ಅಗಲವನ್ನು ಮಾತ್ರ ಹೊಂದಿದ್ದವು.

ರಸ್ತೆಗಳ ಸಂಪೂರ್ಣ ಉದ್ದದ ದತ್ತಸಂಚಯವನ್ನು ಸೆರೆಹಿಡಿಯದ ಕಾರಣ, PRAMC 2016–21ರ ಅವಧಿಯಲ್ಲಿ ಆಯವ್ಯಯ ಪ್ರಸ್ತಾವನೆಗಳ ತಯಾರಿಕೆಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಐತಿಹಾಸಿಕ ದತ್ತಾಂಶವನ್ನು ಅವಲಂಬಿಸಬೇಕಿತ್ತು ಮತ್ತು ತಾತ್ಪೂರ್ತಿಕ ರೀತಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಗುರುತಿಸುವ ಅಸ್ತಿತ್ವದಲ್ಲಿರುವ ಕಾರ್ಯವಿಧಾನವು ಇನ್ನೂ ಚಾಲ್ತಿಯಲ್ಲಿದ್ದಿತು. ಅಲ್ಲದೆ, ಸುರಕ್ಷಿತ ಮತ್ತು ಸುಗಮ ಸಂಚಾರವನ್ನು ಖಚಿತಪಡಿಸಿಕೊಳ್ಳಲು ರಸ್ತೆಗಳ ನಿಯತಕಾಲಿಕ ನಿರ್ವಹಣೆಯ ಮೇಲೆ ದತ್ತಸಂಚಯದ ಅನುಪಸ್ಥಿತಿಯು ಪ್ರತಿಕೂಲ ಪರಿಣಾಮ ಬೀರುತ್ತದೆ.

ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದ ನಂತರ ಪ್ರಮುಖ ರಸ್ತೆ ಜಾಲಕ್ಕೆ ಸಂಬಂಧಿಸಿದ ರಸ್ತೆ ದತ್ತಾಂಶವನ್ನು ಪಿಆರ್ಎಎಮ್ಸಿ ಸೆರೆಹಿಡಿಯುವ ಪ್ರಕ್ರಿಯೆಯಲ್ಲಿದೆ ಮತ್ತು ಪ್ರಮುಖ ರಸ್ತೆ ಜಾಲವಲ್ಲದ ರಸ್ತೆಗಳ ದತ್ತಾಂಶವನ್ನು ಸೆರೆಹಿಡಿಯಲು ಕೆಎಸ್ಹೆಚ್ಐಪಿ ಮೂಲಕ ಪ್ರತ್ಯೇಕ ಏಜೆನ್ಸಿಯನ್ನು ನೇಮಿಸಲಾಗುತ್ತಿದೆ ಎಂದು ನಿರ್ಗಮನ ಸಭೆಯಲ್ಲಿ ಸರ್ಕಾರವು ತಿಳಿಸಿತು.

ಶಿಫಾರಸು–1: ಸಂಪೂರ್ಣ ರಸ್ತೆ ದತ್ತಾಂಶವನ್ನು KRAMSಗೆ ರವಾನಿಸಿ ನಿಯತಕಾಲಿಕವಾಗಿ ಇಂದೀಕರಿಸುವುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು.

2.2 ರಸ್ತೆ ಮಾಹಿತಿ ವ್ಯವಸ್ಥೆ

ಕೆಪಿಡಬ್ಲ್ಯೂಡಿ ಸಂಹಿತೆಯ ಕಂಡಿಕೆ–40ರ ಪ್ರಕಾರ, ವರ್ಗೀಕರಣ, ಉದ್ದ, ಮಾರ್ಗದ ಅಗಲ, ರಚನೆಯ ಅಗಲ, ಸಾಗಾಣಿಕೆ ಮಾರ್ಗದ ಅಗಲ, ಪಾದಚಾರಿ ಮಾರ್ಗ, ಅಡ್ಡ ಒಳಚರಂಡಿಯ ವಿವರಗಳು, ಸೇತುವೆಗಳು, ಸಂಬಂಧಪಟ್ಟ ಅಧಿಕಾರಿಗಳ ವ್ಯಾಪ್ತಿಯಲ್ಲಿ ಈ ಹಿಂದೆ ಮಾಡಿದ ಪಾದಚಾರಿ ಮಾರ್ಗದ ಮರುನಿರ್ಮಾಣ/ಬಲವರ್ದನೆಯ ವರ್ಷ, ಇತ್ಯಾದಿಗಳನ್ನು ಒಳಗೊಂಡಿರುವ ರಸ್ತೆ ಇತಿಹಾಸವನ್ನು ತಯಾರಿಸಬೇಕು. ಈ ದತ್ತಾಂಶವನ್ನು ರಸ್ತೆ ಮಾಹಿತಿ ವ್ಯವಸ್ಥೆಯಲ್ಲಿ (RIS) ಸೆರೆಹಿಡಿಯಬೇಕು ಮತ್ತು ಸಂಬಂಧಪಟ್ಟ ವಿಭಾಗಗಳು ಮಾಸಿಕವಾಗಿ ಇಂದೀಕರಿಸಿ ಪರಿಶೀಲಿಸಬೇಕು. ಮಂಜೂರಾದ ತಕ್ಷಣ ಕಾಮಗಾರಿಯ ವಿವರಗಳನ್ನು ಇಲಾಖೆಯ ಜಾಲತಾಣದಲ್ಲಿ ಸೇರಿಸಬೇಕು. ಈ ಇಂದೀಕರಣದ ಪ್ರಕ್ರಿಯೆಯನ್ನು ಸಂಬಂಧಪಟ್ಟ ಸೂಪರಿಂಟೆಂಡಿಂಗ್ ಇಂಜಿನಿಯರ್ ಮತ್ತು ಮುಖ್ಯ ಇಂಜಿನಿಯರ್ಗಳು ಅನುಕ್ರಮವಾಗಿ ಮೇಲ್ವಿಚಾರಣೆ ಮಾಡಬೇಕು.

ಇದಲ್ಲದೆ, ಆರ್ಒಎಮ್ಡಿಎಎಸ್[2] ಅಥವಾ ಯಾವುದೇ ಇತರ ವಿಧಾನದಿಂದ ಸಂಗ್ರಹಿಸಲಾದ ರಸ್ತೆಯ ಸ್ಥಿತಿಗೆ (ಅಂತರರಾಷ್ಟ್ರೀಯ ಒರಟುತನ ಸೂಚ್ಯಂಕ[3] ಮತ್ತು ದೃಶ್ಯ ಪಾದಚಾರಿ ಸ್ಥಿತಿ) ಸಂಬಂಧಿಸಿದ ದತ್ತಾಂಶವನ್ನು ಸಂಬಂಧಿಸಿದ ಗುಣಮಟ್ಟ ಭರವಸೆ ವಿಭಾಗಗಳಿಂದ ನಿಯಮಿತವಾಗಿ ಆರ್ಐಎಸ್ಗೆ ಇಂದೀಕರಿಸಲಾಗುತ್ತದೆ.

2016–21ರ ಅವಧಿಯಲ್ಲಿ ಯಾವುದೇ ಇಇಗಳು ಸಂಹಿತೆಯ ನಿಬಂಧನೆಗಳನ್ನು ಅನುಸರಿಸದಿರುವುದನ್ನು ಮತ್ತು ರಸ್ತೆ ಮತ್ತು ರಸ್ತೆ ಸ್ಥಿತಿಯ ಬಗ್ಗೆ ಅಗತ್ಯವಿರುವ ಮಾಹಿತಿಯನ್ನು ಇಇಗಳು ಇಲಾಖೆಯ ವೆಬ್ಸೈಟ್ಗೆ ಅಪ್ಲೋಡ್ ಮಾಡದಿರುವುದನ್ನು ಸಿಇಗಳು ಮತ್ತು ಇಲಾಖಾ ಜಾಲತಾಣದ ದಾಖಲೆಗಳ ಪರೀಕ್ಷಾ–ತನಿಖೆಯಲ್ಲಿ ಲೆಕ್ಕಪರಿಶೋಧನೆಯು ಗಮನಿಸಿತು. ಅಲ್ಲದೆ, ಇಲಾಖಾ ಸಂಹಿತೆಯ ನಿಬಂಧನೆಗಳನ್ನು

[2] ಆಸ್ತಿ ಮತ್ತು ಪಾದಚಾರಿ ಮಾರ್ಗದ ಮಾಹಿತಿಯನ್ನು ಸಂಗ್ರಹಿಸಲು ರೋಡ್ ಮೆಷರ್ಮೆಂಟ್ ಡಾಟಾ ಅಕ್ವಿಸಿಷನ್ ಸಿಸ್ಟಮ್ (ಆರ್ಒಎಮ್ಡಿಎಎಸ್) ಅನ್ನು ವಾಹನದ ಮೇಲೆ ಅಳವಡಿಸಲಾಗಿದೆ.

[3] ಇದು ರಸ್ತೆಯ ಪ್ರತಿ ಯುನಿಟ್ ಸಮತಲ ಉದ್ದಕ್ಕೆ ದಾಖಲಿಸಲಾದ ಪಾದಚಾರಿ ಮೇಲ್ಮೈಯ ಲಂಬವಾದ ವಿರೂಪತೆಯ ಸಂಚಿತ ಅಳತೆಯಾಗಿದೆ.

ಅನುಸರಿಸಲಾಗುತ್ತಿದೆ ಎಂಬುದನ್ನು ಖಚಿತ ಪಡಿಸಿಕೊಳ್ಳಲು ಸಂಬಂಧಪಟ್ಟ ಸೂಪರಿಂಟೆಂಡಿಂಗ್ ಎಂಜಿನಿಯರ್‌ಗಳು ಮತ್ತು ವಲಯ ಮುಖ್ಯ ಎಂಜಿನಿಯರ್‌ಗಳು ಸಹ ವಿಫಲರಾಗಿದ್ದರು.

ವಿಭಾಗಗಳ ಮೂಲಕ ಆರ್‌ಐಎಸ್‌ನಲ್ಲಿ ದತ್ತಾಂಶವನ್ನು ಇಂದೀಕರಿಸುವುದನ್ನು ಖಚಿತಪಡಿಸಿಕೊಳ್ಳಲಾಗುತ್ತದೆ ಎಂದು ಸರ್ಕಾರವು (ಆಗಸ್ಟ್ 2022) ತಿಳಿಸಿತು.

2.3 ಯೋಜನೆಯ ಅನುಪಸ್ಥಿತಿ

ಭವಿಷ್ಯದ ಅಗತ್ಯತೆ, ಸಂಚಾರ ದಟ್ಟಣೆಯ ಬೆಳವಣಿಗೆ ಮತ್ತು ವಿವಿಧ ವರ್ಗಗಳ ರಸ್ತೆಗಳ ಅಸ್ತಿತ್ವದಲ್ಲಿರುವ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ರಸ್ತೆ ಮೂಲಸೌಕರ್ಯಗಳ ತ್ವರಿತ ಅಭಿವೃದ್ಧಿಗೆ ಮತ್ತು ಎಲ್ಲಾ ವಾಸಸ್ಥಳಗಳಿಗೆ ಸಂಪರ್ಕವನ್ನು ಒದಗಿಸಲು ರಸ್ತೆ ಜಾಲದ ವಿಸ್ತರಣೆ ಮತ್ತು ಉನ್ನತೀಕರಣಕ್ಕೆ ಸಮಗ್ರ ಯೋಜನೆ ಅತ್ಯಗತ್ಯವಾಗಿದೆ.

ಆದರೆ, 2016–21ರ ಅವಧಿಯಲ್ಲಿ ರಸ್ತೆ ಅಭಿವೃದ್ಧಿಗೆ ಲೋಕೋಪಯೋಗಿ ಇಲಾಖೆಯಲ್ಲಿ ವಾರ್ಷಿಕ ಯೋಜನೆಗಳು, ಪಂಚವಾರ್ಷಿಕ ಯೋಜನೆಗಳು, ಇತ್ಯಾದಿಗಳಂತಹ ಯಾವುದೇ ಆವರ್ತಕ ಯೋಜನೆಗಳು ಲೆಕ್ಕಪರಿಶೋಧನೆಗೆ ಕಂಡುಬರಲಿಲ್ಲ. ಯೋಜನೆಯ ಪ್ರಸ್ತಾವನೆಗಳನ್ನು ಬೆಂಬಲಿಸಲು ರಸ್ತೆಗಳ ಆದ್ಯತೀಕರಣವನ್ನು ಕುರಿತು ಯಾವುದೇ ಅಧ್ಯಯನವನ್ನು ನಡೆಸದಿರುವುದನ್ನು ಅಥವಾ ಮೂರನೇ ವ್ಯಕ್ತಿಯ[4] ಮೂಲಕ ಸಂಚಾರ ಸಮೀಕ್ಷೆಗಳನ್ನು ನಡೆಸದಿರುವುದನ್ನು ಗಮನಿಸಲಾಯಿತು. ವ್ಯವಸ್ಥಿತ ಮತ್ತು ವಸ್ತುನಿಷ್ಠ ಯೋಜನೆಗೆ ಅನುಕೂಲವಾಗುವಂತೆ ಇಲಾಖೆಯೂ ಸಹ ರಸ್ತೆಗಳ ಸಂಪೂರ್ಣ ದತ್ತಸಂಚಯವನ್ನು ಹೊಂದಿರಲಿಲ್ಲ.

ಕೇರಳ[5] ಸರ್ಕಾರದ ಕಾಮಗಾರಿ ಕೈಪಿಡಿಯು ರಸ್ತೆಗಳ ನಿರ್ಮಾಣಕ್ಕಾಗಿ 20 ವರ್ಷಗಳ ಮಾಸ್ಟರ್ ಪ್ಲಾನ್, 5 ವರ್ಷದ ಯೋಜನೆ ಮತ್ತು ವಾರ್ಷಿಕ ಯೋಜನೆಗಳನ್ನು ಸಿದ್ಧಪಡಿಸುವ ನಿಬಂಧನೆಗಳನ್ನು ನಿರ್ದಿಷ್ಟವಾಗಿ ಒಳಗೊಂಡಿತ್ತು ಎಂಬುದನ್ನು ತಿಳಿಸುವುದು ಇಲ್ಲಿ ಸೂಕ್ತವಾಗಿದೆ.

ಈ ಎಲ್ಲ ವಿಷಯಗಳನ್ನು ನಿರ್ಗಮನ ಸಭೆಯಲ್ಲಿ (ಏಪ್ರಿಲ್ 2022) ಸರ್ಕಾರದ ಗಮನಕ್ಕೆ ತಂದ ನಂತರ ನೀತಿ ಉದ್ದೇಶಗಳ ಅನುಷ್ಠಾನವು ಪ್ರಗತಿಯಲ್ಲಿದೆ ಎಂದು ಸರ್ಕಾರವು ತಿಳಿಸಿತು (ಆಗಸ್ಟ್ 2022).

ಶಿಫಾರಸು–2: ಕಾರ್ಯನೀತಿ ಉದ್ದೇಶಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ರಸ್ತೆ ಅಭಿವೃದ್ಧಿಗೆ ಸಮಗ್ರ ವಾರ್ಷಿಕ ಮತ್ತು ಪಂಚವಾರ್ಷಿಕ ಯೋಜನೆಗಳನ್ನು ಸಿದ್ಧಪಡಿಸುವುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು.

[4] 10 ವರ್ಷಗಳ ಅವಧಿಗೆ ಪ್ರಕ್ಷೇಪಿತ ಸಂಚಾರ ದಟ್ಟಣೆಯು ಒಂದು ಎಮ್‌ಎಸ್‌ಎ ಅಥವಾ ಅದಕ್ಕಿಂತ ಹೆಚ್ಚಾಗಿರುವ ಎಲ್ಲಾ ರಸ್ತೆ ಪ್ರಕರಣದಲ್ಲಿ ಸಂದರ್ಭದಲ್ಲಿ ಕಡ್ಡಾಯವಾಗಿ ಮೂರನೇ ವ್ಯಕ್ತಿಯ ಮೂಲಕ ಸಂಚಾರ ಸಮೀಕ್ಷೆಯನ್ನು ಕೈಗೊಳ್ಳಬೇಕು ಎಂದು 2015ರ ಐಆರ್‌ಸಿ ಎಸ್‌ಪಿ 72ರ ಕಂಡಿಕೆ–3.4.1 ನಿಗದಿಪಡಿಸುತ್ತದೆ

[5] ಕೇರಳ ಲೋಕೋಪಯೋಗಿ ಇಲಾಖಾ ಕೈಪಿಡಿ, 2021ರ ಕಂಡಿಕೆ 702.

03

ಅಧ್ಯಾಯ

ವೆಚ್ಚ ಅಂದಾಜು ಮತ್ತು ಕಾಮಗಾರಿಗಳ ಮಂಜೂರಾತಿ

ಅಧ್ಯಾಯ–3


ವೆಚ್ಚ ಅಂದಾಜು ಮತ್ತು ಕಾಮಗಾರಿಗಳ ಮಂಜೂರಾತಿ

ಈ ಅಧ್ಯಾಯವು ಅಸ್ತಿತ್ವದಲ್ಲಿರುವ ನಿಯಮಗಳು ಮತ್ತು ಮಾನದಂಡಗಳಿಗೆ ಅನುಗುಣವಾಗಿ ವೆಚ್ಚ ಅಂದಾಜುಗಳು ಮತ್ತು ಮಂಜೂರಾತಿಗಳ ತಯಾರಿಕೆಗೆ ಸಂಬಂಧಿಸಿದೆ. ಪ್ರಾಥಮಿಕ ಮತ್ತು ವಿವರವಾದ ಅಂದಾಜುಗಳನ್ನು ತಯಾರಿಸಲು ಮತ್ತು ತಾಂತ್ರಿಕ ಮಂಜೂರಾತಿಗೆ ಹೊಣೆಗಾರರಾಗಿರುವ ವಿಭಾಗೀಯ ಅಧಿಕಾರಿಗಳು ಹಾಗೂ ಎಸ್ಇ/ಸಿಇಗಳು ರಸ್ತೆಯ ಹೊರಪದರವನ್ನು ವಿನ್ಯಾಸಗೊಳಿಸಲು ಮತ್ತು ಅಂದಾಜುಗಳನ್ನು ತಯಾರಿಸಲು ಐಆರ್ಸಿ ಮಾನದಂಡಗಳಿಗೆ ಬದ್ಧವಾಗಿರಲಿಲ್ಲ. ಸಂಚಾರ ದಟ್ಟಣೆ, ಮಣ್ಣು ಪರೀಕ್ಷೆ ಮತ್ತಿತರ ಅಗತ್ಯ ಪರೀಕ್ಷೆಗಳನ್ನು ನಡೆಸಿರಲಿಲ್ಲ. ತತ್ಪರಿಣಾಮವಾಗಿ, ವೆಚ್ಚದ ಮಿತಿಯನ್ನು ಮೀರಿದ ಅಂದಾಜು, ನಂತರದ ಹಂತಗಳಲ್ಲಿ ಕಾಮಗಾರಿಗಳ ವ್ಯಾಪ್ತಿಯಲ್ಲಿ ಬದಲಾವಣೆಗಳು ಮತ್ತು ಕಳಪೆ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಯ ಅಪಾಯವನ್ನು ತಳ್ಳಿಹಾಕಲಾಗುವುದಿಲ್ಲ. ಅಂದಾಜುಗಳನ್ನು ತಯಾರಿಸಿದ ವಿಭಾಗೀಯ ಪ್ರಾಧಿಕಾರಗಳು ಮತ್ತು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಗಳನ್ನು ನೀಡಿದ ಆಡಳಿತಾತ್ಮಕ ಪ್ರಾಧಿಕಾರಿಗಳು ರಾಜ್ಯದಲ್ಲಿ ರಸ್ತೆ ಯೋಜನೆ ಕಾಮಗಾರಿಗಳಲ್ಲಿ ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ನಿಯಮಗಳು ಮತ್ತು ಸೂಚನೆಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ವಿಫಲರಾಗಿದ್ದರು. ರಸ್ತೆ ಸುರಕ್ಷತಾ ಲೆಕ್ಕಪರಿಶೋಧನೆ ನಡೆಸಲು ಮತ್ತು ರಾಜ್ಯದ ರಸ್ತೆಗಳನ್ನು ಸುರಕ್ಷಿತವಾಗಿಸಲು ಸೂಕ್ತ ಪ್ರಾಮುಖ್ಯತೆಯನ್ನು ನೀಡಿರಲಿಲ್ಲ.

ವೆಚ್ಚದ ಅಂದಾಜುಗಳನ್ನು ಸಿದ್ಧಪಡಿಸುವುದು ಮತ್ತು ಮಂಜೂರಾತಿ ನೀಡುವುದು ಒಟ್ಟು ಯೋಜನಾ ವೆಚ್ಚ, ಕಾರ್ಯಗತಗೊಳಿಸಿದ ಕಾಮಗಾರಿಗಳ ಗುಣಮಟ್ಟ ಮತ್ತು ರಸ್ತೆ ಕಾಮಗಾರಿಗಳನ್ನು ಪೂರ್ಣಗೊಳಿಸುವ ಸಮಯದ ಮೇಲೆ ನೇರವಾದ ಪ್ರಭಾವವನ್ನು ಹೊಂದಿದೆ. ವೆಚ್ಚದ ಅಂದಾಜುಗಳನ್ನು ತಯಾರಿಸುವಲ್ಲಿ ನಿಗದಿಪಡಿಸಿದ ನಿಯಮಗಳು, ಮಾನದಂಡಗಳು ಮತ್ತು ನಿಬಂಧನೆಗಳನ್ನು ಅನುಸರಿಸುವುದು ಮತ್ತು ತಾಂತ್ರಿಕ ನಿರ್ಬಂಧಗಳ ಪ್ರಕಾರ ಕಟ್ಟುನಿಟ್ಟಾಗಿ ಬದ್ಧವಾಗಿರುವುದು ಅಗತ್ಯವಾಗಿದೆ.

ರಸ್ತೆಯ ಸಂಯೋಜನೆ:

ಕೆಳಗಿನ ಚಿತ್ರದಲ್ಲಿ ವಿವರಿಸಿದಂತೆ ರಸ್ತೆಯ ಅಡ್ಡ ವಿಭಾಗವು ಉಪ–ದರ್ಜೆ, ಉಪ–ಬೇಸ್, ಬೇಸ್, ಮೇಲ್ಮೈ, ಭುಜ ಮುಂತಾದ ವಿವಿಧ ಪದರಗಳಿಂದ ಕೂಡಿದೆ.



- **ಸಬ್–ಗ್ರೇಡ್:** ಭೂಮಿಯ ಕಾಮಗಾರಿ ಪೂರ್ಣಗೊಂಡ ನಂತರ ಸಂಪೂರ್ಣ ರಸ್ತೆಯ ರಚನೆಯ ಮೇಲೆ ಅದರ ಅಂತಿಮ ಆಕಾರದಲ್ಲಿ ನೈಸರ್ಗಿಕ ಭೂಮಿಯಾಗಿದೆ
- **ಸಬ್–ಬೇಸ್:** ಒಳಚರಂಡಿ ಮತ್ತು ಫಿಲ್ಟರ್ ಪದರವಾಗಿ ಕಾರ್ಯನಿರ್ವಹಿಸಲು ಇದನ್ನು ಸಿದ್ಧಪಡಿಸಿದ ಉಪ ದರ್ಜೆಯ ಮೇಲೆ ಹಾಕಲಾಗುತ್ತದೆ.
- **ಬೇಸ್:** ಉಪ–ಬೇಸ್/ಉಪ–ದರ್ಜೆಯ ಮೇಲೆ ನಿಂತಿರುವ ನಿರ್ಮಾಣದ ಒಂದು ಭಾಗ. ಇದು ಮೇಲ್ಮೈ ಪದರದಿಂದ ಲೋಡ್ ಅನ್ನು ಹೀರಿಕೊಳ್ಳುತ್ತದೆ ಮತ್ತು ಹಾಗೇ ಉಳಿಯಲು ಅವುಗಳನ್ನು ಬೆಂಬಲಿಸುತ್ತದೆ.
- **ಮೇಲ್ಮೈ:** ವಾಹನಗಳು ಚಲಿಸುವ ರಸ್ತೆಯ ಮೇಲಿನ ಪದರ.
- **ಭುಜ:** ಪರಸ್ಪರ ದಾಟುವಾಗ ಸಾಂದರ್ಭಿಕವಾಗಿ ವಾಹನಗಳು ಹಾದುಹೋಗಬಹುದಾದ ಸಾಗಾಣಿಕೆ ಮಾರ್ಗದ ಅಂಚಿನ ಆಚೆಗಿನ ಭಾಗ.

ರಾಜ್ಯ ಲೋಕೋಪಯೋಗಿ ಇಲಾಖೆಯು ಎರಡು ರೀತಿಯ ರಸ್ತೆ ಸುಧಾರಣಾ ಕಾಮಗಾರಿಗಳನ್ನು ಕೈಗೊಳ್ಳುತ್ತದೆ, ಅವುಗಳೆಂದರೆ, ಪುನರ್‌ನಿರ್ಮಾಣ (ಸುಧಾರಣೆಗಳು) ಮತ್ತು ನವೀಕರಣಗಳು. ಪುನರ್ ನಿರ್ಮಾಣ ಕಾರ್ಯಗಳು ಒಂದು ನಿರ್ದಿಷ್ಟ ಅವಧಿಯಲ್ಲಿ ಹೆಚ್ಚಿದ ಸಂಚಾರ ದಟ್ಟಣೆಯನ್ನು ಪೂರೈಸಲು ಸಬ್–ಗ್ರೇಡ್, ಸಬ್–ಬೇಸ್ ಮತ್ತು ಬೇಸ್ ಕೋರ್ಸ್‌ಅನ್ನು ಒದಗಿಸುವುದನ್ನು ಒಳಗೊಂಡಿರುತ್ತದೆ. ನವೀಕರಣವು ಅದರ ಆರಂಭಿಕ ಉದ್ದೇಶವನ್ನು ಪೂರೈಸಿದ ನಂತರ ಅಸ್ತಿತ್ವದಲ್ಲಿರುವ ಬಿಟುಮಿನಸ್ ಪಾದಚಾರಿ ಮಾರ್ಗವನ್ನು ನವೀಕರಿಸಲು ಹೊಸ ಬಿಟುಮಿನಸ್ ಪದರವನ್ನು ಹಾಕುವುದನ್ನು ಒಳಗೊಂಡಿರುತ್ತದೆ.

ಆದರೆ, ಲೆಕ್ಕಪರಿಶೋಧನೆಯು ವೆಚ್ಚದ ಅಂದಾಜಿನ ತಯಾರಿಕೆ ಮತ್ತು ತಾಂತ್ರಿಕ ಮಂಜೂರಾತಿಗಳ ವಿತರಣೆಯಲ್ಲಿ ಗಂಭೀರ ನ್ಯೂನತೆಗಳನ್ನು ಹಾಗೂ ನಂತರದ ಕಂಡಿಕೆಗಳಲ್ಲಿ ವಿವರಿಸಿದಂತೆ ಆಂತರಿಕ ನಿಯಂತ್ರಣ ಕಾರ್ಯವಿಧಾನ ಮತ್ತು ಮೇಲ್ವಿಚಾರಣೆಯಲ್ಲಿ ದೌರ್ಬಲ್ಯಗಳನ್ನು ಗಮನಿಸಿತು.

3.1 ರಸ್ತೆ ಅಂದಾಜುಗಳ ತಯಾರಿಕೆ ಮತ್ತು ಗುತ್ತಿಗೆಗಳ ವಹಿಸುವಿಕೆ

ರಸ್ತೆ ಕಾಮಗಾರಿಯ ನ್ಯಾಯಯುತ ವೆಚ್ಚವನ್ನು ಅಂದಾಜು ಮಾಡಲು, ಇಲಾಖೆಯು ಪ್ರಸ್ತುತ ರಸ್ತೆಯ ಸಂಚಾರ ಸಾಂದ್ರತೆ, ರಸ್ತೆ ನಿರ್ಮಿಸುವ ಪ್ರದೇಶದ ಮಣ್ಣಿನ ಸಾಮರ್ಥ್ಯ ಮತ್ತು ಪ್ರಸ್ತುತ ರಸ್ತೆಯ ಸ್ಥಿತಿಗತಿಗಳ ಬಗ್ಗೆ ವಿಶ್ವಾಸಾರ್ಹ ಮಾಹಿತಿಯನ್ನು ಹೊಂದಿರುವುದು ಅತ್ಯಗತ್ಯ. ಐಆರ್‌ಸಿ ಮಾರ್ಗಸೂಚಿಗಳ ಪ್ರಕಾರ ಕ್ರಸ್ಟ್ ದಪ್ಪವನ್ನು ಹೊಂದಲು ಏಳು ದಿನಗಳವರೆಗೆ ಟ್ರಾಫಿಕ್ ದಟ್ಟಣೆಯ ದತ್ತಾಂಶವನ್ನು ಆಧರಿಸಿ ಮಿಲಿಯನ್ ಸ್ಟ್ಯಾಂಡರ್ಡ್ ಆಕ್ಸಲ್ (ಎಮ್‌ಎಸ್‌ಎ)[1] ಲೆಕ್ಕ ಹಾಕುವುದು, ಮಣ್ಣಿನ ಬಲವನ್ನು ನಿರ್ಧರಿಸಲು ಕ್ಯಾಲಿಫೋರ್ನಿಯಾ ಬೇರಿಂಗ್ ರೇಶಿಯೊ (ಸಿಬಿಆರ್) [2] ಮತ್ತು ಗುಣಲಕ್ಷಣದ ವಿಚಲನ (ಬಿಬಿಡಿಟಿ ಪರೀಕ್ಷೆ)[3], ಇವುಗಳ ಅಗತ್ಯವಿದೆ.

ಆದರೆ, ಐಆರ್‌ಸಿ ಮಾರ್ಗಸೂಚಿಗಳಲ್ಲಿ ಸೂಚಿಸಿದಂತೆ ಇಲಾಖೆಯು ಸಂಚಾರ ಸಮೀಕ್ಷೆಗಳನ್ನು ನಡೆಸಿರಲಿಲ್ಲ ಅಥವಾ ಅಸ್ತಿತ್ವದಲ್ಲಿರುವ ರಸ್ತೆಗಳ ಸ್ಥಿತಿಯನ್ನು ಮೇಲ್ವಿಚಾರಣೆ ಮಾಡಲು ಸರಿಯಾದ ದಾಖಲೆಗಳನ್ನು ನಿರ್ವಹಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ರಸ್ತೆಯನ್ನು ವಿನ್ಯಾಸಗೊಳಿಸಲು

[1] ಮಿಲಿಯನ್ ಸ್ಟ್ಯಾಂಡರ್ಡ್ ಆಕ್ಸಲ್ ಎಂಬುದು ರಸ್ತೆಯ ವಿವಿಧ ಪದರಗಳ ದಪ್ಪವನ್ನು ನಿರ್ಧರಿಸುವ ಅಂಶಗಳಲ್ಲಿ ಒಂದಾಗಿದೆ ಮತ್ತು ಅದನ್ನು ಸಿವಿಪಿಡಿ, ವಿನ್ಯಾಸ ಜೀವನ, ಅಂದಾಜು ವಾರ್ಷಿಕ ಟ್ರಾಫಿಕ್ ಬೆಳವಣಿಗೆ ಮತ್ತು ಲೇನ್ ವಿತರಣಾ ಅಂಶಗಳಂತಹ ನಿಯತಾಂಕಗಳನ್ನು ಪರಿಗಣಿಸಿ ಲೆಕ್ಕಹಾಕಲಾಗುತ್ತದೆ.

[2] ಕ್ಯಾಲಿಫೋರ್ನಿಯಾ ಬೇರಿಂಗ್ ರೇಶಿಯೋ (ಸಿಬಿಆರ್) ಮಣ್ಣಿನ ಹೊರೆ ಹೊರುವ ಸಾಮರ್ಥ್ಯದ ಅಳತೆಯಾಗಿದೆ, ಇದು ವೆಚ್ಚದ ಪ್ರಮುಖ ಅಂಶವಾಗಿರುವ ರಸ್ತೆಯ ಕ್ರಸ್ಟ್ ವಿನ್ಯಾಸವನ್ನು ನಿರ್ಧರಿಸುವಲ್ಲಿ ಪ್ರಮುಖ ಅಂಶವಾಗಿದೆ.

[3] ಬೆಂಕೆಲ್‌ಮನ್ ಬೀಮ್ ಡಿಫ್ಲೆಕ್ಷನ್ ಟೆಸ್ಟ್ ಎಂಬುದು ಪಾದಚಾರಿ ಸ್ಥಿತಿಯನ್ನು ನಿರ್ಣಯಿಸಲು ವಿನಾಶಕಾರಿಯಲ್ಲದ ತಂತ್ರವಾಗಿದೆ.

ಅಗತ್ಯವಾದ ಬಿಬಿಡಿಟಿ ಮತ್ತು ಸಿಬಿಆರ್‌ನಂತಹ ಪರೀಕ್ಷೆಗಳನ್ನು, ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಿದಂತೆ, ನಡೆಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

3.1.1 ಸಂಚಾರ ಗಣತಿ

ಸಂಚಾರ ಸಾಂದ್ರತೆಯ ಆಧಾರದ ಮೇಲೆ ರಸ್ತೆಯ ಅಗಲ ಮತ್ತು ದಪ್ಪವನ್ನು ನಿರ್ಧರಿಸಲಾಗುತ್ತದೆ. ದಿನಕ್ಕೆ 24 ಗಂಟೆಗಳ ಕಾಲ ಏಳು ದಿನಗಳವರೆಗೆ ಸಂಚಾರ ಗಣತಿಯನ್ನು ನಡೆಸಬೇಕು ಎಂದು 1972ರ ಐಆರ್‌ಸಿ–9 ಷರತ್ತು ವಿಧಿಸುತ್ತದೆ. ಅಲ್ಲದೆ, 2015ರ ಐಆರ್‌ಸಿ ಎಸ್‌ಪಿ 72–ರ ಕಂಡಿಕೆ–3.4.1ರ ಪ್ರಕಾರ, 10 ವರ್ಷಗಳ ಯೋಜಿತ ದಟ್ಟಣೆಯು ಒಂದು ಎಮ್‌ಎಸ್‌ಎ ಮತ್ತು ಅದಕ್ಕಿಂತ ಹೆಚ್ಚಿನ ಅವಧಿಯ ಯೋಜಿತ ಸಂಚಾರವಾಗಿದ್ದರೆ, ಸಂಚಾರ ಸಮೀಕ್ಷೆಯನ್ನು ಮೂರನೇ ವ್ಯಕ್ತಿಯ ಮೂಲಕ ಕಡ್ಡಾಯವಾಗಿ ಮಾಡಿಸಬೇಕು.

ಪರೀಕ್ಷಾ–ತನಿಖೆ ನಡೆಸಿದ 499ರಲ್ಲಿ 488 ಕಾಮಗಾರಿಗಳಲ್ಲಿ ಐಆರ್‌ಸಿ ನಿಯಮಗಳ ಪ್ರಕಾರ ಸಂಚಾರ ಗಣತಿಯನ್ನು ನಡೆಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದಲ್ಲದೆ, ವಿನ್ಯಾಸ ದಟ್ಟಣೆಯು ಒಂದಕ್ಕಿಂತ ಹೆಚ್ಚು ಎಮ್‌ಎಸ್‌ಎ ಆಗಿದ್ದರೂ ಸಹ, ಈ 488 ಕಾಮಗಾರಿಗಳಲ್ಲಿ ಯಾವುದೇ ವಿಭಾಗಗಳು ಸಹಾಯಕ ಇಂಜಿನಿಯರ್‌ಗಳ ಮೇಲ್ವಿಚಾರಣೆಯಲ್ಲಿ ಮೂರನೇ ವ್ಯಕ್ತಿಯನ್ನು ತೊಡಗಿಸಿಕೊಳ್ಳುವ ಮೂಲಕ ಗಣತಿಯನ್ನು ನಡೆಸಿರುವುದಕ್ಕೆ ಬೆಂಬಲವಾಗಿ ಲೆಕ್ಕಪರಿಶೋಧನೆಗೆ ದಾಖಲೆಗಳನ್ನು ಸಲ್ಲಿಸಲು ಸಾಧ್ಯವಾಗಲಿಲ್ಲ. ಈ ಮೂಲಭೂತ ಅವಶ್ಯಕತೆಗಳನ್ನು ನಿರ್ಲಕ್ಷಿಸಿ, ವಿಶ್ವಾಸಾರ್ಹವಲ್ಲದ ಸಂಚಾರ ದತ್ತಾಂಶದ ಆಧಾರದ ಮೇಲೆ ವಿವರವಾದ ಅಂದಾಜುಗಳಿಗೆ ಸಕ್ಷಮ ಅಧಿಕಾರಿಗಳು ತಾಂತ್ರಿಕ ಅನುಮೋದನೆಯನ್ನು ನೀಡಿದರು. ಕೆಲವು ನಿದರ್ಶನಗಳನ್ನು ಕೆಳಗೆ ನೀಡಲಾಗಿದೆ:

(1) ಎಸ್‌ಎಚ್‌ಡಿಪಿ ಹಂತ–IIIರಲ್ಲಿ ಕಲ್ಬುರ್ಗಿ ತಾಲೂಕಿನಲ್ಲಿ ಕಾರ್ಯಗತಗೊಳಿಸಿದ ಪ್ಯಾಕೇಜ್ 144

ಕಲ್ಬುರ್ಗಿ ವಿಭಾಗದ ಸಂಚಾರ ಸಮೀಕ್ಷೆಯು ಒಂದು ದಿನಕ್ಕೆ 2136 ವಾಣಿಜ್ಯ ವಾಹನಗಳು (ಸಿವಿಪಿಡಿ) ಸಂಚರಿಸುತ್ತವೆ ಎಂದು ವರದಿ ಮಾಡಿತು ಮತ್ತು ಸಂಚಾರ ದಟ್ಟಣೆಯನ್ನು 80 ಎಮ್‌ಎಸ್‌ಎ ಎಂದು ಲೆಕ್ಕಹಾಕಲಾಯಿತು. ವಿಭಾಗವು ನಡೆಸಿದ ಸಂಚಾರ ಗಣತಿಯನ್ನು ತಪ್ಪಾಗಿದೆ ಎಂದು ಎಸ್‌ಎಚ್‌ಡಿಪಿ ತಿರಸ್ಕರಿಸಿತು. ತರುವಾಯ ಎಸ್‌ಹೆಚ್‌ಡಿಪಿ ಮತ್ತೊಂದು ಸಂಚಾರ ಸಮೀಕ್ಷೆಯನ್ನು ನಡೆಸಿತು ಮತ್ತು ಸಂಚಾರ ದಟ್ಟಣೆಯು 5 ಎಮ್‌ಎಸ್‌ಎ ಎಂದು ಕಂಡುಬಂದಿತು. ಎರಡು ಪ್ರಾಧಿಕಾರಗಳು ನಡೆಸಿದ ಸಮೀಕ್ಷೆಯಲ್ಲಿ ಕಂಡುಬಂದ ಎಮ್‌ಎಸ್‌ಎ ಯಲ್ಲಿನ ಈ ಬೃಹತ್ ವ್ಯತ್ಯಾಸವು ಸಂಚಾರ ಜನಗಣತಿಯು ಅಂದಾಜುಗಳನ್ನು ತಯಾರಿಸಲು ಮತ್ತು ನಂತರ ಎಲ್ಲಾ ಒಪ್ಪಂದಗಳ ಹಣಕಾಸಿನ ನಿರ್ವಹಣೆಯ ಮೇಲೆ ನಿಯಂತ್ರಣವನ್ನು ಚಲಾಯಿಸಲು ಅತ್ಯಗತ್ಯವಾಗಿದ್ದರೂ ಸಹ ಅದನ್ನು ಪ್ರಾಧಿಕಾರಗಳು ಗಂಭೀರವಾಗಿ ಪರಿಗಣಿಸಿರಲಿಲ್ಲ ಎಂಬುದನ್ನು ತೋರಿಸಿತು.

ಸಂಚಾರ ಸಮೀಕ್ಷೆಯ ಕಟ್ಟುನಿಟ್ಟಿನ ಮೇಲ್ವಿಚಾರಣೆ ಮಾಡಲು ಪಿಡಬ್ಲ್ಯುಡಿ ಕಲಬುರಗಿ ವಿಭಾಗದ ಅಧಿಕಾರಿಗಳಿಗೆ ನೋಟಿಸ್ ನೀಡಲಾಗಿದೆ ಎಂದು ಸರ್ಕಾರವು ತಿಳಿಸಿತು (ಆಗಸ್ಟ್ 2022).

(2) ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲೂಕಿನ ಖಿಂಗಾವ್ ವಗೇಲಿ ಗ್ರಾಮದ ರಸ್ತೆ

ಕಾಳಿ ಹುಲಿ ಸಂರಕ್ಷಿತ (ಕೆಟಿಆರ್) ಅರಣ್ಯದಲ್ಲಿ ಖಿಂಗಾವ್ ವಗೇಲಿ ಗ್ರಾಮದ ರಸ್ತೆ ಸುಧಾರಣೆಗೆ ಅಂದಾಜು ₹4.75 ಕೋಟಿಯ ಅಂದಾಜಿಗೆ ತಾಂತ್ರಿಕ ಮಂಜೂರಾತಿ ನೀಡಲಾಯಿತು (ಮಾರ್ಚ್ 2018). 122 ಸಿವಿಪಿಡಿ ವಿಭಾಗೀಯವಾಗಿ ನಡೆಸಿದ ಸಂಚಾರ ಗಣತಿಯನ್ನು ಆಧರಿಸಿ ರಸ್ತೆಯನ್ನು ವಿನ್ಯಾಸಗೊಳಿಸಲಾಗಿತ್ತು ಮತ್ತು ಅದು 53 ಭಾರೀ ವಾಣಿಜ್ಯ ವಾಹನಗಳನ್ನು (ಹೆಚ್‌ಸಿವಿ). ಮಂಜೂರಾದ ಅಂದಾಜಿಗೆ ಲಗತ್ತಿಸಲಾದ ಛಾಯಾಚಿತ್ರಗಳು ಸಂಚಾರ ಸಮೀಕ್ಷೆಯಲ್ಲಿ ವರದಿಯಾದ ಸಿವಿಪಿಡಿ ತಪ್ಪಾಗಿದೆ ಎಂದು ಸೂಚಿಸುತ್ತಿದ್ದವು ಏಕೆಂದರೆ ಸಂಜೆ 6.00ರಿಂದ ಬೆಳಗ್ಗೆ 6.00 ಘಂಟೆಯವರೆಗೆ ಹೆಚ್‌ಸಿವಿಗಳ ಚಲನೆಯನ್ನು ಕೆಟಿಆರ್‌ನಲ್ಲಿ

ನಿರ್ಬಂಧಿಸಲಾಗಿತ್ತು. ಪ್ರಸ್ತಾವಿತ ರಸ್ತೆಯು ಮೀಸಲು ಅರಣ್ಯದೊಳಗಿನ ಸಣ್ಣ ಹಳ್ಳಿಗಳ ವಸಾಹತುಗಳಿಗೆ ಸಂಪರ್ಕ ಕಲ್ಪಿಸುತ್ತಿತ್ತು. ಹೀಗಾಗಿ ಒಂದು ದಿನದಲ್ಲಿ 53 ಹೆಚ್‌ಸಿವಿಗಳ ಚಲನೆಯ ಸಾಧ್ಯತೆಯು ಅಸಂಭವವೆಂದು ತೋರುತ್ತದೆ.



ಆಧಾರ: ಇಲಾಖಾ ದಾಖಲೆಗಳು (ಅಂದಾಜಿಗೆ ಲಗತ್ತಿಸಲಾದ ಛಾಯಾಚಿತ್ರ)

3.1.2 ಸಂಚಾರ ಗಣತಿಯನ್ನು ತಪ್ಪು ಲೆಕ್ಕ ಹಾಕಿದ್ದರಿಂದ ಅನಗತ್ಯ ವೆಚ್ಚ

6000ರಿಂದ 15000 ಪಿಸಿಯು[4] ನಡುವಿನ ವಿನ್ಯಾಸ ಸೇವೆಯ ಪರಿಮಾಣಕ್ಕಾಗಿ 1990ರ ಐಆರ್‌ಸಿ 64 ಏಳು ಮೀಟರ್ ಅಗಲದ ಡಬಲ್ ಲೇನ್ ಸಾಗಾಣಿಕೆ ಮಾರ್ಗವನ್ನು ನಿಗದಿಪಡಿಸುತ್ತದೆ. ಇದಲ್ಲದೆ, ಐಆರ್‌ಸಿ ತಯಾರಿಸಿದ ಮತ್ತು ಯೋಜನಾ ಆಯೋಗವು ಪ್ರಕಟಿಸಿದ ಸಾರ್ವಜನಿಕ–ಖಾಸಗಿ ಸಹಭಾಗಿತ್ವದ (ಮೇ 2010) ಮೂಲಕ ಹೆದ್ದಾರಿಗಳ ದ್ವಿಪಥಕ್ಕಾಗಿ ವಿಶಿಷ್ಟತೆಗಳು ಮತ್ತು ಮಾನದಂಡಗಳ ಕೈಪಿಡಿಯ ಕಂಡಿಕೆ–2.16, 15000ರಿಂದ 18000 ಪಿಸಿಯು ನಡುವಿನ ವಿನ್ಯಾಸ ಸೇವೆಯ ಪರಿಮಾಣಕ್ಕಾಗಿ ಎರಡೂ ಬದಿಯಲ್ಲಿ ಕನಿಷ್ಠ 1.5 ಮೀಟರ್‌ನ ಅಗಲದ ಸುಸಜ್ಜಿತ ಭುಜಗಳನ್ನು ಒದಗಿಸುವ ಮೂಲಕ ಎರಡು ಲೇನ್‌ಗಳ ಸಾಮರ್ಥ್ಯವನ್ನು ಹೆಚ್ಚಿಸಲು ಶಿಫಾರಸು ಮಾಡಿತ್ತು.

3ನೇ ಹಂತದ ಎಸ್‌ಎಚ್‌ಡಿಪಿ ಪ್ಯಾಕೇಜ್ 137ರಡಿಯಲ್ಲಿ ₹22.59 ಕೋಟಿಗೆ ಮಂಜೂರಾದ ಅಂದಾಜು (ಫೆಬ್ರವರಿ 2016) ಕಲ್ಬುರ್ಗಿ ಜಿಲ್ಲೆಯ ಎಸ್‌ಎಚ್ 125ರ ಆಯ್ದ ರೀಚ್‌ಗಳಲ್ಲಿ (0.00 ಕಿ.ಮೀ ನಿಂದ 73.16 ಕಿ.ಮೀವರೆಗೆ) ರಸ್ತೆಯ ಅಗಲೀಕರಣ ಮತ್ತು ಬಲವರ್ಧನೆಯನ್ನು ಒಳಗೊಂಡಿತ್ತು. ಎಸ್‌ಎಚ್‌ಡಿಪಿಯ ಮುಖ್ಯ ಇಂಜಿನಿಯರ್ ತಾಂತ್ರಿಕವಾಗಿ ಮಂಜೂರು ಮಾಡಿದ್ದ ಅಂದಾಜಿನ ಪ್ರಕಾರ, ಮಧ್ಯಂತರ ಲೇನ್‌ನಿಂದ ಡಬಲ್ ಲೇನ್‌ಗೆ ವಿಸ್ತರಿಸಲು ಉದ್ದೇಶಿಸಿರುವ ರಸ್ತೆ ಉದ್ದ 0.00 ರಿಂದ 8.00 ಕಿ.ಮೀವರೆಗೆ, ಸಂಪೂರ್ಣ ಸಾಗಾಣಿಕ ಮಾರ್ಗದ ಅಗಲ 7.00 ಮೀಟರ್‌ಗೆ ಬಿಎಮ್ ಮತ್ತು ಅಗಲಗೊಳಿಸಿದ ಭಾಗದಲ್ಲಿ ಜಿಎಸ್‌ಬಿ ಮತ್ತು ಡಬ್ಲ್ಯುಎಮ್‌ಎಮ್ ಒದಗಿಸಲು ಪರಿಗಣಿಸಲಾಗಿತ್ತು. ಆದರೆ, ಈಗಿರುವ ರಸ್ತೆಯಲ್ಲಿ (5.5 ಮೀ) ಪೂರ್ಣ ಬಿಟಿ ಮೇಲ್ಮೈ ಸುಸ್ಥಿತಿಯಲ್ಲಿದೆ ಎಂಬ ಎಇಇ, ಪಿಡಬ್ಲ್ಯುಡಿ ಉಪವಿಭಾಗ, ಕಲ್ಬುರ್ಗಿ (25.08.2016), ಅವರ ಮನವಿಯ ಮೇರೆಗೆ ಸಂಪೂರ್ಣ ಸಾಗಾಣಿಕೆ ಮಾರ್ಗದ ಅಗಲಕ್ಕಾಗಿ ಎಸ್‌ಡಿಬಿಸಿ ಒದಗಿಸುವಾಗ ಅಗಲೀಕರಿಸಿದ ಭಾಗದಲ್ಲಿ ಮಾತ್ರ ಬಿಎಂ ನೀಡಲು ನಿರ್ಧರಿಸಲಾಗಿತ್ತು. ಕಾರ್ಯಗತಗೊಳಿಸುವ ಸಮಯದಲ್ಲಿ ಕಾಮಗಾರಿಯ ವ್ಯಾಪ್ತಿಯನ್ನು ಬದಲಾವಣೆ ಮಾಡಿದ್ದು ₹3.01 ಕೋಟಿ ಉಳಿತಾಯದಲ್ಲಿ ಪರಿಣಮಿಸಿತು. ಹೀಗೆ, ಕಳಪೆ ಅಂದಾಜಿನ ಕಾರಣ, ಈ ಯೋಜನೆಗೆ ಹೆಚ್ಚುವರಿ ಹಣದ ಹಂಚಿಕೆಯಾಗಿತ್ತು ಮತ್ತು ಅದನ್ನು ಇತರ ಅಗತ್ಯ ಕಾಮಗಾರಿಗಳಿಗೆ ಬಳಸಬಹುದಾಗಿತ್ತು.

ಆದರೆ, ಉಳಿತಾಯದ ಹಣವನ್ನು ಅಧ್ಯರ್ಪಿಸುವ ಬದಲು ರಸ್ತೆಯನ್ನು 7.00 ಮೀ.ನಿಂದ 9.00 ಮೀ.ವರೆಗಿನ ರಸ್ತೆಯನ್ನು ಅಗಲೀಕರಿಸಲು ನಿರ್ಧರಿಸಲಾಯಿತು. ಸಂಚಾರ ಗಣತಿ ವರದಿಯು (2015)

[4] ಪ್ಯಾಸೆಂಜರ್ ಕಾರ್ ಘಟಕವನ್ನು ಆಧರಿಸಿ ರಸ್ತೆಯ ಅಗಲವನ್ನು ನಿರ್ಧರಿಸಲಾಗುತ್ತದೆ.

ಯೋಜನಾ ಹೆದ್ದಾರಿಯಲ್ಲಿನ ಚೈನೇಜ್ 0.00ಯಿದ 10.00 ಕಿಮೀವರೆಗಿನ ಸರಾಸರಿ ಟ್ರಾಫಿಕ್ ಸಾಂದ್ರತೆಯು 5346.5 ಪಿಸಿಯು ಆಗಿತ್ತು ಎಂಬುದನ್ನು ತೋರಿಸಿದ್ದರಿಂದ ಇದು ಸಕ್ರಮವಾಗಿರಲಿಲ್ಲ. ಪ್ರತಿ ವರ್ಷ ಶೇಕಡಾ ಐದರ ಸಂಚಾರ ಬೆಳವಣಿಗೆಯನ್ನು ಪರಿಗಣಿಸಿದ ನಂತರ, ಯೋಜನೆಯ ಹೆದ್ದಾರಿಯು (0.00 ರಿಂದ 7.50 ಕಿಮೀ) 18000 ಪಿಸಿಯುಯನ್ನು ಸಾಗಿಸುವ ಸಾಮರ್ಥ್ಯವನ್ನು ತಲುಪುತ್ತದೆ ಮತ್ತು 2038ರಲ್ಲಿ ಅಂದರೆ, ಈ ಯೋಜನೆಯ ಹೆದ್ದಾರಿಯ ವಿನ್ಯಾಸ ಜೀವನ (2030)ಪೂರ್ಣಗೊಂಡ ಏಳು ವರ್ಷಗಳ ನಂತರ ಮಾತ್ರ ಸುಸಜ್ಜಿತ ಭುಜಗಳೊಂದಿಗೆ ಎರಡು–ಪಥಗಳ ಉನ್ನತೀಕರಣಕ್ಕೆ ಅರ್ಹವಾಗುತ್ತದೆ. ಆದರೆ, ಇಲಾಖೆಯು 7.00 ಮೀ.ನಿಂದ 9.00 ರವರೆಗಿನ ರಸ್ತೆಯು ಅಗಲೀಕರಣಕ್ಕೆ ಅರ್ಹವಾಗಲು ಚೈನೇಜ್ 10ರಿಂದ 25.50 ಕಿ.ಮೀ. ನ ರಸ್ತೆಯನ್ನು 14ನೇ ಕಿ.ಮೀ ಸರ್ವೆ ಪಾಯಿಂಟ್‌ನಿಂದ 6769 ಪಿಸಿಯುನ ತಪ್ಪಾದ ಸಂಚಾರ ಗಣತಿ ಮೌಲ್ಯವನ್ನು ಅಳವಡಿಸಿಕೊಂಡಿತ್ತು. ಇದು ₹2.89 ಕೋಟಿಯ ತಪ್ಪಿಸಬಹುದಾದ ವೆಚ್ಚವನ್ನು ಮಾಡುವ ಮೂಲಕ ಅನಗತ್ಯ ಅಗಲೀಕರಣದಲ್ಲಿ ಪರಿಣಮಿಸಿತು. ವಿವರಗಳನ್ನು **ಅನುಬಂಧ–3.1ರಲ್ಲಿ** ನೀಡಲಾಗಿದೆ.

05.10.2012ರ ಎಮ್‌ಒಆರ್‌ಟಿಹೆಚ್ ಸುತ್ತೋಲೆಯ ಪ್ರಕಾರ, ಸಾಗಾಣಿಕೆ ಮಾರ್ಗ/ಬೈಪಾಸ್/ ಮರುಹೊಂದಾಣಿಕೆಗಳ ಅಗಲೀಕರಣಕ್ಕಾಗಿ ಕೈಗೊಂಡ ಹೊಸ ಯೋಜನೆಗಳಲ್ಲಿ ಸಂಚಾರ ದಟ್ಟಣೆಯನ್ನು ಲೆಕ್ಕಿಸದೆಯೇ ಕ್ಯಾರೇಜ್‌ವೇಯ ಅಗಲವು ಸುಸಜ್ಜಿತ ಭುಜಗಳೊಂದಿಗೆ ಕನಿಷ್ಠ ಎರಡು ಲೇನ್‌ಗಳಾಗಿರಬೇಕು ಎಂದು ಸರ್ಕಾರವು ತಿಳಿಸಿತು (ಆಗಸ್ಟ್ 2022). 2015ರ ಐಆರ್‌ಸಿ ಎಸ್‌ಪಿ–73ರ ಪ್ರಕಾರ, ಸುಸಜ್ಜಿತ ಭುಜದೊಂದಿಗೆ ಎರಡು–ಲೇನ್ ಸಾಗಾಣಿಕೆ ಮಾರ್ಗಕ್ಕಾಗಿ ವಿನ್ಯಾಸ ಸೇವೆಯ ಪರಿಮಾಣವು 13000 ಪಿಸಿಯು ಆಗಿತ್ತು ಎಂದೂ ಸಹ ತಿಳಿಸಲಾಯಿತು.

ಇಲಾಖೆಯು ಉಲ್ಲೇಖಿಸಿರುವ ಎಮ್‌ಒಆರ್‌ಟಿಹೆಚ್ ಸುತ್ತೋಲೆಯು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಕೈಗೊಳ್ಳಲಾದ ಸುಧಾರಣಾ ಕಾಮಗಾರಿಗಳಿಗೆ ಸಂಬಂಧಿಸಿದ್ದರಿಂದ ಮತ್ತು ಈ ಪ್ರಕರಣದಲ್ಲಿ ರಸ್ತೆಯು ಕೇವಲ ರಾಜ್ಯ ಹೆದ್ದಾರಿಯಾಗಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಅಲ್ಲದೆ, ಎರಡು ಲೇನ್‌ಗಳ ಹೆದ್ದಾರಿಗೆಗಳಿಗೆ ಐಆರ್‌ಸಿ ತಯಾರಿಸಿದ ಮತ್ತು ಯೋಜನಾ ಆಯೋಗ ಪ್ರಕಟಿಸಿದ (ಮೇ 2010) ವಿಶಿಷ್ಠತೆ ಮತ್ತು ಗುಣಮಟ್ಟಗಳ ಕೈಪಿಡಿಯ ಕಂಡಿಕೆ–2.16ರ ಪ್ರಕಾರ, ಸರಳ ಭೂಪ್ರದೇಶಕ್ಕಾಗಿ ಎರಡು–ಲೇನ್ ಹೆದ್ದಾರಿಗಾಗಿ ವಿನ್ಯಾಸ ಸೇವೆಯ ಪರಿಮಾಣವು 6000 ಪಿಸಿಯು ಮತ್ತು 15000 ಪಿಸಿಯು ಆಗಿತ್ತಾದರೆ ಯೋಜನೆಯ ಹೆದ್ದಾರಿಯ ಚೈನೇಜ್ 0.00 ರಿಂದ 10.00 ಕಿ.ಮೀ.ವರೆಗೆ ಸರಾಸರಿ ಒಟ್ಟು ಸಂಚಾರ ಕೇವಲ 5346.5 ಪಿಸಿಯು ಮಾತ್ರವಾಗಿತ್ತು.

3.1.3 ಮಣ್ಣಿನ ಸಿಬಿಆರ್ ಮೌಲ್ಯದ ನಿರ್ಧರಣೆ

ಒಂದೇ ರೀತಿಯ ಸಾಂದ್ರತೆ ಮತ್ತು ತೇವಾಂಶದಲ್ಲಿ ಪ್ರತಿ ನಿವೇಶನದಿಂದ ಪ್ರತಿಯೊಂದು ಮಣ್ಣಿನ ವರ್ಗಕ್ಕೆ ಕನಿಷ್ಠ ಮೂರು ಮಾದರಿಗಳನ್ನು ತೆಗೆದುಕೊಳ್ಳಬೇಕು ಮತ್ತು ಸಿಬಿಆರ್ ಮೌಲ್ಯಕ್ಕಾಗಿ ಪರೀಕ್ಷಿಸಬೇಕು ಎಂದು 2001ರ ಐಆರ್‌ಸಿ 37 ಸೂಚಿಸುತ್ತದೆ.

ಆಯ್ಕೆ ಮಾಡಿದ 499ರಲ್ಲಿ 267 ಕಾಮಗಾರಿಗಳಲಿ **(ಅನುಬಂಧ–3.2)**, ಸಿಬಿಆರ್ ಪರೀಕ್ಷಾ ವರದಿಯ ಪ್ರತಿಯನ್ನು ವಿವರವಾದ ಅಂದಾಜುಗಳೊಂದಿಗೆ ಲಗತ್ತಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಐಆರ್‌ಸಿ ಮಾನದಂಡಗಳಲ್ಲಿ ಅಗತ್ಯವಿರುವಂತೆ ವಿಭಾಗಗಳು ಅಗತ್ಯವಿರುವ ಮಣ್ಣಿನ ಸಿಬಿಆರ್ ಪರೀಕ್ಷೆಗಳನ್ನು ನಡೆಸಿರಲಿಲ್ಲ ಅಥವಾ ಸಿಬಿಆರ್ ಪರೀಕ್ಷೆಯ ಫಲಿತಾಂಶಗಳನ್ನು ಪರಿಶೀಲಿಸದೆ ಸಿಇಗಳು/ಎಸ್‌ಇಗಳು ತಾಂತ್ರಿಕ ಅನುಮತಿಗಳನ್ನು ನೀಡಿದ್ದರು ಎಂಬುದನ್ನು ಇದು ಸೂಚಿಸುತ್ತದೆ.

ಹೀಗೆ, ಅಗತ್ಯವಿರುವ ಮಣ್ಣು ಪರೀಕ್ಷೆಯನ್ನು ನಡೆಸುವಲ್ಲಿ ವಿಫಲವಾದ ಕಾರಣ ಇಂಜಿನಿಯರಿಂಗ್ ಅಧಿಕಾರಿಗಳು ರಸ್ತೆಯ ಹೊರಪದರವನ್ನು ವಿನ್ಯಾಸಗೊಳಿಸುವಲ್ಲಿ ಮತ್ತು ಅಂದಾಜುಗಳನ್ನು ತಯಾರಿಸುವಲ್ಲಿ ಐಆರ್‌ಸಿ ಮಾನದಂಡಗಳಿಗೆ ಸೂಕ್ತವಾದ ಪ್ರಾಮುಖ್ಯತೆಯನ್ನು ನೀಡಿರಲಿಲ್ಲ ಎಂಬುದನ್ನು ಸೂಚಿಸುತ್ತದೆ.

ಇದು ರಸ್ತೆಯ ಹೊರಪದರದ ವಿನ್ಯಾಸದ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು ಮತ್ತು ಮಿತವ್ಯಯವಲ್ಲದ ಕಾರ್ಯಗತಗೊಳಿಸುವಿಕೆಗೆ ಕಾರಣವಾಗಬಹುದು.

ಪ್ರತ್ಯುತ್ತರವಾಗಿ, ಸರ್ಕಾರವು ಶಿಫಾರಸನ್ನು ಅಂಗೀಕರಿಸಿತು ಮತ್ತು CBR ಪರೀಕ್ಷಾ ಫಲಿತಾಂಶಗಳನ್ನು ಪಡೆಯಲು ಮತ್ತು ತಾಂತ್ರಿಕ ಮಂಜೂರಾತಿಯನ್ನು ನೀಡುವ ಮೊದಲು ಅಂದಾಜುಗಳಿಗೆ ಲಗತ್ತಿಸಲು ಹೆಚ್ಚಿನ ಎಚ್ಚರಿಕೆಯನ್ನು ವಹಿಸಲಾಗುವುದು ಎಂದು ಹೇಳಿದೆ.

3.1.4 ಗುಣಲಕ್ಷಣದ ವಿಚಲನದ ನಿರ್ಧರಣೆ

ರಸ್ತೆಗಳ ವಿವಿಧ ವಿಸ್ತರಣೆಗಳನ್ನು ಬಲಪಡಿಸಲು ಅಗತ್ಯವಾದ ಮೇಲ್ಪದರವನ್ನು (ಬಿಟುಮಿನಸ್ ಮೆಕಾಡಮ್‌ನ ಪರಿಭಾಷೆಯಲ್ಲಿ) ನಿರ್ಣಯಿಸಲು, ಪಾದಚಾರಿ ಸ್ಥಿತಿಗಳ ಆಧಾರದ ಮೇಲೆ ಅಸ್ತಿತ್ವದಲ್ಲಿರುವ ರಸ್ತೆಯನ್ನು ಉತ್ತಮ, ಮಧ್ಯಮ, ಕಳಪೆ, ಎಂಬುದಾಗಿ ವರ್ಗೀಕರಿಸಲು 1997ರ ಐಆರ್‌ಸಿ 81 ಬೆಂಕೆಲ್‌ಮನ್ ಬೀಮ್ ಡಿಫ್ಲೆಕ್ಷನ್ ಟೆಕ್ನಿಕ್ ಪರೀಕ್ಷೆಯನ್ನು (ಬಿಬಿಡಿಟಿ) ಸೂಚಿಸಿದೆ.

ಪರೀಕ್ಷಾ–ತನಿಕೆ ನಡೆಸಿದ 20 ಪ್ರಕರಣಗಳಲ್ಲಿ[5] (ಒಂಬತ್ತು ವಿಭಾಗಗಳು[6]) 18ರಲ್ಲಿ[7], ಗುಣಮಟ್ಟ ಭರವಸೆ ಅಧಿಕಾರಿಗಳು ಅಥವಾ ಸಂಬಂಧಿಸಿದ ವಿಭಾಗಗಳಿಂದ ಬಿಬಿಡಿಟಿ ಪರೀಕ್ಷೆಯು ಕಡ್ಡಾಯವಾಗಿದ್ದರೂ ಅದನ್ನು ನಡೆಸಿರಲಿಲ್ಲ ಮತ್ತು ನವೀಕರಣ ಕಾರ್ಯಗಳನ್ನು ಸ್ವೇಚ್ಛಾರೀತಿಯಲ್ಲಿ ಪ್ರಸ್ತಾವಿಸಲಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

3.1.5 ನೆಡುತೋಪು ಕಾಮಗಾರಿಗಳು

ಪರಿಸರಕ್ಕೆ ಪ್ರತ್ಯೇಕ ಗಮನ ನೀಡಲು, ಸರ್ಕಾರದ ಆದೇಶದ ಪ್ರಕಾರ (ಜನವರಿ 2017) ರಸ್ತೆ ಕಾಮಗಾರಿಗೆ ಅಂದಾಜುಗಳನ್ನು ಸಿದ್ಧಪಡಿಸುವಾಗ ಲೋಕೋಪಯೋಗಿ ವಿಭಾಗಗಳು ಕಾಮಗಾರಿ ವೆಚ್ಚದ ಶೇಕಡಾ ಒಂದರಷ್ಟನ್ನು ಅರಣ್ಯ ಇಲಾಖೆಯ ಮೂಲಕ ರಸ್ತೆಬದಿಯಲ್ಲಿ ಮರ ನೆಡುವುದಕ್ಕೆ ಮೀಸಲಿಡಬೇಕು.

ಜನವರಿ 2017 ಮತ್ತು ಮಾರ್ಚ್ 2021ರ ನಡುವೆ ತಾಂತ್ರಿಕ ಮಂಜೂರಾತಿ ನೀಡಿದ ₹6726.02 ಕೋಟಿ ವೆಚ್ಚದ 551 ಅಂದಾಜುಗಳ ಲೆಕ್ಕಪರಿಶೋಧನಾ ಪರಿಶೀಲನೆಯು ಕೆಳಗಿನ ಅಂಶಗಳನ್ನು ತಿಳಿಯಪಡಿಸಿತು:

- ₹1018.58 ಕೋಟಿ ವೆಚ್ಚದ 180 ಕಾಮಗಾರಿಗಳಲ್ಲಿ (17 ಪಿಡಬ್ಲ್ಯುಡಿ ವಿಭಾಗಗಳು) ನೆಡುತೋಪಿನ ಕಾಮಗಾರಿಗಳಿಗೆ ಶೇಕಡಾ ಒಂದರ ಅವಕಾಶವನ್ನು ಮಾಡಿರಲಿಲ್ಲ. ಹಾಗಾಗಿ ನೆಡುತೋಪಿನ ಕಾಮಗಾರಿಗೆ ₹10.19 ಕೋಟಿ ಅಗತ್ಯ ಅನುದಾನ ಮಂಜೂರಾಗಿರಲಿಲ್ಲ.
- ₹5030.94 ಕೋಟಿ ವೆಚ್ಚದ 250 ಕಾಮಗಾರಿಗಳಲ್ಲಿ ₹50.31 ಕೋಟಿ ಮೊತ್ತ ಶೇಕಡಾ ಒಂದರಷ್ಟಕ್ಕೆ ಪ್ರತಿಯಾಗಿ ಅಂದಾಜಿನಲ್ಲಿ ಕೇವಲ ₹40.00 ಕೋಟಿಯನ್ನು ಮಾತ್ರ ಒದಗಿಸಲಾಗಿದ್ದು ₹10.31 ಕೋಟಿ ಕಡಿಮೆ ಅನುದಾನದಲ್ಲಿ ಪರಿಣಮಿಸಿತು.
- ₹676.50 ಕೋಟಿ ವೆಚ್ಚದ 121 ಕಾಮಗಾರಿಗಳ ಅಂದಾಜುಗಳಲ್ಲಿ ಮಾತ್ರ ₹6.76 ಕೋಟಿಯಷ್ಟು ಸರಿಯಾದ ಅವಕಾಶವನ್ನು ಮಾಡಲಾಗಿತ್ತು.

[5] ಇಂಡೆಂಟ್ ಸಂಖ್ಯೆಗಳು 135073, 101370, 119581, 119622, 89218, 66367, 132219, 100536, 102051, 102128, 41808, 45275, 65639, 97480, 132470, 98386, 135130, 135182, 135331 and 132265

[6] ಕಲಬುರಗಿ, ಕೋಲಾರ, ಮೈಸೂರು, ರಾಮನಗರ, ಚಿಕ್ಕೋಡಿ, ಬಳ್ಳಾರಿ, ಬೀದರ್, ಬೆಳಗಾವಿ ಮತ್ತು ಮಂಡ್ಯ.

[7] ಇಂಡೆಂಟ್ ಸಂಖ್ಯೆಗಳು 135073, 101370, 119581, 119622, 89218, 100536, 102051, 102128, 41808, 45275, 65639, 97480, 132470, 98386, 135130, 135182, 135331 and 66367

ಅಂದಾಜುಗಳಲ್ಲಿ ₹46.77 ಕೋಟಿ ಮೊತ್ತದ ನೆಡುತೋಪಿನ ಕಾಮಗಾರಿಗಳಿಗೆ ಅವಕಾಶ ಮಾಡಿದ್ದರೂ ಅಂದಾಜಿನಲ್ಲಿ ಮಾಡಲಾದ ₹0.15 ಕೋಟಿಯ ಅವಕಾಶಕ್ಕೆ ಪ್ರತಿಯಾಗಿ ₹0.11 ಕೋಟಿ ಮೊತ್ತವನ್ನು ಠೇವಣಿ ಇಟ್ಟಿದ್ದ ನಾಲ್ಕು ಕಾಮಗಾರಿಗಳನ್ನು ಹೊರತುಪಡಿಸಿ (ಎಸ್‌ಎಚ್‌ಡಿಪಿ ಹಂತ–IVರ ಪ್ಯಾಕೇಜ್ 325 ಮತ್ತು ಕೋಲಾರ ಪಿಡಬ್ಲ್ಯುಡಿ ವಿಭಾಗದ ಮೂರು ಕಾಮಗಾರಿಗಳು) ಇತರ ಯಾವುದೇ ಪ್ರಕರಣಗಳಲ್ಲಿ ಹಣವನ್ನು ಅರಣ್ಯ ಇಲಾಖೆಗೆ ವರ್ಗಾಯಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು (**ಅನುಬಂಧ–3.3**). ಹೀಗಾಗಿ ಈ ಜಿಲ್ಲೆಗಳಲ್ಲಿ ನೆಡುತೋಪು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗಲಿಲ್ಲ.

ಕಣ್ತಪ್ಪಿನಿಂದಾಗಿ ಕೆಲವು ಅಂದಾಜುಗಳಲ್ಲಿ ಮರಗಳನ್ನು ನೆಡುವ ಅವಕಾಶವನ್ನು ಬಿಟ್ಟುಬಿಡಲಾಗಿತ್ತು ಮತ್ತು ಎಲ್ಲೆಲ್ಲಿ ಅವಕಾಶಗಳನ್ನು ಮಾಡಲಾಗಿದೆಯೋ ಆ ಪ್ರಕರಣಗಳಲ್ಲಿ ಅರಣ್ಯ ಇಲಾಖೆಗೆ ಹಣವನ್ನು ರವಾನಿಸಲು ಒಪ್ಪಿಗೆ ನೀಡಲಾಗಿದೆ ಎಂದು ಸರ್ಕಾರವು ತಿಳಿಸಿತು (ಆಗಸ್ಟ್ 2022).

ಶಿಫಾರಸು–3: ತಾಂತ್ರಿಕ ಮಂಜೂರಾತಿ ನೀಡುವ ಪ್ರಾಧಿಕಾರಗಳು ಅಂದಾಜುಗಳನ್ನು ಕೂಲಂಕಷವಾಗಿ ಪರಿಶೀಲಿಸುವುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು ಮತ್ತು ತಪ್ಪಾದ ಅಂದಾಜಿನಿಂದಾಗಿ ನಷ್ಟ/ ಹಾನಿಗಳ ಸಂದರ್ಭಗಳಲ್ಲಿ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು.

3.2 ತಪ್ಪಾದ ಅಂದಾಜುಗಳು

ಮೇಲಿನ ಕಂಡಿಕೆ–3.1ರಲ್ಲಿ ಚರ್ಚಿಸಿದಂತೆ ಐಆರ್‌ಸಿ ನಿಯಮಗಳು ಮತ್ತು ಸರ್ಕಾರದ ಸೂಚನೆಗಳ ಪ್ರಕಾರ ರಸ್ತೆ ಕಾಮಗಾರಿಗಳ ವೆಚ್ಚದ ಅಂದಾಜುಗಳನ್ನು ಸೂಕ್ತವಾಗಿ ಮತ್ತು ನಿಖರವಾಗಿ ತಯಾರಿಸದ ಕಾರಣ, ಅಂದಾಜುಗಳು ಗಂಭೀರ ನ್ಯೂನತೆಗಳನ್ನು ಒಳಗೊಂಡಿದ್ದು ಲೆಕ್ಕಪರಿಶೋಧನೆಯಲ್ಲಿ ಪರೀಕ್ಷಾ–ತನಿಖೆ ನಡೆಸಿದ ಕಾಮಗಾರಿಗಳಲ್ಲಿ ₹38.63 ಕೋಟಿ ಮೊತ್ತದ ತಪ್ಪಿಸಬಹುದಾಗಿದ್ದ ಹೆಚ್ಚುವರಿ ವೆಚ್ಚಗಳು, ಸರ್ಕಾರಕ್ಕೆ ನಷ್ಟ ಇತ್ಯಾದಿಗಳಲ್ಲಿ ಪರಿಣಮಿಸಿತು. ಕೆಲವು ಪ್ರಮುಖ ಅಂಶಗಳನ್ನು ಕೆಳಗೆ ಚರ್ಚಿಸಲಾಗಿದೆ:

3.2.1 ಅಂದಾಜುಗಳಲ್ಲಿ ಹೆಚ್ಚಿನ ಅವಕಾಶ ಮಾಡಿರುವುದು

ಐಆರ್‌ಸಿ–37ರ ಪ್ರಕಾರ ಕ್ರಸ್ಟ್ (ದಪ್ಪ) ಮತ್ತು ಬಿಟುಮಿನಸ್ ಕೋರ್ಸ್‌ನ ಪ್ರಕಾರವನ್ನು ಕ್ಯಾಲಿಫೋರ್ನಿಯಾ ಬೇರಿಂಗ್ ಅನುಪಾತ (ಸಿಬಿಆರ್) ಆಧಾರದ ಮೇಲೆ ಉಪ–ದರ್ಜೆಯ ಮತ್ತು ಎಮ್‌ಎಸ್‌ಎ ಪರಿಭಾಷೆಯಲ್ಲಿ ಸಂಚಾರ ದಟ್ಟಣೆಯನ್ನು ಆಧರಿಸಿ ವಿನ್ಯಾಸಗೊಳಿಸಲಾಗುತ್ತದೆ, ಇದನ್ನು ಸಿವಿಪಿಡಿ, ವಾಹನದ ಡ್ಯಾಮೇಜ್ ಫ್ಯಾಕ್ಟರ್ (ವಿಡಿಎಫ್), ವಿನ್ಯಾಸ ಜೀವನ ಮತ್ತು ಲೇನ್ ಡಿಸ್ಟ್ರಿಬ್ಯೂಷನ್ ಫ್ಯಾಕ್ಟರ್ (ಎಲ್‌ಡಿಎಫ್) ಆಧಾರದ ಮೇಲೆ ಲೆಕ್ಕಹಾಕಲಾಗುತ್ತದೆ. ಅಲ್ಲದೆ ಐಆರ್‌ಸಿ–37 ವಿನ್ಯಾಸದ ದಟ್ಟಣೆಯು 1.5 ಎಮ್‌ಎಸ್‌ಎಗಿಂತ ಕಡಿಮೆಯಿರುವಲ್ಲಿ, ವಿನ್ಯಾಸದ ದಟ್ಟಣೆಯು 1.5 ಎಮ್‌ಎಸ್‌ಎಗಿಂತ ಹೆಚ್ಚಿರುವಾಗ ಮಾತ್ರ ಬಿಟುಮಿನಸ್ ಮಕಾಡಮ್‌ಅನ್ನು (ಬಿಎಮ್) ಬೈಂಡರ್ ಕೋರ್ಸ್‌ನಂತೆ ಅಗತ್ಯವದೆ ಎಂದು ನಿಗದಿಪಡಿಸುವ ಐಆರ್‌ಸಿ ಎಸ್‌ಪಿ 72ನಲ್ಲಿನ ವಿಶೇಷಣಗಳನ್ನು ಅನುಸರಿಸಬೇಕು. ಮುಂದುವರೆದು, ವಿನ್ಯಾಸ ದಟ್ಟಣೆಯ ಲೆಕ್ಕಾಚಾರಕ್ಕಾಗಿ ವಿಡಿಎಫ್‌ನ ಸೂಚಕ ಮೌಲ್ಯವು 0ಯಿಂದ 150 ಸಿವಿಪಿಡಿಗೆ 1.5, ಮತ್ತು 150ರಿಂದ 1500 ಸಿವಿಪಿಡಿಗಾಗಿ 3.5 ಆಗಿರಬೇಕು. ನಿಜವಾದ ಸಂಚಾರ ಗಣತಿಯ ಪ್ರಕಾರ ಸಿವಿಪಿಡಿಯನ್ನು ಪರಿಗಣಿಸಬೇಕು.

ಸಿವಿಪಿಡಿ 150ಕ್ಕಿಂತ ಕಡಿಮೆ ಇರುವ ಮೌಲ್ಯಗಳಿಗೆ ವಿಡಿಎಫ್ ಮತ್ತು ಎಲ್‌ಡಿಎಫ್ ಮೌಲ್ಯಗಳನ್ನು ತಪ್ಪಾಗಿ ತೆಗೆದುಕೊಂಡಿದ್ದರಿಂದ ₹89.09 ಕೋಟಿ ವೆಚ್ಚದ 17 ಅಂದಾಜುಗಳಲ್ಲಿ (ಪಿಡಬ್ಲ್ಯುಡಿಯಲ್ಲಿನ 320 ಕಾಮಗಾರಿಗಳಲ್ಲಿ) ರಸ್ತೆಯ ವಿನ್ಯಾಸ ಸಂಚಾರವನ್ನು ಲೆಕ್ಕಾಚಾರ ಮಾಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತತ್ಪರಿಣಾಮವಾಗಿ ಐಆರ್‌ಸಿ ವಿಶಿಷ್ಟತೆಯನ್ನು ಉಲ್ಲಂಘಿಸಿ ಇಲಾಖೆಯು ಅನಧಿಕೃತವಾಗಿ ಬಿಟುಮಿನಸ್ ಮಕಾಡಮ್‌ನ (ಬಿಎಮ್) ಬೈಂಡರ್ ಕೋರ್ಸ್ ಒದಗಿಸಿ ನಂತರ ಕಾರ್ಯಗತಗೊಳಿಸಿತು. ಇದು, **ಅನುಬಂಧ–3.4** ರಲ್ಲಿ ವಿವರಿಸಿದಂತೆ ₹13.12 ಕೋಟಿ ತಪ್ಪಿಸಬಹುದಾಗಿದ್ದ ವೆಚ್ಚದಲ್ಲಿ ಪರಿಣಮಿಸಿತು.

ಬಳ್ಳಾರಿ ಪಿಡಬ್ಲ್ಯುಡಿ ವಿಭಾಗದಲ್ಲಿ ಒಂದು ಕಾಮಗಾರಿಗೆ (ಡಬ್ಲ್ಯುಐ 73283) ಸಂಬಂಧಿಸಿದಂತೆ, ಬಿಎಮ್ ಒದಗಿಸುವುದನ್ನು ಸಮರ್ಥಿಸಿಕೊಳ್ಳಲು ವಿನ್ಯಾಸ ದಟ್ಟಣೆಯ ಲೆಕ್ಕಾಚಾರದಲ್ಲಿ 88 ಸಂಖ್ಯೆಯ ಸಿವಿಪಿಡಿಯನ್ನು ಅಳವಡಿಸಿಕೊಳ್ಳುವ ಬದಲು 1084ರ ಪ್ಯಾಸೆಂಜರ್ ಕಾರ್ ಘಟಕಗಳ ಅಂಕಿ ಅಂಶಗಳನ್ನು ಅಳವಡಿಸಿ ಕೊಳ್ಳಲಾಗಿತ್ತು. ಹೀಗೆ, ತಪ್ಪಾದ ಅಂಕಿ ಅಂಶವನ್ನು ಅಳವಡಿಸಿಕೊಳ್ಳುವ ವಿಭಾಗದ ಕ್ರಮವು ₹0.61 ಕೋಟಿ ತಪ್ಪಿಸಬಹುದಾದ ವೆಚ್ಚವನ್ನು ಭರಿಸುವ ಮೂಲಕ ಅನಗತ್ಯವಾದ ರಚನಾತ್ಮಕ ಪದರವನ್ನು (ಬಿಎಮ್) ಒದಗಿಸಿದಂತಾಯಿತು.

ಐಆರ್‌ಸಿ ಮಾರ್ಗಸೂಚಿಗಳ ವಿನ್ಯಾಸದ ದಟ್ಟಣೆಯು ಕನಿಷ್ಟ ಮಟ್ಟಕ್ಕಿಂತ ಕಡಿಮೆಯಿದ್ದರೆ, ಬೈಂಡರ್ ಕೋರ್ಸ್‌ಅನ್ನು (ಬಿಎಮ್) ಒದಗಿಸದೆಯೇ ನೇರವಾಗಿ ಗ್ರ್ಯಾನ್ಯುಲರ್ ಮೇಲ್ಪೈಯಲ್ಲಿ ಧರಿಸುವ ಕೋರ್ಸ್ ಅನ್ನು ಹಾಕಿದರೆ, ಧರಿಸುವ ಕೋರ್ಸ್ ಯಾವುದೇ ಸಮಯದಲ್ಲಿ ಹಾಳಾಗಬಹುದಾದ್ದರಿಂದ ರಸ್ತೆಯ ಹೆಸರನ್ನು ಲೆಕ್ಕಿಸದೆ ಬೈಂಡರ್ ಕೋರ್ಸ್‌ಅನ್ನು ಒದಗಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಆಗಸ್ಟ್ 2022).

2012ರ ಐಆರ್‌ಸಿ 37ರಲ್ಲಿ ಐಆರ್‌ಸಿ ಎಸ್‌ಪಿ 72ರೊಂದಿಗೆ ಓದಲಾದ ನಿಬಂಧನೆಗಳಿಂದ ನಿಯಂತ್ರಿಸಲ್ಪಟ್ಟಿರುವ ವಿನ್ಯಾಸದ ದಟ್ಟಣೆಯು 1.5 ಎಮ್‌ಎಸ್‌ಎಗಿಂತ ಕಡಿಮೆಯಿದ್ದಿತು ಎಂಬ ಅಂಶದ ದೃಷ್ಟಿಯಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

3.2.2 ಜಿಎಸ್‌ಬಿ ದಪ್ಪದ ಅಧಿಕ ಅವಕಾಶ ಮಾಡಿ ಕಾರ್ಯಗತಗೊಳಿಸಿರುವುದು

ಬೇಸ್ ಮತ್ತು ಸಬ್–ಬೇಸ್ ಪದರಗಳು ಪಾದಚಾರಿ ಮಾರ್ಗದ ಎರಡು ಪ್ರಮುಖ ಪದರಗಳನ್ನು ರೂಪಿಸುತ್ತದೆ. ಎಮ್‌ಒಆರ್‌ಟಿಹೆಚ್ ಮಾರ್ಗಸೂಚಿಗಳು ಸುಧಾರಣಾ ಕಾಮಗಾರಿಯ ಸಮಯದಲ್ಲಿ ಅಸ್ತಿತ್ವದಲ್ಲಿರುವ ಕ್ರಸ್ಟ್‌ನ ಭಾಗವನ್ನು ಉಳಿಸಿಕೊಂಡರೆ, ಐಆರ್‌ಸಿ–3 ರಲ್ಲಿ ನಿಗದಿಪಡಿಸಿದಂತೆ ಒಟ್ಟಾರೆ ಪಾದಚಾರಿ ದಪ್ಪವನ್ನು ಬದಲಾಗದೆ ಇರುವ ಸಬ್‌ಬೇಸ್ ದಪ್ಪದಲ್ಲಿ ಅಂತಹ ಕ್ರಸ್ಟ್‌ನ ದಪ್ಪವನ್ನು ಅನುಗುಣವಾಗಿ ಕಡಿಮೆ ಮಾಡಬೇಕು.

ಸಾಗಾಣಿಕೆ ಮಾರ್ಗದಲ್ಲಿ 120 ಎಮ್‌ಎಮ್‌ನಿಂದ 250 ಎಮ್‌ಎಮ್ ದಪ್ಪದ ಹೊರಪದರವು ಈಗಾಗಲೇ ಅಸ್ತಿತ್ವದಲ್ಲಿದ್ದರೂ, ಇಲಾಖೆಯು ಅಸ್ತಿತ್ವದಲ್ಲಿರುವ ಹೊರಪದರವನ್ನು ನಿರ್ಲಕ್ಷಿಸಿ ಜಿಎಸ್‌ಬಿಯ ಹೆಚ್ಚುವರಿ ಪದರವನ್ನು ಒದಗಿಸಿತ್ತು ಎಂಬುದನ್ನು ನಾಲ್ಕು ವಿಭಾಗಗಳಲ್ಲಿನ ₹55.26 ಕೋಟಿ ವೆಚ್ಚದ ಏಳು ರಸ್ತೆ ಅಂದಾಜುಗಳ ಲೆಕ್ಕಪರಿಶೋಧನಾ ಪರಿಶೀಲನೆಯು ತಿಳಿಯಪಡಿಸಿತು. ಇದು **ಅನುಬಂಧ–3.5**ರಲ್ಲಿ ವಿವರಿಸಿದಂತೆ ₹2.98 ಕೋಟಿಯ ಹೆಚ್ಚುವರಿ ತಪ್ಪಿಸಬಹುದಾದ ವೆಚ್ಚದಲ್ಲಿ ಪರಿಣಮಿಸಿತು.

ಐಆರ್‌ಸಿ ಮಾರ್ಗಸೂಚಿಗಳ ನಿಬಂಧನೆಗಳ ಪ್ರಕಾರ ಜಿಎಸ್‌ಬಿಯನ್ನು ಒದಗಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಆಗಸ್ಟ್ 2022).

ಮಂಜೂರಾದ ಅಂದಾಜುಗಳಿಗೆ ಲಗತ್ತಿಸಲಾದ ಕ್ರಸ್ಟ್ ಕಂಪ್ಯೂಟೇಶನ್ ತ:ಖ್ತೆಯ ಪ್ರಕಾರ ಅಸ್ತಿತ್ವದಲ್ಲಿರುವ ರಸ್ತೆಯಲ್ಲಿ ಕೆಲವು ಹೊರಪದರಗಳು ಲಭ್ಯವಿದ್ದವು ಎಂದು ವರದಿ ಮಾಡಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಆದ್ದರಿಂದ ಎಮ್‌ಒಆರ್‌ಟಿಹೆಚ್ ವಿಶಿಷ್ಟತೆಗಳ ಪರಿಭಾಷೆಯಲ್ಲಿ ಸುಧಾರಣಾ ಕಾರ್ಯಗಳ ಸಮಯದಲ್ಲಿ ಅದನ್ನು ಉಳಿಸಿಕೊಳ್ಳಬೇಕಿತ್ತು ಮತ್ತು ಕಡಿಮೆಗೊಳಿಸಬೇಕಿತ್ತು.

3.2.3 ಸಾಗಾಣಿಕೆ ಮಾರ್ಗದ ನಂತರವೂ ಡಬ್ಲ್ಯುಎಮ್‌ಎಮ್ ಒದಗಿಸಿದ್ದರಿಂದ ವ್ಯರ್ಥ ವೆಚ್ಚ

ರಸ್ತೆಯ ವಿನ್ಯಾಸಗೊಳಿಸಿದ ಸಾಗಾಣಿಕೆ ಮಾರ್ಗದ ಅಗಲಕ್ಕೆ ವೆಟ್ ಮಿಕ್ಸ್ ಮೆಕಾಡಮ್‌ಅನ್ನು (ಡಬ್ಲ್ಯುಎಮ್‌ಎಮ್) ಹಾಕಬಹುದು ಎಂದು ಎಮ್‌ಒಆರ್‌ಟಿಹೆಚ್ ನಿಗದಿಪಡಿಸುತ್ತದೆ. ₹27.15 ಕೋಟಿ ವೆಚ್ಚದ ನಾಲ್ಕು ರಸ್ತೆ ಅಂದಾಜುಗಳಲ್ಲಿ ಇಲಾಖೆಯು ಮಧ್ಯದ/ಸಾಗಾಣಿಕೆ ಮಾರ್ಗದ ಅಗಲದ ನಂತರ 0.30 ಮೀ.ನಿಂದ 1.30 ಮೀ.ವರೆಗೆ ಡಬ್ಲ್ಯುಎಮ್‌ಎಮ್ ಪದರವನ್ನು ಒದಗಿಸಲು ಅವಕಾಶವನ್ನು ಮಾಡಿದ್ದು

₹0.62 ಕೋಟಿ ವ್ಯರ್ಥ ವೆಚ್ಚದಲ್ಲಿ ಪರಿಣಮಿಸಿತು (**ಅನುಬಂಧ–3.6**). ಅಲ್ಲದೆ, ಕೆಳಗಿನ ಛಾಯಾಚಿತ್ರದಲ್ಲಿ ತೋರಿಸಿರುವ ಒಂದು ಕೆಲಸದಲ್ಲಿ, ಕ್ಯಾರೇಜ್ ಮಾರ್ಗವನ್ನು ಮೀರಿ ಡಬ್ಲ್ಯುಎಮ್ಎಮ್ಅನ್ನು ಒದಗಿಸದಿರುವುದನ್ನು ಆದರೆ ಗುತ್ತಿಗೆದಾರರಿಗೆ ಪಾವತಿ ಮಾಡಿರುವುದನ್ನು ಗಮನಿಸಲಾಯಿತು. ಇದು ಗುತ್ತಿಗೆದಾರರಿಗೆ ಅನುಚಿತ ಲಾಭದಲ್ಲಿ ಪರಿಣಮಿಸಿತು.

ಕೋಲಾರ ವಿಭಾಗದಲ್ಲಿ ಡಬ್ಲ್ಯುಐ ನಂ.66340 ಯಲ್ಲಿ ಸಾಗಾಣಿಕೆ ಮಾರ್ಗದ ಅಗಲಕ್ಕೆ ಮಾತ್ರ ಡಬ್ಲ್ಯುಎಮ್ಎಮ್ ಹಾಕಿರುವುದನ್ನು ತೋರಿಸುವ ಛಾಯಾಚಿತ್ರ



ಆಧಾರ: ಆರ್ಎ ಬಿಲ್‌ಗಳಿಗೆ ಲಗತ್ತಿಸಿರುವ ಛಾಯಾಚಿತ್ರ

ನಿರ್ಗಮನ ಸಭೆಯಲ್ಲಿ (ಏಪ್ರಿಲ್ 2022) ಸರ್ಕಾರವು ಲೆಕ್ಕಪರಿಶೋಧನಾ ವೀಕ್ಷಣೆಯನ್ನು ಅಂಗೀಕರಿಸಿತು ಮತ್ತು ಈ ವಿಷಯವನ್ನು ಪರಿಶೀಲಿಸಲು ಸಂಬಂಧಿಸಿದ ಸಿಇಗಳಿಗೆ ನಿರ್ದೇಶಿಸಿತು.

3.2.4 ಬಿಟುಮಿನಸ್ ಮೇಲ್ಮೈಯನ್ನು ತೆಗೆದುಹಾಕಲು ತಪ್ಪಾದ ಐಟಂ ದರವಡಿಸಿಕೊಂಡಿರುವುದು

ಒಪ್ಪಂದದ ಷರತ್ತುಗಳ ಪ್ರಕಾರ, ಗುತ್ತಿಗೆದಾರನು ಎಮ್ಒಆರ್‌ಟಿಹೆಚ್‌ನಿಂದ ಜಾರಿಗೊಳಿಸಿದ ರಸ್ತೆ ಮತ್ತು ಸೇತುವೆಗಳ ವಿಶಿಷ್ಟತೆಗಳಲ್ಲಿ ವಿವರಿಸಿದಂತೆ ರಸ್ತೆ ಕಾಮಗಾರಿಯನ್ನು ನಿರ್ವಹಿಸಬೇಕು. ಎಮ್ಒಆರ್‌ಟಿಹೆಚ್ ವಿಶಿಷ್ಟತೆಯ ಷರತ್ತು 305.4.3(ii) ರಸ್ತೆ ಮೇಲ್ಮೈ ಮೇಲೆ ಮಣ್ಣಿನ ಕಾಮಗಾರಿಯನ್ನು ನಿರ್ಮಿಸಲು ಅಸ್ತಿತ್ವದಲ್ಲಿರುವ ರಸ್ತೆ ಮೇಲ್ಮೈಯನ್ನು ತೆಗೆದುಹಾಕುವುದನ್ನು ಸೂಚಿಸುತ್ತದೆ. ಎಮ್ಒಆರ್‌ಟಿಹೆಚ್ ಪ್ರಕಟಿಸಿದ ರಸ್ತೆ ಮತ್ತು ಸೇತುವೆಗಳ ಸ್ಟ್ಯಾಂಡರ್ಡ್ ಡೇಟಾ ಬುಕ್ ಅಸ್ತಿತ್ವದಲ್ಲಿರುವ ಮೇಲ್ಮೈಯನ್ನು (ಗ್ರ್ಯಾನ್ಯುಲರ್ /ಬಿಟುಮಿನಸ್) ಗರಿಷ್ಠ 50 ಮಿಮೀ ಆಳಕ್ಕೆ ಕೊರೆಯುವುದನ್ನು ನಿಗದಿಪಡಿಸಿದೆ.

ದರಪಟ್ಟಿ (ಎಸ್ಆರ್) ಯಾಂತ್ರಿಕ ವಿಧಾನದಿಂದ 50 ಮಿಮೀ ಆಳದವರೆಗೆ ಅಸ್ತಿತ್ವದಲ್ಲಿರುವ ಬಿಟುಮಿನಸ್ ಪದರವನ್ನು ತೆಗೆದುಹಾಕಲು ವಿವಿಧ ವಲಯಗಳಲ್ಲಿ (ಐಟಂ ನಂ.19.59) ಪ್ರತಿ ಚದರಕ್ಕೆ ₹3.00 ಮತ್ತು ₹3.60ರ ನಡುವೆ ಐಟಂ ದರವನ್ನು ನಿಗದಿಪಡಿಸಿತ್ತು. 13 ವಿಭಾಗಗಳಲ್ಲಿ ₹696.75 ಕೋಟಿ ವೆಚ್ಚದ (459 ಕಾಮಗಾರಿಗಳ ಪೈಕಿ) 138 ಕಾಮಗಾರಿಗಳ ಅಂದಾಜುಗಳಲ್ಲಿ, ವೆಚ್ಚದ ಇತರ ವಸ್ತುಗಳನ್ನು (ಐಟಂ ಸಂಖ್ಯೆ 19.50, 19.52, 19.54 ಮತ್ತು 19.56) ಇಲಾಖೆಯು ತಪ್ಪಾಗಿ ಅಳವಡಿಸಿಕೊಂಡಿತ್ತು, ಇದು ಕೊರೆಯುವ ಸಮಯದಲ್ಲಿ ಹಾನಿಗೊಳಗಾದ ಕೆಳಭಾಗದ ಪದರವನ್ನು ಸರಿಪಡಿಸಲು ಗುತ್ತಿಗೆದಾರನು ಬಾಧ್ಯತೆಯನ್ನು ಹೊಂದಿರುವ ಮೇಲ್ಮೈಯ ನವೀಕರಣ ಅಥವಾ ಕೊರದಾಗ ಸಿಗುವ ವಸ್ತುಗಳನ್ನು ಉಪ–ಮೂಲ ಪದರದಲ್ಲಿ ಮರುಬಳಕೆ ಮಾಡಲಾಗುವ ಪ್ರಕರಣಗಳಲ್ಲಿ ಅಳವಡಿಸಿಕೊಳ್ಳಲಾಗುತ್ತದೆ. ಹೀಗೆ, **ಅನುಬಂಧ–3.7**ರಲ್ಲಿ ವಿವರಿಸಿದಂತೆ, ತಪ್ಪಾದ ದರವನ್ನು ಅಳವಡಿಸಿಕೊಳ್ಳುವುದರಿಂದ ಗುತ್ತಿಗೆದಾರರಿಗೆ ₹6.78 ಕೋಟಿ ಹೆಚ್ಚುವರಿ ಒಪ್ಪಂದದ ಲಾಭದಲ್ಲಿ ಪರಿಣಮಿಸಿತು.

ಸರ್ಕಾರವು ₹1.88 ಕೋಟಿಯನ್ನು ವಸೂಲು ಮಾಡಲಾಗಿದೆ ಮತ್ತು ಉಳಿದ ಬಾಕಿಯನ್ನು ವಸೂಲು ಮಾಡಲಾಗುವುದು ಎಂದು ಆಗಸ್ಟ್ 2022ರಲ್ಲಿ ತಿಳಿಸಿತು.

3.2.5 ಬಿಟುಮೆನ್ ಕಡಿಮೆ ಬಳಕೆಯಿಂದಾಗಿ ಹೆಚ್ಚುವರಿ ಪಾವತಿ

ಎಮ್ಒಆರ್ಟಿಹೆಚ್ ಜಾರಿಮಾಡಿರುವ ರಸ್ತೆ ಮತ್ತು ಸೇತುವೆ ಕಾಮಗಾರಿಗಳ ವಿಶಿಷ್ಟತೆಗಳು ಬಿಟುಮಿನಸ್ ಕಾಂಕ್ರೀಟ್ಅನ್ನು (ಬಿಸಿ) ವೇರಿಂಗ್ ಕೋರ್ಸ್ಆಗಿ ಒದಗಿಸಲು ಗುತ್ತಿಗೆದಾರನು ಉದ್ಯೋಗ ಮಿಶ್ರಣ ಸೂತ್ರವನ್ನು (ಜೆಎಮ್ಎಫ್) ಪ್ರಸ್ತಾವಿಸುವ ಅಗತ್ಯವಿದೆ ಎಂದು ನಿಗದಿಪಡಿಸಿವೆ. ಗುತ್ತಿಗೆದಾರನು ಜೆಎಮ್ಎಫ್ ಸರಿಯಾಗಿದೆ ಮತ್ತು ಕಾಮಗಾರಿಯಲ್ಲಿ ಬಳಸಬೇಕಾದ ವಸ್ತುಗಳ ಮಾದರಿಯನ್ನು ನೈಜವಾಗಿ ಪ್ರತಿನಿಧಿಸುತ್ತದೆ ಎಂದು ಖಚಿತಪಡಿಸಿಕೊಳ್ಳಬೇಕು. ಜೆಎಮ್ಎಫ್ನ ಅನುಮೋದನೆಯು ಇಂಜಿನಿಯರ್–ಇನ್–ಚಾರ್ಜ್ರವರ ಸ್ವತಂತ್ರ ಪರೀಕ್ಷೆಯನ್ನು ಅವಲಂಬಿಸಿದೆ. ಎಮ್ಒಆರ್ಟಿಹೆಚ್ ಕೋಷ್ಟಕ 500.17ರ (2013) ಪ್ರಕಾರ, ಬಿಸಿ (ವರ್ಗ–II)ಗೆ ಬಳಸಬೇಕಾದ ಕನಿಷ್ಠ ಬಿಟುಮೆನ್ ಅಂಶವು ಒಟ್ಟು ಮಿಶ್ರಣದ ಶೇಕಡಾ 5.4ರಷ್ಟಿರಬೇಕು.

ಮಂಜೂರಾದ ಅಂದಾಜಿನ ಪ್ರಕಾರ ಗುತ್ತಿಗೆದಾರರು ಬಿ.ಸಿ ಐಟಂಗೆ ಶೇಕಡಾ 6ರಷ್ಟು ಬಿಟುಮೆನ್ ಬಳಸಬೇಕಿತ್ತು. ₹47.65 ಕೋಟಿ ವೆಚ್ಚದ ಒಂಬತ್ತು ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕ್ವಾಲಿಟಿ ಅಶ್ಯೂರೆನ್ಸ್ ಅಧಿಕಾರಿಗಳು ಅನುಮೋದಿಸಿದ ಜೆಎಮ್ಎಫ್ನ ಲೆಕ್ಕಪರಿಶೋಧನಾ ಪರಿಶೀಲನೆಯಲ್ಲಿ ಶೇಕಡಾ 6ರಷ್ಟು ಬಿಟುಮೆನ್ಗೆ ಪ್ರತಿಯಾಗಿ ಗುತ್ತಿಗೆದಾರರು ಒಟ್ಟು ಮಿಶ್ರಣದ ಒಟ್ಟು ತೂಕದಿಂದ ಶೇಕಡಾ 5.40ರಷ್ಟು ಬಿಟುಮೆನ್ಅನ್ನು ಬಿಸಿ ಮಿಶ್ರಣದ ಸಾಂದ್ರತೆಯ 2.35 ಗ್ರಾಮ್/ಸಿಸಿ ಗರಿಷ್ಠ ಮೌಲ್ಯದೊಂದಿಗೆ ಬಳಸಿದ್ದರು ಎಂಬುದು ತಿಳಿದುಬಂದಿತು. ಹೀಗೆ, ಕಡಿಮೆ ಪ್ರಮಾಣದ ಬಿಟುಮೆನ್ ಬಳಕೆಯಿಂದ ಗುತ್ತಿಗೆದಾರರಿಗೆ ₹0.53 ಕೋಟಿಗಳಷ್ಟು ಲಾಭವಾಯಿತು. **ಅನುಬಂಧ–3.8ರಲ್ಲಿ** ವಿವರಿಸಿದಂತೆ, ಒಪ್ಪಂದದ ನಿಬಂಧನೆಗಳ ಈ ಮೊತ್ತವನ್ನು ವಸೂಲು ಮಾಡಬೇಕು.

ಸರ್ಕಾರವು (ಆಗಸ್ಟ್ 2022) ತಂತ್ರಾಂಶ ದೋಷದಿಂದಾಗಿ ಅಂದಾಜುಗಳಲ್ಲಿ ಶೇಕಡಾ 6 ಎಂದು ತೋರಿಸಲಾಗಿತ್ತು ಎಂದು ಸರ್ಕಾರವು ತಿಳಿಸಿತು (ಆಗಸ್ಟ್ 2022). ತಪ್ಪನ್ನು ಸರಿಪಡಿಸಲು ಇ–ಪ್ರೊಕ್ಯೂರ್ಮೆಂಟ್ ಕೋಶದ ಯೋಜನಾ ನಿರ್ದೇಶಕರಿಗೆ ಪತ್ರ ಬರೆಯಲಾಗಿದೆ ಎಂದೂ ಸಹ ತಿಳಿಸಲಾಯಿತು. ಆದರೆ, ಈ ತಪ್ಪಿನಿಂದಾಗಿ ಗುತ್ತಿಗೆದಾರರಿಗೆ ಆಗಿರಬಹುದಾದ ಲಾಭದ ಬಗ್ಗೆ ಉತ್ತರವು ಮೌನವಾಗಿತ್ತು.

3.2.6 ಮಿತವ್ಯಯಕಾರಿಯಲ್ಲದ ತೆರವುಗೊಳಿಸುವಿಕೆ, ಗ್ರಬ್ಬಿಂಗ್' ಮತ್ತು 'ರಸ್ತೆ ಉತ್ಖನನ'

ಕರ್ನಾಟಕ ರಸ್ತೆಗಳು ಮತ್ತು ಸೇತುವೆಗಳ ಪ್ರಮಾಣಿತ ದರ ವಿಶ್ಲೇಷಣೆ (ಕೆಎಸ್ಆರ್ಆರ್ಬಿ) ಯಾಂತ್ರಿಕ ವಿಧಾನಗಳನ್ನು ಬಳಸಿಕೊಂಡು ರಸ್ತೆ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ದರಗಳನ್ನು ಒದಗಿಸುತ್ತದೆ. ಆದರೆ, ಯಂತ್ರಗಳು ಪ್ರವೇಶಿಸಲಾಗದ ಪ್ರದೇಶಗಳಿಗೆ ಅಥವಾ ಯಂತ್ರಗಳ ಬಳಕೆಯನ್ನು ಸಮರ್ಥಿಸುವಷ್ಟು ಕೆಲಸದ ಪ್ರಮಾಣವು ಹೆಚ್ಚಿಲ್ಲದಿದ್ದರೆ ಹಸ್ತಚಾಲಿತ ವಿಧಾನಗಳಿಗೂ ಸಹ ದರಗಳನ್ನು ಸಹ ಒದಗಿಸುತ್ತದೆ.

(ಎ) **ತೆರವುಗೊಳಿಸುವಿಕೆ ಮತ್ತು ಗ್ರಬ್ಬಿಂಗ್:** ತೆರವುಗೊಳಿಸುವಿಕೆ ಮತ್ತು ಗ್ರಬ್ಬಿಂಗ್, ಅಂದರೆ, ಯಾಂತ್ರಿಕ ವಿಧಾನದಿಂದ ಅನಗತ್ಯ ಮೇಲ್ಮೈ ವಸ್ತುಗಳನ್ನು ತೆಗೆಯುವ ದರವು ಹಸ್ತಚಾಲಿತ ವಿಧಾನಕ್ಕಿಂತ ಕಡಿಮೆಯಿದ್ದಿತು.

ಎಸ್ಎಚ್ಡಿಪಿ ಹಂತ–IIIರ 69 ಪ್ಯಾಕೇಜ್ಗಳು ಮತ್ತು 10 ಪಿಡಬ್ಲ್ಯೂಡಿ ವಿಭಾಗಗಳಲ್ಲಿ ₹2,569.11 ಕೋಟಿ ವೆಚ್ಚದ 122 ಕಾಮಗಾರಿಗಳಲ್ಲಿ ಗುತ್ತಿಗೆದಾರರು ತಾಂತ್ರಿಕ ಅವಶ್ಯಕತೆಗಳ ದೃಷ್ಟಿಯಿಂದ ಬುಲ್ಡೋಜರ್ಗಳನ್ನು ಹೊಂದಿದ್ದರೂ, ಇಲಾಖೆಯು ಹಸ್ತಚಾಲಿತ ವಿಧಾನದಲ್ಲಿ ತೆರವುಗೊಳಿಸುವ ಮತ್ತು ಗ್ರಬ್ಬಿಂಗ್ ಮಾಡುವ ಐಟಂಅನ್ನು ಸೇರಿಸಿತು. ಇದು ಗುತ್ತಿಗೆದಾರರು ಯಾಂತ್ರಿಕ ವಿಧಾನದಿಂದ ಮಾಡಿದ ಕಾಮಗಾರಿಗೆ ತಮ್ಮ ಉಲ್ಲೇಖಿಸಿದ ದರದಲ್ಲಿ ಹಸ್ತಚಾಲಿತ ವಿಧಾನಗಳಿಗೆ ಸಂಬಂಧಿಸಿದ ದರವನ್ನು ಲೋಡ್ ಮಾಡಲು ಮತ್ತು ಪಾವತಿಯನ್ನು ಪಡೆಯಲು ಅನುವು ಮಾಡಿಕೊಟ್ಟಿತು. ಹೀಗೆ

ಮಾಡಿದ ಪಾವತಿಯು ಒಪ್ಪಂದದ ಹೊರಗಿನ ಪಾವತಿಯಾಗಿತ್ತು ಮತ್ತು **ಅನುಬಂಧ–3.9**ರಲ್ಲಿ ತೋರಿಸಿರುವಂತೆ ₹3.05 ಕೋಟಿಗಳಷ್ಟು ಆರ್ಥಿಕ ಪ್ರಯೋಜನವನ್ನು ನೀಡಿದಂತಾಯಿತು.
ಅಂತಿಮ ಬಿಲ್ಲುಗಳನ್ನು ಇತ್ಯರ್ಥ ಮಾಡುವಾಗ ಗುತ್ತಿಗೆದಾರರಿಂದ ₹3.05 ಕೋಟಿಯನ್ನು ವಸೂಲು ಮಾಡುವುದಾಗಿ ಸರ್ಕಾರವು ತಿಳಿಸಿತು (ಆಗಸ್ಟ್ 2022).

(ಬಿ) **ರಸ್ತೆಮಾರ್ಗ ಉತ್ಖನನ:** ಇಲಾಖೆಯ ದರಪಟ್ಟಿ ಅನುಸೂಚಿತ ಮತ್ತು ಎಮ್ಒಆರ್ಟಿಹೆಚ್ನ ಸ್ಟ್ಯಾಂಡರ್ಡ್ ಡೇಟಾ ಬುಕ್ನ ಪ್ರಕಾರ, ಮಣ್ಣು/ಬಂಡೆಯ ಉತ್ಖನನದ ಘಟಕದ ದರವನ್ನು ಮುಖ್ಯವಾಗಿ ಮೂರು ವಿಧಾನಗಳನ್ನು ಅಳವಡಿಸಿಕೊಂಡು ಲೆಕ್ಕ ಹಾಕಲಾಗುತ್ತದೆ, ಅವುಗಳೆಂದರೆ ಹಸ್ತಚಾಲಿತ ಉತ್ಖನನ, ಬುಲ್ಡೋಜರ್ ಬಳಸಿ ಉತ್ಖನನ ಮತ್ತು ಹೈಡ್ರಾಲಿಕ್ ಎಕ್ಸ್ಕವೇಟರ್ ಮೂಲಕ ಉತ್ಖನನ.

ಹಸ್ತಚಾಲಿತ ವಿಧಾನದಿಂದ ಉತ್ಖನನ ಮಾಡುವ ಘಟಕದ ದರವು ಯಾಂತ್ರಿಕ ಉತ್ಖನನ ವಿಧಾನಗಳಿಗಿಂತ ಎರಡು ಪಟ್ಟು ದುಬಾರಿಯಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ರಾಧಾಕೃಷ್ಣ ಸಮಿತಿಯ ಶಿಫಾರಸುಗಳು ಮತ್ತು ಎಮ್ಒಆರ್ಟಿಹೆಚ್ ನ ಸ್ಟಾಂಡರ್ಡ್ ಡಾಟಾ ಬುಕ್‌ನಲ್ಲಿ ನೀಡಲಾದ ಮುನ್ನುಡಿಯಂತೆ, ಯಂತ್ರಗಳು ಪ್ರವೇಶಿಸಲಾಗದ ಪ್ರದೇಶಗಳಿಗೆ ಮತ್ತು ಸಣ್ಣ ಕಾಮಗಾರಿಗಳಿಗೆ ಹಸ್ತಚಾಲಿತ ಉತ್ಖನನ ಸಾಧನವನ್ನು ಬಳಸಬೇಕು. ಮೂರು ಪಿಡಬ್ಲ್ಯುಡಿ ವಿಭಾಗಗಳ ಐದು ಕಾಮಗಾರಿಗಳಲ್ಲಿ ಹಸ್ತಚಾಲಿತ ವಿಧಾನಗಳನ್ನು ಬಳಸಿ ಮಣ್ಣು ಅಗೆದಿರುವುದನ್ನು ಗಮನಿಸಲಾಯಿತು, ಆದರೆ ಎನ್ಐಟಿಗಳ ತಾಂತ್ರಿಕ ಅವಶ್ಯಕತೆಗಳ ಪ್ರಕಾರ, ಈ ಪ್ರಕರಣಗಳಲ್ಲಿ ಗುತ್ತಿಗೆದಾರರು ಅಗೆಯುವ ಯಂತ್ರಗಳ ಮೂಲಕ ಉತ್ಖನನವನ್ನು ಕೈಗೊಳ್ಳಬೇಕಿತ್ತು. **ಅನುಬಂಧ–3.10**ರಲ್ಲಿ ವಿವರಿಸಿದಂತೆ, ಗುತ್ತಿಗೆದಾರರು ಹಸ್ತಚಾಲಿತ ವಿಧಾನಗಳಿಗೆ ದರಗಳು ಪಡೆದು ಯಂತ್ರಗಳನ್ನು ಬಳಸಿ ಕಾಮಗಾರಿಗಳನ್ನು ನಿರ್ವಹಿಸಿದ್ದು ₹0.41 ಕೋಟಿಗಳಷ್ಟು ಅನಪೇಕ್ಷಿತ ಲಾಭಕ್ಕೆ ಕಾರಣವಾಯಿತು.

3.2.7 ಪ್ರೈಮರ್ ಮತ್ತು ಟ್ಯಾಕ್ ಕೋಟ್‌ಗೆ ವಿಶಿಷ್ಟತೆಯ ತಪ್ಪಾದ ಅಳವಡಿಕೆ

ಎಮ್ಒಆರ್ಟಿಹೆಚ್ ವಿಶಿಷ್ಟತೆಗಳ ಷರತ್ತು 502 ಬಿಟುಮಿನಸ್ ಟ್ರೀಟ್‌ಮೆಂಟ್ ಅಥವಾ ಮಿಶ್ರಣವನ್ನು ಅತಿಕ್ರಮಿಸುವ ಮೊದಲು ವೆಟ್ ಮಿಕ್ಸ್ ಮೆಕಾಡಮ್ (ಡಬ್ಲ್ಯುಎಮ್ಎಮ್) ಮತ್ತು ವಾಟರ್ ಬೌಂಡ್ ಮಕಾಡಮ್ (ಡಬ್ಲ್ಯುಬಿಎಮ್) ನಂತಹ ರಂಧ್ರಗಳಿರುವ ಗ್ರ್ಯಾನ್ಯುಲರ್ ಮೇಲ್ಮೈಯಲ್ಲಿ ಕಡಿಮೆ ಸ್ನಿಗ್ಧತೆಯ ಬಿಟುಮಿನಸ್ ವಸ್ತುವನ್ನು ಒಳಗೊಂಡಿರುವ ಪ್ರೈಮರ್ ಕೋಟ್ ಅನ್ನು ಅನ್ವಯಿಸುತ್ತದೆ. ಪ್ರೈಮರ್ ಕೋಟನ್ನು ಆಯ್ಕೆಯು ಹರಳಿನ ಮೇಲ್ಮೈ ಮತ್ತು ಪ್ರೈಮರ್ ಅನ್ನು ಹಾಕುವ ಸಮಯದಲ್ಲಿ ತಾಪಮಾನದ ಸರಂಧ್ರ ಗುಣಲಕ್ಷಣಗಳನ್ನು ಅವಲಂಬಿಸಿರುತ್ತದೆ.

ಮೂರು ಮಾದರಿ ವಿಭಾಗಗಳಲ್ಲಿ (ಚಿಕ್ಕಮಗಳೂರು, ಕೋಲಾರ ಮತ್ತು ಹಾಸನ) ₹45.50 ಕೋಟಿ ವೆಚ್ಚದ ಮೂರು ಅಂದಾಜುಗಳ ಲೆಕ್ಕಪರಿಶೋಧನಾ ಪರಿಶೀಲನೆಯು ಹೆಚ್ಚಿನ ವಿಶಿಷ್ಟತೆಯ ಅಂಶ ಮಾತ್ರವಲ್ಲದೆ ದುಬಾರಿಯಾಗಿರುವ 'ಮೀಡಿಯಮ್ ಕ್ಯೂರ್ ಕಟ್‌ಬ್ಯಾಕ್'ಗೆ ಅಂದಾಜುಗಳನ್ನು ಒದಗಿಸಿದೆ ಎಂದು ತಿಳಿದುಬಂದಿತು. ಹೇಳಲಾದ ಐಟಂ ಅನ್ನು ಸಾಮಾನ್ಯವಾಗಿ 'ಸಿಮೆಂಟ್ ಸ್ಟೆಬಿಲೈಸ್ಡ್ ಸೋಲ್ ಬೇಸ್' ನಂತಹ ಮೇಲ್ಮೈಯಲ್ಲಿ ಅಥವಾ ಉಪ–ಶೂನ್ಯ ತಾಪಮಾನದಲ್ಲಿರುವ ಸೈಟ್‌ಗಳಲ್ಲಿ ಅಥವಾ ತುರ್ತು ಅಪ್ಲಿಕೇಶನ್‌ಗಳಲ್ಲಿ ಬಳಸಲಾಗುತ್ತದೆ. ಆದರೆ ಡಬ್ಲ್ಯುಎಮ್ಎಮ್ ನಂತಹ ಗ್ರ್ಯಾನ್ಯುಲರ್ ಬೇಸ್ ನಿರ್ಮಾಣಕ್ಕಾಗಿ ಒದಗಿಸಲಾದ ಈ ಅಂದಾಜುಗಳು ಎಸ್ಆರ್ನ ಐಟಂ ಸಂಖ್ಯೆ. 21.6 ರ ಅಡಿಯಲ್ಲಿ ದರವನ್ನು (ಸಾಮಾನ್ಯ ವಿವರಣೆಯ ಪ್ರೈಮರ್ ಅಗ್ಗವಾಗಿದೆ) ಮಾತ್ರ ಅಳವಡಿಸಿಕೊಳ್ಳಬೇಕಾಗಿತ್ತು.

ಅಲ್ಲದೆ, ಸಾಮಾನ್ಯ ವಿಶಿಷ್ಟತೆಯ (ದರಪಟ್ಟಿ ಐಟಂ ಸಂಖ್ಯೆ 21.7) ಟ್ಯಾಕ್ ಕೋಟ್‌ಅನ್ನು ಸಿದ್ಧಪಡಿಸಿದ ಪ್ರೈಮ್ಡ್ ಮೇಲ್ಮೈಯಲ್ಲಿ ಅನ್ವಯಿಸಲಾಗುತ್ತದೆ ಮತ್ತು ಹೆಚ್ಚಿನ ವಿಶಿಷ್ಟತೆಯ (ದರಪಟ್ಟಿ ಐಟಂ ಸಂಖ್ಯೆ. 21.9) ಟ್ಯಾಕ್ ಕೋಟ್‌ಅನ್ನು ಅಸ್ತಿತ್ವದಲ್ಲಿರುವ ಅನ್–ಪ್ರೈಮ್ಡ್ ಗ್ರ್ಯಾನ್ಯುಲರ್ ಅಥವಾ ಬಿಟುಮಿನಸ್ ಮೇಲ್ಮೈಯಲ್ಲಿ

ಬಂಧಿಸುವ ಅಂಶವಾಗಿ ಹಾಕಲಾಗುತ್ತದೆ. ಧಾರವಾಡ ವಿಭಾಗದಲ್ಲಿ ₹13.10 ಕೋಟಿ ವೆಚ್ಚದ ಎರಡು ಪ್ರಕರಣಗಳಲ್ಲಿ ಬೆಲೆಬಾಳುವ ಟ್ಯಾಕ್ ಕೋಟ್‌ಅನ್ನು (ಐಟಂ ನಂ. 21.9) ಪ್ರೈಮ್ಡ್ ಗ್ರ್ಯಾನ್ಯುಲರ್ ಬೇಸ್ ಮೇಲೆ ಹಾಕಲಾಗಿದ್ದು, ಅಲ್ಲಿ ಅಗ್ಗದ ದರದ ಟ್ಯಾಕ್ ಕೋಟ್ (ಐಟಂ ನಂ. 21.7) ಸಾಕಾಗುತ್ತಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಪ್ರೈಮರ್ ಕೋಟ್ ಮತ್ತು ಟ್ಯಾಕ್ ಕೋಟ್‌ಗೆ ತಾಂತ್ರಿಕ ವಿಶಿಷ್ಟತೆಯ ತಪ್ಪಾದ ಅಳವಡಿಕೆಯು **ಅನುಬಂಧ–3.11**ರಲ್ಲಿ ವಿವರಿಸಿದಂತೆ ₹0.85 ಕೋಟಿ ಹೆಚ್ಚುವರಿ ವೆಚ್ಚದಲ್ಲಿ ಪರಿಣಮಿಸಿತು.

ಸರ್ಕಾರವು ಲೆಕ್ಕಪರಿಶೋಧನಾ ವೀಕ್ಷಣೆಯನ್ನು ಒಪ್ಪಿಕೊಂಡಿತು (ಆಗಸ್ಟ್ 2022) ಮತ್ತು ಪರೀಕ್ಷಾ ವರದಿಗಳನ್ನು ಹೋಲಿಕೆ ಮಾಡುವ ಮೂಲಕ ಕ್ಷೇತ್ರ ಮಟ್ಟದಲ್ಲಿ ಪ್ರೈಮರ್ ಮತ್ತು ಟ್ಯಾಕ್ ಕೋಟ್ ಬಳಕೆಗೆ ಸಂಬಂಧಿಸಿದಂತೆ ಪರಿಶೀಲಿಸಲು ಒಪ್ಪಿಕೊಂಡಿತು ಹಾಗೂ ಮೊತ್ತವನ್ನು ವಸೂಲು ಮಾಡುವ ಭರವಸೆ ನೀಡಿತು.

3.2.8 ಪ್ರಾಸಂಗಿಕ ಕಾಮಗಾರಿಯನ್ನು ಪ್ರತ್ಯೇಕ ಐಟಂ ಆಗಿ ತಪ್ಪಾಗಿ ಸೇರಿಸುವುದು

ಎಮ್‌ಒಆರ್‌ಟಿಹೆಚ್‌ನ ಷರತ್ತು 501 ಪ್ರಿಮಿಕ್ಸ್ಡ್ ಬಿಟುಮಿನಸ್ ವಸ್ತುಗಳನ್ನು ಹಾಕಲು ಗುತ್ತಿಗೆ ಘಟಕ ದರದ ಪಾವತಿಯನ್ನು ನಿಯಂತ್ರಿಸುತ್ತದೆ. ಷರತ್ತು 501.8.71ರ ಪ್ರಕಾರ, ಮೆಕ್ಯಾನಿಕಲ್ ಬ್ರೂಮ್ ಮತ್ತು ಏರ್–ಜೆಟ್ ಅನ್ನು ಬಳಸಿಕೊಂಡು 'ಮೇಲ್ಮೈಯನ್ನು ಸ್ವಚ್ಛಗೊಳಿಸುವ' ಕೆಲಸವು ಮೇಲ್ಮೈ ತಯಾರಿಕೆಯ ಕೆಲಸಕ್ಕೆ ಪ್ರಾಸಂಗಿಕವಾಗಿರಬೇಕು. ಮೇಲ್ಮೈಯ ಶುಚಿಗೊಳಿಸುವಿಕೆಯು ಪ್ರೈಮರ್/ಟ್ಯಾಕ್ ಕೋಟ್‌ಗಳನ್ನು ಅನ್ವಯಿಸುವ ಒಂದು ಭಾಗವಾಗಿದೆ ಎಂದು ಕೆಎಸ್‌ಆರ್‌ಆರ್‌ಬಿಗೆ ಲಗತ್ತಿಸಲಾದ ದರ ವಿಶ್ಲೇಷಣೆಯು ಸೂಚಿಸುತ್ತದೆ. ಹೀಗೆ, ಅಂದಾಜುಗಳಲ್ಲಿ ಪ್ರೈಮರ್/ಟ್ಯಾಕ್ ಕೋಟ್‌ಗಳನ್ನು ಅನ್ವಯಿಸಲು ಒದಗಿಸುವುದಿದ್ದರೆ, ಅದಕ್ಕೆ ಮೇಲ್ಮೈ ಶುಚಿಗೊಳಿಸುವಿಕೆಗೆ ಪ್ರತ್ಯೇಕ ಪಾವತಿ ಮಾಡಲಾಗುವುದಿಲ್ಲ.

ಅಂದಾಜಿನಲ್ಲಿ ಪ್ರೈಮರ್/ಟ್ಯಾಕ್ ಕೋಟ್‌ಗಳಿಗೆ ಅವಕಾಶವನ್ನು ಮಾಡಲಾಗಿದ್ದರೂ, 'ಮೇಲ್ಮೈಯನ್ನು ಸ್ವಚ್ಛಗೊಳಿಸುವ' ಕೆಲಸವನ್ನು ಪ್ರತ್ಯೇಕ ಐಟಂ ಆಗಿ ಸೇರಿಸಲಾಗಿತ್ತು ಮತ್ತು ₹0.41 ಕೋಟಿ (**ಅನುಬಂಧ–3.12**) ಪಾವತಿಸಲಾಗಿತ್ತು ಎಂಬುದನ್ನು ₹139.00 ಕೋಟಿ ವೆಚ್ಚದ 17 ಅಂದಾಜುಗಳ ಲೆಕ್ಕಪರಿಶೋಧನಾ ಪರಿಶೀಲನೆಯು ತಿಳಿಯಪಡಿಸಿತು. ಗುತ್ತಿಗೆದಾರರಿಗೆ ಹೆಚ್ಚಿನ ಪಾವತಿಯ ಜೊತೆಗೆ, ಪ್ರಾಸಂಗಿಕ ಕೆಲಸವನ್ನು ಪ್ರತ್ಯೇಕ ಐಟಂ ಆಗಿ ಕಾನೂನುಬಾಹಿರವಾಗಿ ಸೇರಿಸಿರುವುದು, ಅಂದಾಜುಗಳನ್ನು ಸಿದ್ಧಪಡಿಸುವ ಮತ್ತು ಅನುಮೋದಿಸುವ ಹೊಣೆಗಾರಿಕೆ ಇರುವ ಅಧಿಕಾರಿಗಳ ಮೇಲ್ವಿಚಾರಣೆಯ ಕೊರತೆಯನ್ನು ಸೂಚಿಸುತ್ತದೆ.

ಈ ರಸ್ತೆಗಳಲ್ಲಿ ಹೆಚ್ಚಿನ ಸಂಚಾರ ದಟ್ಟಣೆಯ ಕಾರಣ ನಿವೇಶಬನದ ಸ್ಥಿತಿಯ ಪ್ರಕಾರ ಮೇಲ್ಮೈಯನ್ನು ಸ್ವಚ್ಛಗೊಳಿಸುವುದನ್ನು ಪ್ರತ್ಯೇಕ ಐಟಂ ಆಗಿ ಒದಗಿಸಲಾಗಿತ್ತು ಎಂದು ಸರ್ಕಾರವು ತಿಳಿಸಿತು (ಆಗಸ್ಟ್ 2022).

ವಿಶಿಷ್ಟತೆಗಳ ಪ್ರಕಾರ ಪ್ರೈಮರ್/ಟ್ಯಾಕ್ ಕೋಟ್‌ಗಳನ್ನು ಹಾಕುವುದು ಮೇಲ್ಮೈಯನ್ನು ಶುಚಿಗೊಳಿಸುವುದನ್ನು ಒಳಗೊಂಡಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

3.2.9 ಸಿಮೆಂಟ್ ಕಾಂಕ್ರೀಟ್ ರಸ್ತೆಗಳ ನಿರ್ಮಾಣದಲ್ಲಿ ಹೆಚ್ಚುವರಿ ಸಿಮೆಂಟ್ ಒದಗಿಸುವುದು

ಎಮ್‌ಒಆರ್‌ಟಿಹೆಚ್ ವಿಶಿಷ್ಟತೆಗಳ ಸೆಕ್ಷನ್ 601.3.3 ಮತ್ತು 602.3.2, ಪ್ರತಿ ಚದರ ಮೀಟರ್ ಡ್ರೈ ಲೀನ್ ಕಾಂಕ್ರೀಟ್ (ಡಿಎಲ್‌ಸಿ) ಮತ್ತು ಪೇವಮೆಂಟ್ ಕ್ವಾಲಿಟಿ ಕಾಂಕ್ರೀಟ್ (ಪಿಕ್ಯೂಸಿ) ಗಳಿಗಾಗಿ ಅನುಕ್ರಮವಾಗಿ ಕನಿಷ್ಠ 150 ಕೆಜಿ ಮತ್ತು 360 ಕೆಜಿ ಸಿಮೆಂಟ್ ಅಂಶದ ಬಳಕೆಯನ್ನು ನಿಗದಿಪಡಿಸಿದೆ. ನಿಗದಿತ ಸಾಮರ್ಥ್ಯದ ಕಾಂಕ್ರೀಟ್‌ಅನ್ನು ಉತ್ಪಾದಿಸಲು ಈ ಕನಿಷ್ಠ ಸಿಮೆಂಟ್ ಅಂಶವು ಸಾಕಾಗದೇ ಇದ್ದರೆ, ಗುತ್ತಿಗೆದಾರನು ತನ್ನ ಸ್ವಂತ ವೆಚ್ಚದಲ್ಲಿ ಅದನ್ನು ಅನುಗುಣವಾಗಿ ಹೆಚ್ಚಿಸಬೇಕು ಎಂದು ಸಹ ಷರತ್ತು ವಿಧಿಸುತ್ತದೆ.

ಹಂತ–III ಮತ್ತು ಹಂತ–IVರ ಅಡಿಯಲ್ಲಿ ಎಸ್‌ಹೆಚ್‌ಡಿಪಿ ಕೈಗೆತ್ತಿಕೊಂಡ 292 ಪ್ಯಾಕೇಜ್‌ಗಳಲ್ಲಿ 49ರ ಲೆಕ್ಕಪರಿಶೋಧನೆಯು ₹1294.85 ಕೋಟಿ ವೆಚ್ಚದಲ್ಲಿ, ಕೆಳಗೆ ವಿವರಿಸಿದಂತೆ, ಸಿಸಿ ರಸ್ತೆಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ತಪ್ಪಾಗಿ ಅಂದಾಜು ಮಾಡಿರುವುದನ್ನು ತಿಳಿಯಪಡಿಸಿತು.

ಎಸ್‌ಎಚ್‌ಡಿಪಿಯ ಹಂತ–III ರಡಿಯಲ್ಲಿ ಹತ್ತು ಪ್ಯಾಕೇಜ್‌ಗಳು ಮತ್ತು ₹370.74 ಕೋಟಿಗೆ ಮಂಜೂರಾದ ನಾಲ್ಕು ವಿಭಾಗಗಳಲ್ಲಿನ 7 ಕಾಮಗಾರಿಗಳಲ್ಲಿ, ವಿಭಾಗಗಳು ಡಿಎಲ್‌ಸಿಯ ಪ್ರತಿ ಚದರ ಮೀಟರ್‌ಗೆ 160 ಕೆಜಿ ಮತ್ತು ಪಿಕ್ಯೂಸಿ ಪಾದಚಾರಿ ರಸ್ತೆಯ ಪ್ರತಿ ಚದರ ಮೀಟರ್‌ಗೆ 420 ಕೆಜಿ ಸಿಮೆಂಟ್ ಅಂಶವನ್ನು ತಪ್ಪಾಗಿ ಅಳವಡಿಸಿಕೊಂಡಿದ್ದವು. ಎಸ್‌ಎಚ್‌ಡಿಪಿಯ 4ನೇ ಹಂತದ ಅಡಿಯಲ್ಲಿನ 39 ಪ್ಯಾಕೇಜ್‌ಗಳಲ್ಲಿ ಮತ್ತು ನಾಲ್ಕು ವಿಭಾಗಗಳಲ್ಲಿ ₹1071.48 ಕೋಟಿ ಮಂಜೂರಾಗಿದ್ದ ಎಂಟು ಕಾಮಗಾರಿಗಳಲ್ಲಿ ಡಿಎಲ್‌ಸಿಗೆ ಸಿಮೆಂಟ್ ಅಂಶವನ್ನು ಸರಿಯಾಗಿ ಅಳವಡಿಸಲಾಗಿತ್ತು. ಆದರೆ ಎಮ್–40 ದರ್ಜೆಯ ಕಾಂಕ್ರೀಟ್‌ನ ಪಿಕ್ಯೂಸಿ ಪಾದಚಾರಿ ರಸ್ತೆಗೆ ಪ್ರತಿ ಚದರ ಮೀಟರ್‌ಗೆ 360 ಕೆಜಿ ನಿಗದಿತ ಕನಿಷ್ಠ ಸಿಮೆಂಟ್ ಅಂಶಕ್ಕೆ ಪ್ರತಿಬಾಗಿ ಪ್ರತಿ ಚದರ ಮೀಟರ್‌ಗೆ 420 ಕೆಜಿಯಷ್ಟು ಸಿಮೆಂಟ್ ಅಂಶವನ್ನು ತಪ್ಪಾಗಿ ಅಳವಡಿಸಿಕೊಳ್ಳಲಾಗಿತ್ತು. ಹೀಗೆ, ಎಮ್‌ಒಆರ್‌ಟಿಹೆಚ್ ಮತ್ತು ಐಎಸ್[8] ವಿಶಿಷ್ಟತೆಗಳ ಪ್ರಕಾರ ಸರಿಯಾದ ಸಿಮೆಂಟ್ ಅಂಶವನ್ನು ಅಳವಡಿಸಿಕೊಳ್ಳದಿದ್ದುದು ಸರ್ಕಾರಿ ವೆಚ್ಚದಲ್ಲಿ ಪಿಕ್ಯೂಸಿ ಪಾದಚಾರಿ ಮಾರ್ಗದಲ್ಲಿ ಪ್ರತಿ ಚದರ ಮೀಟರ್ ಡಿಎಲ್‌ಸಿಗೆ 10 ಕೆಜಿ ಮತ್ತು ಎಮ್–40 ದರ್ಜೆಯ ಕಾಂಕ್ರೀಟ್‌ಗೆ 60 ಕೆಜಿ ಸಿಮೆಂಟ್‌ನ ಹೆಚ್ಚುವರಿ ಬಳಕೆಯಲ್ಲಿ ಪರಿಣಮಿಸಿತಲ್ಲದೇ, ಅನುಬಂಧ–3.13 ರಲ್ಲಿ ವಿವರಿಸಿದಂತೆ, ಗುತ್ತಿಗೆದಾರರಿಗೆ ₹6.27 ಕೋಟಿ ಅನುಚಿತ ಲಾಭ ನೀಡಿದಂತಾಯಿತು.

ಲೆಕ್ಕಪರಿಶೋಧನೆಯ ಅವಲೋಕನವನ್ನು ಒಪ್ಪಿಕೊಳ್ಳುತ್ತಾ (ಆಗಸ್ಟ್ 2022) ಸರ್ಕಾರವು ಸಿಮೆಂಟ್ ಕಾಂಕ್ರೀಟ್ ಪಾದಚಾರಿ ಮಾರ್ಗವು ಬಾಗುವ ಒತ್ತಡದಿಂದಾಗಿ ಕೆಲವು ಬಾರಿ ವಿಫಲಗೊಳ್ಳುತ್ತದೆ, ಹಾಗಾಗಿ ಸಿಮೆಂಟ್ ಕಾಂಕ್ರೀಟ್ ಪಾದಚಾರಿ ಮಾರ್ಗವನ್ನು ಕಾಂಕ್ರೀಟ್‌ನ ಬಾಗುವ ಬಲವನ್ನು ಆಧರಿಸಿ ವಿನ್ಯಾಸಗೊಳಿಸಲಾಗಿದೆ ಎಂದು ತಿಳಿಸಿತು.

ಡಿಎಲ್‌ಸಿ ಮತ್ತು ಪಿಕ್ಯೂಸಿಗೆ ಸಂಬಂಧಿಸಿದಂತೆ, ನಿಗದಿತ ಕನಿಷ್ಠ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಬಳಸಲಾದ ಸಿಮೆಂಟ್ ಕಾಂಕ್ರೀಟ್ ಅನ್ನು ಗುತ್ತಿಗೆದಾರರ ಸ್ವಂತ ವೆಚ್ಚದಿಂದ ಪೂರೈಸಬೇಕು ಎಂದು ಎಮ್‌ಒಆರ್‌ಟಿಹೆಚ್ ಷರತ್ತು ವಿಧಿಸಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

ಶಿಫಾರಸು–4: ಪ್ರಾಥಮಿಕ/ವಿವರವಾದ ಅಂದಾಜುಗಳು ಕಾರ್ಯಗತಗೊಳಿಸಬೇಕಾದ ಕಾಮಗಾರಿಗಳ ವೆಚ್ಚ, ವ್ಯಾಪ್ತಿ ಮತ್ತು ಗುಣಮಟ್ಟವನ್ನು ವ್ಯಾಖ್ಯಾನಿಸುವುದರಿಂದ, ನಿಗದಿತ ಪರೀಕ್ಷೆಗಳು ಮತ್ತು ಸಮೀಕ್ಷೆಯ ಫಲಿತಾಂಶಗಳಿಂದ ಬೆಂಬಲಿತವಾಗಿ, ಅವುಗಳನ್ನು ಐಆರ್‌ಸಿ ನಿಯಮಗಳು ಮತ್ತು ಸರ್ಕಾರದ ಸೂಚನೆಗಳ ಪ್ರಕಾರ ಕಟ್ಟುನಿಟ್ಟಾಗಿ ಸಿದ್ಧಪಡಿಸಬೇಕು.

3.2.10 ರಸ್ತೆ ಅಗೆತದಿಂದ ಪಡೆದ ಮಣ್ಣನ್ನು ಬಳಸದಿರುವುದು

ರಸ್ತೆಮಾರ್ಗದ ಉತ್ಖನನದಿಂದ ಪಡೆದ ಮಣ್ಣನ್ನು ಅದೇ ಒಪ್ಪಂದದ ಅಡಿಯಲ್ಲಿ ಒಡ್ಡು ನಿರ್ಮಾಣಕ್ಕಾಗಿ ಬಳಸಲು ಆದ್ಯತೆಯನ್ನು ನೀಡಬೇಕು ಎಂದು ಎಮ್‌ಒಆರ್‌ಟಿಹೆಚ್ ವಿಶಿಷ್ಟತೆಗಳ ಅನುಚ್ಛೇದ 301.3.11 ನಿಗದಿಪಡಿಸುತ್ತದೆ. 2015ರ ಐಆರ್‌ಸಿ ಎಸ್‌ಪಿ 72ರ ಕಂಡಿಕೆ–4.3ರ ಪ್ರಕಾರ, ಶೇಕಡಾ ಐದು ಮತ್ತು ಅದಕ್ಕಿಂತ ಹೆಚ್ಚಿನ ಸಿಬಿಆರ್ ಮೌಲ್ಯದೊಂದಿಗೆ ಲಭ್ಯವಿರುವ ಮಣ್ಣನ್ನು ಸಬ್‌ಗ್ರೇಡ್ ನಿರ್ಮಾಣದಲ್ಲಿ ಬಳಸಬೇಕು. ಇದಲ್ಲದೆ, ವಸ್ತುಗಳ ಅತ್ಯಂತ ಮಿತವ್ಯಯದ ಸಾಧನಗಳನ್ನು ಪರಿಗಣಿಸಿ ಕಾಮಗಾರಿಯ ಅಂದಾಜನ್ನು ತಯಾರಿಸಬೇಕು ಮತ್ತು ಕಾಮಗಾರಿಯನ್ನು ಮಿತವ್ಯಯವಾಗಿ ಕಾರ್ಯಗತಗೊಳಿಸಬೇಕು ಎಂದು

[8] 2000ದ ಪರಿಷ್ಕೃತ ಐಎಸ್–456 ರ ಕೋಷ್ಟಕ–5 ಎಂ–40 ದರ್ಜೆಯ ಕಾಂಕ್ರೀಟ್‌ಗೆ ಕನಿಷ್ಠ 360 ಕೆಜಿ/ಪ್ರತಿ ಕ್ಯೂಬಿಕ್ ಮೀಟರ್‌ಗೆ ಬಳಕೆಯನ್ನು ಸೂಚಿಸುತ್ತದೆ

ಕೆಪಿಡಬ್ಲ್ಯೂಡಿ ಸಂಹಿತೆಯ ಕಂಡಿಕೆ–101 ಮತ್ತು ಕರ್ನಾಟಕ ಹಣಕಾಸು ಸಂಹಿತೆಯ 15 ಮತ್ತು 180ನೇ ವಿಧಿಗಳು ನಿಗದಿಪಡಿಸುತ್ತವೆ.

ಶೇಕಡಾ 6ರಿಂದ 11ರ ವ್ಯಾಪ್ತಿಯ ಸಿಬಿಆರ್ ಮೌಲ್ಯವನ್ನು ಹೊಂದಿರುವ ರಸ್ತೆ ಅಗೆತದಿಂದ ಪಡೆದ 2,77,154 ಚದರ ಮೀಟರ್ ಮಣ್ಣು ಲಭ್ಯವಿದ್ದರೂ ಸಹ ಎರವಲು ಹೊಂಡದಿಂದ ಒಟ್ಟು 2,59,007 ಚದರ ಮೀಟರ್ ಮಣ್ಣನ್ನು ಒಡ್ಡು ನಿರ್ಮಾಣಕ್ಕೆ ಬಳಸಿರುವುದು ಪರೀಕ್ಷಾ–ತನಿಖೆ ನಡೆಸಿದ ವಿಭಾಗಗಳಲ್ಲಿ 27 ಕಾಮಗಾರಿಗಳ ಪಾವತಿಸಿದ ಬಿಲ್ಲುಗಳ ಪರಿಶೀಲನೆಯಿಂದ ತಿಳಿದುಬಂದಿತು. ಅಂತಹ ಹೆಚ್ಚಿನ ಸಿಬಿಆರ್ ಮೌಲ್ಯದೊಂದಿಗೆ ಲಭ್ಯವಿರುವ ಮಣ್ಣನ್ನು ಬಳಸದಿರಲು ನಿರ್ದಿಷ್ಟ ಕಾರಣಗಳು ದಾಖಲೆಗಳಲ್ಲಿ ಕಂಡಬರಲಿಲ್ಲ. ಈ ಲಭ್ಯವಿರುವ ಮಣ್ಣಿನಲ್ಲಿ ಶೇಕಡಾ 50ರಷ್ಟು ಭಾಗವನ್ನು ಒಡ್ಡು ನಿರ್ಮಾಣಕ್ಕೆ ಬಳಸಲು ಪರಿಗಣಿಸಿದ್ದರೂ ಸಹ, **ಅನುಬಂಧ–3.14ರಲ್ಲಿ ವಿವರಿಸಿದಂತೆ,** ರಾಜ್ಯದ ಬೊಕ್ಕಸಕ್ಕೆ ₹2.76 ಕೋಟಿಗಳಷ್ಟು ಹಣ ಉಳಿತಾಯವಾಗುತ್ತಿತ್ತು.

3.2.11 ಹೆಚ್ಚಿನ ಪ್ರಮಾಣದ ರೋಡ್ ಸ್ಟಡ್ಸ್‌ಗಳನ್ನು ಅಳವಡಿಸಿರುವುದು

ಐಆರ್‌ಸಿ ಮಾರ್ಗಸೂಚಿಗಳು 2015ರ 35ರ ಪ್ರಕಾರ, ರಸ್ತೆ ಅಪಘಾತಗಳು ಸಂಭವಿಸಬಹುದಾದ ಜಂಕ್ಷನ್‌ಗಳು ಮತ್ತು ಕ್ರಾಸಿಂಗ್‌ಗಳಿಗೆ ಮುಂಚೆ ಹಾಗೂ ಫ್ಲೈಓವರ್ ವಿಭಾಗಗಳ ಕೊನೆಯಲ್ಲಿ ರಾತ್ರಿಯ ಸಮಯದಲ್ಲಿ ಮತ್ತು ಪ್ರತಿಕೂಲ ಹವಾಮಾನ ಪರಿಸ್ಥಿತಿಗಳಲ್ಲಿ ಗೋಚರತೆಯನ್ನು ಸುಧಾರಿಸಲು ಆರರಿಂದ ಹದಿನೆಂಟು ಮೀಟರ್‌ಗಳ ನಡುವಿನ ಅಂತರದಲ್ಲಿ ರೆಟ್ರೊ–ರಿಫ್ಲೆಕ್ಟಿವ್ ಸ್ಟಡ್‌ಗಳನ್ನು ಹಾಕಲಾಗುತ್ತದೆ. ಪಿಡಬ್ಲ್ಯೂಡಿ ತುಮಕೂರು, ಬೆಳಗಾವಿ ಮತ್ತು ಚಿಕ್ಕೋಡಿ ವಿಭಾಗದ ₹22.20 ಕೋಟಿ ವೆಚ್ಚದ ನಾಲ್ಕು ಕಾಮಗಾರಿಗಳಲ್ಲಿ ಆರು ಮೀಟರ್ ಬದಲಿಗೆ ಒಂದು ಮೀಟರ್ ಅಂತರದಲ್ಲಿ ರೋಡ್ ಸ್ಟಡ್‌ಗಳನ್ನು ಹಾಕಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಐಆರ್‌ಸಿ ಮಾನದಂಡಗಳನ್ನು ಉಲ್ಲಂಘಿಸಿ ಸ್ಟಡ್‌ಗಳ ಹೆಚ್ಚಿನ ಬಳಕೆಯು ₹0.25 ಕೋಟಿ (**ಅನುಬಂಧ–3.15**) ಹೆಚ್ಚುವರಿ ವೆಚ್ಚದಲ್ಲಿ ಪರಿಣಮಿಸಿತಲ್ಲದೇ ರಸ್ತೆ ಬಳಕೆದಾರರಿಗೆ ಅನಾನುಕೂಲತೆಯನ್ನು ಸಹ ಉಂಟು ಮಾಡಬಹುದು.

3.3 ರಸ್ತೆ ಸುರಕ್ಷತಾ ಲೆಕ್ಕಪರಿಶೋಧನೆ

ಸರ್ಕಾರವು ಜೂನ್ 2016ರಲ್ಲಿ ಮತ್ತು ಮಾರ್ಚ್ 2019ರಲ್ಲಿ ರಸ್ತೆ ಸುರಕ್ಷತೆಗಾಗಿ ಸುಪ್ರೀಂ ಕೋರ್ಟ್ ಸಮಿತಿಯ (ಎಸ್‌ಸಿಸಿಆರ್‌ಎಸ್) ಶಿಫಾರಸುಗಳನ್ನು ಜಾರಿಗೊಳಿಸಲು ಮತ್ತು ₹10 ಕೋಟಿ ಅಥವಾ ಹೆಚ್ಚು ವೆಚ್ಚದ ಎಲ್ಲಾ ರಸ್ತೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ರಸ್ತೆ ಸುರಕ್ಷತಾ ಲೆಕ್ಕಪರಿಶೋಧನೆ ನಡೆಸುವಂತೆ ಎಲ್ಲಾ ಇಲಾಖೆಗಳ ಮುಖ್ಯಸ್ಥರಿಗೆ ಸೂಚನೆ ನೀಡಿತು.

ರಸ್ತೆ ಸುರಕ್ಷತಾ ಲೆಕ್ಕಪರಿಶೋಧನೆಗೆ ಒಟ್ಟು ₹10.99 ಕೋಟಿಯನ್ನು ಒದಗಿಸಿದ್ದರೂ ಅವುಗಳನ್ನು ನಡೆಸಿರಲಿಲ್ಲ ಎಂದು ಎಸ್‌ಎಚ್‌ಡಿಪಿಯ ಹಂತ–IIIರ ಅಡಿಯಲ್ಲಿ ಮಂಜೂರಾದ ₹3500 ಕೋಟಿ ವೆಚ್ಚದ 127 ಪ್ಯಾಕೇಜ್‌ಗಳ ಲೆಕ್ಕಪರಿಶೋಧನೆಯು ತಿಳಿಯಪಡಿಸಿತು. ಸ್ಟೀರಿಂಗ್ ಕಮಿಟಿ ಶಿಫಾರಸುಗಳ ಆಧಾರದ ಮೇಲೆ (ಅಕ್ಟೋಬರ್ 2017) ಪ್ರತಿ ಕಿಲೋಮೀಟರ್‌ಗೆ ₹10000 ಮತ್ತು ಜಿಎಸ್‌ಟಿಯ ಒಟ್ಟು ಮೊತ್ತದ ಪಾವತಿಯ ಮೇಲೆ ರಸ್ತೆ ಸುರಕ್ಷತಾ ಪರಿಶೀಲನೆ ಕಾರ್ಯವನ್ನು ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸಲ್ಟೆಂಟ್‌ಗಳಿಗೆ (ಪಿಎಂಸಿ) ವಹಿಸಲಾಯಿತು. ಆಗಸ್ಟ್ 2021ರಲ್ಲಿದ್ದಂತೆ ರಾಜ್ಯ ಸರ್ಕಾರವು ₹3.43 ಕೋಟಿ ವೆಚ್ಚವನ್ನು ಮಾಡಿದೆ. ಈ ಪಿಎಮ್‌ಸಿಗಳನ್ನು ಈಗಾಗಲೇ ಎಸ್‌ಹೆಚ್‌ಡಿಪಿಯಿಂದ ಕೈಗೊಳ್ಳಲಾದ ರಸ್ತೆ ಯೋಜನೆಗಳ ಒಟ್ಟಾರೆ ಮೇಲ್ವಿಚಾರಣೆ ಮತ್ತು ನಿರ್ವಹಣೆಯಲ್ಲಿ (ಶೇ. 10 ರಷ್ಟು ಗುಣಮಟ್ಟ ಪರಿಶೀಲನೆ ಸೇರಿದಂತೆ) ತೊಡಗಿಸಿಕೊಂಡಿದ್ದರಿಂದ, ಅವರಿಗೆ ರಸ್ತೆ ಸುರಕ್ಷತಾ ಲೆಕ್ಕಪರಿಶೋಧನೆಯನ್ನು ವಹಿಸಿದ್ದು ಕ್ರಮಬದ್ಧವಾಗಿರಲಿಲ್ಲ.

ಅದೇ ರೀತಿ, ಹಂತ–IVರಡಿಯಲ್ಲಿ 165 ಪ್ಯಾಕೇಜ್‌ಗಳಲ್ಲಿ ಮತ್ತು ಏಳು ಪಿಡಬ್ಲ್ಯೂಡಿ ವಿಭಾಗಗಳಿಗೆ ಸಂಬಂಧಿಸಿದ 18 ಕಾಮಗಾರಿಗಳಲ್ಲಿ ತಾಂತ್ರಿಕ ಮಂಜೂರಾತಿಯನ್ನು ನೀಡುವ ಮೊದಲು ರಸ್ತೆ ಸುರಕ್ಷತಾ

ಲೆಕ್ಕಪರಿಶೋಧನೆಯನ್ನು ನಡೆಸಿರಲಿಲ್ಲ. ವಿವರಗಳನ್ನು **ಅನುಬಂಧ–3.16**ರಲ್ಲಿ ನೀಡಲಾಗಿದೆ. ಇದರಿಂದ ರಸ್ತೆ ಸುರಕ್ಷತೆಯ ದೃಷ್ಟಿಕೋನದಿಂದ ರಸ್ತೆ ಕಾಮಗಾರಿಗೆ ಸಿದ್ಧಪಡಿಸಿದ ವಿವರವಾದ ಅಂದಾಜುಗಳಿಗೆ ಸಲಹೆಗಳನ್ನು ವಂಚಿಸಿದಂತಾಯಿತು.

ಈ ವಿಷಯವನ್ನು ತಿಳಿಸಿದ ನಂತರ ಭವಿಷ್ಯದ ರಸ್ತೆ ಕಾಮಗಾರಿಗಳಿಗೆ ಬಾಹ್ಯ ಸ್ವತಂತ್ರ ಏಜೆನ್ಸಿಯಿಂದ ರಸ್ತೆ ಸುರಕ್ಷತಾ ಲೆಕ್ಕಪರಿಶೋಧನೆಯನ್ನು ನಡೆಸಲಾಗುವುದು ಎಂದು ಸರ್ಕಾರವು ತಿಳಿಸಿತು (ಆಗಸ್ಟ್ 2022).

ಶಿಫಾರಸು–5: ರಸ್ತೆ ಸುರಕ್ಷತಾ ಲೆಕ್ಕಪರಿಶೋಧನೆಗಳನ್ನು ಕಡ್ಡಾಯವಾಗಿ ನಡೆಸುವುದನ್ನು ಮತ್ತು ತಾಂತ್ರಿಕ ಮಂಜೂರಾತಿ ನೀಡುವ ಮೊದಲು ಅಂದಾಜುಗಳಲ್ಲಿ ಅಗತ್ಯವಿರುವ ರಸ್ತೆ ಸುರಕ್ಷತಾ ನಿಬಂಧನೆಗಳನ್ನು ಸೇರಿಸಲಾಗಿದೆ ಎಂಬುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು.

ಅಧ್ಯಾಯ 04

ಟೆಂಡರ್ ಮಾಡುವುದು, ಮೌಲ್ಯಮಾಪನ ಮತ್ತು ಗುತ್ತಿಗೆ ವಹಿಸುವಿಕೆ

ಅಧ್ಯಾಯ–4

ಟೆಂಡರ್ ಆಹ್ವಾನ, ಮೌಲ್ಯಮಾಪನ ಮತ್ತು ಗುತ್ತಿಗೆಗಳ ವಹಿಸುವಿಕೆ

ಇಲಾಖೆಯು ನಿರ್ಬಂಧಿತ ಟೆಂಡರ್ ಷರತ್ತುಗಳನ್ನು ನಿಗದಿಪಡಿಸಿ ಸ್ಪರ್ಧೆಯನ್ನು ಸೀಮಿತಗೊಳಿಸಿತು ಅಥವಾ ಅನರ್ಹ ಗುತ್ತಿಗೆದಾರರು ಭಾಗವಹಿಸಲು ಅವಕಾಶ ನೀಡಿತು. ಗುತ್ತಿಗೆಯನ್ನು ಮರುಟೆಂಡರ್ ಮಾಡದೆ ಸ್ಪಂದಿಸಿದ್ದ ಏಕ ಬಿಡ್ಡರ್‌ಗೆ ವಹಿಸಲಾಗಿತ್ತು. ಇದಲ್ಲದೆ, ಕಾಮಗಾರಿಗಳನ್ನು ಸಕಾಲಿಕವಾಗಿ ಪೂರ್ಣಗೊಳಿಸಲು ಬಿಡ್ ಸಾಮರ್ಥ್ಯ, ಹಣಕಾಸಿನ ಸಾಮರ್ಥ್ಯ, ಯಂತ್ರೋಪಕರಣಗಳು, ಲೋಹದ ಕ್ವಾರಿ ಮುಂತಾದ ಅಗತ್ಯ ಸಂಪನ್ಮೂಲಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಗುತ್ತಿಗೆದಾರರ ದತ್ತಸಂಚಯ ಇರಲಿಲ್ಲ. ಇ–ಟೆಂಡರಿಂಗ್ ಪ್ರಕ್ರಿಯೆಯನ್ನು ಅಳವಡಿಸಿಕೊಂಡಿದ್ದರೂ, ಬಿಡ್ ಮೌಲ್ಯಮಾಪನಗಳಲ್ಲಿ ಹಸ್ತಚಾಲಿತ ಮಧ್ಯಪ್ರವೇಶಗಳನ್ನು ಅನುಮತಿಸಿದ್ದು ಅನಪೇಕ್ಷಿತವಾಗಿತ್ತು. ಅವ್ಯವಹಾರಗಳಲ್ಲಿ ತೊಡಗಿರುವ ಬಿಡ್ಡರ್‌ಗಳ ಇಎಂಡಿಯನ್ನು ಮುಟ್ಟುಗೋಲು ಹಾಕಿಕೊಳ್ಳದಿರುವುದನ್ನು ಗಮನಿಸಲಾಯಿತು. ಟೆಂಡರ್‌ಗಳನ್ನು ಪೂರ್ಣಗೊಳಿಸಲು ಮತ್ತು ಕಾಮಗಾರಿಗಳನ್ನು ವಹಿಸಲು ವಿಳಂಬವಾಗಿತ್ತು.

ಕಾರ್ಯವಿಧಾನಗಳನ್ನು ಸರಳೀಕರಿಸಲು ಮತ್ತು ಸಾರ್ವಜನಿಕ ಖರೀದಿಯಲ್ಲಿ ಹೊಣೆಗಾರಿಕೆಯನ್ನು ಖಚಿತಪಡಿಸಿಕೊಳ್ಳಲು, ಕರ್ನಾಟಕ ಸರ್ಕಾರವು ಸಾರ್ವಜನಿಕ ಖರೀದಿಯಲ್ಲಿ ಕರ್ನಾಟಕ ಪಾರದರ್ಶಕತೆ ಕಾಯಿದೆ, 1999 ಮತ್ತು ನಿಯಮ, 2000 (ಕೆಟಿಪಿಪಿ ನಿಯಮಗಳು) ಜಾರಿಗೊಳಿಸಿತು. ಈ ನಿಯಮಗಳು ಮತ್ತು ಸೂಚನೆಗಳು ಸಾರ್ವಜನಿಕ ಗುತ್ತಿಗೆಯಲ್ಲಿ ಸ್ಪರ್ಧೆ, ನ್ಯಾಯಸಮ್ಮತೆಯನ್ನು ತರಲು ಮತ್ತು ವ್ಯವಸ್ಥೆಯಲ್ಲಿ ಸ್ವೇಚ್ಛಾನುಸಾರವಾಗಿ ವರ್ತಿಸುವುದನ್ನು ತಡೆಗಟ್ಟಲು ಪಾರದರ್ಶಕ ರೀತಿಯಲ್ಲಿ ನಡೆಸಬೇಕು ಎಂದು ನಿಗದಿಪಡಿಸುತ್ತವೆ. ಗುತ್ತಿಗೆದಾರರ ಆಯ್ಕೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯಸಮ್ಮತತೆಯನ್ನು ಖಚಿತಪಡಿಸಿಕೊಳ್ಳಲು ಟೆಂಡರ್ ವ್ಯವಸ್ಥೆ ಮತ್ತು ಗುತ್ತಿಗೆದಾರರ ಆಯ್ಕೆಯನ್ನು ಲೆಕ್ಕಪರಿಶೋಧನೆಯು ಪರಿಶೀಲಿಸಿತು ಮತ್ತು ಕಂಡುಬಂದ ಪ್ರಮುಖ ಅಂಶಗಳನ್ನು ಕೆಳಗಿನ ಕಂಡಿಕೆಗಳಲ್ಲಿ ವಿವರಿಸಲಾಗಿದೆ:

4.1 ಟೆಂಡರ್ ಆಹ್ವಾನಿಸುವ ಸೂಚನೆ ಮತ್ತು ಬಿಡ್ ದಾಖಲೆ

ಕರ್ನಾಟಕದಲ್ಲಿ, ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಮತ್ತು ಸಕ್ಷಮ ಪ್ರಾಧಿಕಾರಗಳಿಂದ ತಾಂತ್ರಿಕ ಮಂಜೂರಾತಿ ನೀಡಿದ ನಂತರ, ಹಣಕಾಸಿನ ಮೌಲ್ಯವನ್ನು ಪರಿಗಣಿಸದೆ ಎಲ್ಲಾ ರಸ್ತೆ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸುವ ಅಧಿಸೂಚನೆಯನ್ನು (ಎನ್‌ಐಟಿ) ನೀಡುವ ಅಧಿಕಾರವನ್ನು ಕಾರ್ಯನಿರ್ವಾಹಕ ಎಂಜಿನಿಯರ್‌ಗೆ ವಹಿಸಲಾಗಿದೆ.

4.1.1 ನಿರ್ಬಂಧಿತ ಗುತ್ತಿಗೆ ಷರತ್ತುಗಳು

ಕೆಪಿಡಬ್ಲ್ಯೂಡಿ 2014ರ ಕಂಡಿಕೆ–169(ಸಿ) ಪ್ರಕಾರ, ಅರ್ಹತಾ ಮಾನದಂಡಗಳು ಮತ್ತು ತಾಂತ್ರಿಕ ಅವಶ್ಯಕತೆಗಳು ನಿರ್ಬಂಧಿತ/ಪಕ್ಷಪಾತವಾಗಿರಬಾರದು ಮತ್ತು ನಿರ್ದಿಷ್ಟ ಸಲಕರಣೆಗಳ ವಿಶಿಷ್ಟತೆಗಳು ವಿಶಾಲವಾಗಿರಬೇಕು. ಆಯ್ದ ವಿಭಾಗಗಳಲ್ಲಿನ ದಾಖಲೆಗಳ ಪರೀಕ್ಷಾ–ತನಿಖೆಯ ಸಮಯದಲ್ಲಿ, ಟೆಂಡರ್ ಆಹ್ವಾನಿಸುವ ಅಧಿಕಾರಿಗಳು ಕಾಮಗಾರಿಗಳಿಗೆ ಅಗತ್ಯಕ್ಕಿಂತ ಹೆಚ್ಚಿನ ಯಂತ್ರೋಪಕರಣಗಳ ವಿಶಿಷ್ಟತೆಗಳನ್ನು ನಿಗದಿಪಡಿಸಿರುವುದನ್ನು ಗಮನಿಸಲಾಯಿತು. **ಕೋಷ್ಟಕ–4.1**ರಲ್ಲಿ ವಿವರಿಸಿದಂತೆ 153 ಪ್ರಕರಣಗಳಲ್ಲಿ ₹491.62 ಕೋಟಿ ಮೊತ್ತದ ಕಾಮಗಾರಿಗಳಿಗೆ ಉನ್ನತ ವರ್ಗದ ಗುತ್ತಿಗೆದಾರರಿಂದ ಮಾತ್ರ ಟೆಂಡರ್‌ಗಳನ್ನು ಆಹ್ವಾನಿಸುವ ಮೂಲಕ ಹೆಚ್ಚಿನ ಅರ್ಹ ಗುತ್ತಿಗೆದಾರರನ್ನು ಭಾಗವಹಿಸದಂತೆ ನಿರ್ಬಂಧಿಸಲಾಗಿತ್ತು.

ಕೋಷ್ಟಕ–4.1: ನಿರ್ಬಂಧಿತ ಟೆಂಡರ್ ಷರತ್ತುಗಳು

ಕ್ರಮ ಸಂಖ್ಯೆ	ಗುತ್ತಿಗೆಗಳ ಸಂಖ್ಯೆ	ಅಗತ್ಯವಿದ್ದ ವಿಶಿಷ್ಟತೆಗಳು	ಎನ್ಐಟಿಯಲ್ಲಿದ್ದ ಗುತ್ತಿಗೆದಾರರ ವಿಶಿಷ್ಟತೆಗಳು	ವಿವರಗಳನ್ನು ಇಲ್ಲಿ ನೀಡಲಾಗಿದೆ
1.	96	ವರ್ಗ I ಮತ್ತು II	ಕೇವಲ ವರ್ಗ–I ರಿಂದ	**ಅನುಬಂಧ–4.1**
2.	36	ವರ್ಗ I, II ಮತ್ತು III	ಕೇವಲ ವರ್ಗ–I ರಿಂದ	
3.	21	40/60 ಟಿಪಿಹೆಚ್[1] ಹೆಚ್ಎಮ್ಪಿ[2] ಮತ್ತು ಮೆಕ್ಯಾನಿಕಲ್ ಪೇವರ್ (ದರಪಟ್ಟಿಗಳಲ್ಲಿ ಸೂಚಿಸಲಾಗಿದೆ)	ಬಿಎಮ್ ಮತ್ತು ಎಸ್ಡಿಬಿಸಿ ಒದಗಿಸಲು 100/120 ಟಿಪಿಹೆಚ್ ಹಾಟ್ ಮಿಕ್ಸ್ ಪ್ಲಾಂಟ್ ಮತ್ತು ಒಂದು ಸೆನ್ಸರ್ ಪೇವರ್ ಅನ್ನು ಹೊಂದಿರುವ ಗುತ್ತಿಗೆದಾರರು	**ಅನುಬಂಧ–4.2**

ಅನುಬಂಧ–4.1ರಲ್ಲಿ ಉಲ್ಲೇಖಿಸಲಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ಟೆಂಡರ್ ಆಹ್ವಾನದ ಸಮಯದಲ್ಲಿ ಹಳೆಯ "ಡಿ–ಕೋಡ್" ಅನ್ನು ಅನುಸರಿಸಲಾಗಿದೆ ಎಂದು ಸರ್ಕಾರವು ತಿಳಿಸಿತು.

ಪರಿಷ್ಕೃತ "ಡಿ–ಕೋಡ್" ಜೂನ್ 2014ರಿಂದ ಜಾರಿಗೆ ಬಂದಿದ್ದು ಲೆಕ್ಕಪರಿಶೋಧನೆಯಲ್ಲಿ ಗಮನಿಸಿದ ಕಾಮಗಾರಿಗಳನ್ನು 2016–21ರ ಅವಧಿಯಲ್ಲಿ ಮಂಜೂರು ಮಾಡಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

ಕೇಸ್ ಸ್ಟಡಿ–4.1

ಕಾಮಗಾರಿಯ ಪ್ರಮಾಣ ಚಿಕ್ಕದಾಗಿದ್ದರೂ, ನಿರೀಕ್ಷಿತ ಬಿಡ್ದಾರರು 100ರಿಂದ 120 ಟಿಪಿಎಚ್ ಹಾಟ್ ಮಿಕ್ಸ್ ಪ್ಲಾಂಟ್ನ (ಎಚ್ಎಂಪಿ) ಮಾಲೀಕತ್ವವನ್ನು ಪ್ರದರ್ಶಿಸಲು ಕೇಳಲಾಯಿತು ಎಂಬುದು ಬೆಂಗಳೂರಿನ ಪಿಡಬ್ಲ್ಯುಡಿ ವಿಭಾಗದಲ್ಲಿ ₹19.58 ಕೋಟಿ ವೆಚ್ಚದ ಐದು ಕಾಮಗಾರಿಗಳ ಬಿಡ್ ದಾಖಲೆಗಳನ್ನು ಪರಿಶೀಲಿಸಿದಾಗ ತಿಳಿದುಬಂದಿತು. ಇದು ಬಿಡ್ಡಿಂಗ್‌ನಿಂದ 40 ರಿಂದ 60 ಟಿಪಿಹೆಚ್ ಹೆಚ್ಎಮ್ಪಿ ಹೊಂದಿರುವ ಅನೇಕ ನಿರೀಕ್ಷಿತ ಬಿಡ್ದಾರರನ್ನು ನಿರ್ಬಂಧಿಸಿತು. ಎಸ್ಎಚ್ಡಿಪಿ ಕೂಡ ತನ್ನ ತಾಂತ್ರಿಕ ದಾಖಲೆಗಳಲ್ಲಿ ₹10 ಕೋಟಿಯಿಂದ ₹60 ಕೋಟಿವರೆಗಿನ ಕಾಮಗಾರಿಗಳಿಗೆ ಕೇವಲ 40ರಿಂದ 60 ಟಿಪಿಎಚ್ ಎಚ್ಎಮ್ಪಿಗಳನ್ನು ನಿಗದಿಪಡಿಸಿತ್ತು (ಪ್ಯಾಕೇಜ್ 190).

ಸ್ಥಾವರವು ಗರಿಷ್ಠ 120 ಟಿಪಿಹೆಚ್ ಸಾಮರ್ಥ್ಯವನ್ನು ಹೊಂದಿದೆ ಎಂದು ತಯಾರಕರಿಂದ ದೃಢೀಕರಿಸಲ್ಪಟ್ಟಿದ್ದರೂ, ಬಿಡ್ದಾರರು 100–120 ಟಿಪಿಹೆಚ್ ಹೆಚ್ಎಮ್ಪಿ ಬದಲಿಗೆ 90–120 ಟಿಪಿಹೆಚ್ ಹೊಂದಿದ್ದಾರೆ ಎಂಬ ಕಾರಣದಿಂದ ಮೇಲಿನ ಐದು ಕಾಮಗಾರಿಗಳಿಗೆ ಸಂಬಂಧಿಸಿದ 7 ಹಣಕಾಸು ಬಿಡ್ಗಳನ್ನು ತಿರಸ್ಕರಿಸಲಾಗಿತ್ತು. ಈ ನಿಟ್ಟಿನಲ್ಲಿ ಹೆಚ್ಎಮ್ಪಿಗಳ ಸಾಮರ್ಥ್ಯವು ಹೂಡುವಳಿ ಸಮುಚ್ಚಯಗಳ ತೇವಾಂಶದ ಮೇಲೆ ಅವಲಂಬಿತವಾಗಿದ್ದು 90–120 ಮತ್ತು 100–120 ಟಿಪಿಹೆಚ್ ಹೆಚ್ಎಮ್ಪಿಯ ಹುಟ್ಟುವಳಿ ಸಾಮರ್ಥ್ಯವು ಒಂದೇ ಆಗಿರುತ್ತದೆ ಎಂಬುದನ್ನು ಗಮನಿಸುವುದು ಇಲ್ಲಿ ಸೂಕ್ತವಾಗುತ್ತದೆ.

ಹೀಗೆ, ಈ ತಾಂತ್ರಿಕ ಬಿಡ್ಗಳನ್ನು ತಿರಸ್ಕರಿಸಿದ್ದು ನಿಯಮಬಾಹಿರವಾಗಿದ್ದಲ್ಲದೇ ನಿರ್ದಿಷ್ಟ ಬಿಡ್ಡರ್ಗೆ ಒಲವು ತೋರುವ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ. ಮೇಲಿನ ಎಲ್ಲಾ ಐದು ಪ್ರಕರಣಗಳಲ್ಲಿ ಎಲ್1ನ ಹಣಕಾಸಿನ ಬಿಡ್ಗಳನ್ನು ತಿರಸ್ಕರಿಸಲಾಯಿತು ಮತ್ತು **ಅನುಬಂಧ–4.2(a)** ನಲ್ಲಿ ವಿವರಿಸಿದಂತೆ ಎಲ್2 ಅಥವಾ ಎಲ್3ಗೆ ಕಾಮಗಾರಿಗಳನ್ನು ವಹಿಸಲಾಗಿತ್ತು. ಇದಲ್ಲದೆ, ಒಂದು ಪ್ರಕರಣದಲ್ಲಿ ಎಲ್1ನ

[1] ಒಂದು ಘಂಟೆಗೆ ಟನ್ಗಳಲ್ಲಿ (ಟನ್ಸ್ ಪರ್ ಅವರ್) – ಇದು ಹಾಟ್ ಮಿಕ್ಸ್ ಪ್ಲಾಂಟ್ನ ಸಾಮರ್ಥ್ಯವನ್ನು ಸೂಚಿಸುತ್ತದೆ

[2] ಹಾಟ್ ಮಿಕ್ಸ್ ಪ್ಲಾಂಟ್ – ಡಾಂಬರು ಮತ್ತು ಸಮುಚ್ಚಯಗಳನ್ನು ಮಿಶ್ರಣ ಮಾಡಲು ಬಳಸುವ ಯಂತ್ರೋಪಕರಣ.

ಹಣಕಾಸಿನ ಬಿಡ್ ಅನ್ನು ತಿರಸ್ಕರಿಸಲಾಯಿತು ಮತ್ತು ಎಲ್2ನ ಬಿಡ್ ಸಾಮರ್ಥ್ಯವು ಋಣಾತ್ಮಕವಾಗಿದ್ದರೂ ಸಹ ಅವರಿಗೆ ವಹಿಸಲಾಯಿತು.

ಏರೋ ಇಂಡಿಯಾ ಪ್ರದರ್ಶನದ ದೃಷ್ಟಿಯಿಂದ ಮತ್ತ ಕಾಮಗಾರಿಯ ತುರ್ತು ಸ್ವರೂಪದ ಕಾರಣ ಹೆಚ್ಚಿನ ವಿಶಿಷ್ಟತೆಯ ಯಂತ್ರಗಳನ್ನು ಒತ್ತಾಯಿಸಲಾಯಿತು ಎಂದು ಸರ್ಕಾರವು ತಿಳಿಸಿತು.

ಎಲ್ಲಾ ಐದು ಪ್ರಕರಣಗಳಿಗೆ ಸಂಬಂಧಿಸಿದಂತೆ ಇಲಾಖೆಯು ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳ ಮೌಲ್ಯಮಾಪನಕ್ಕಾಗಿ ಒಂದು ವರ್ಷಕ್ಕಿಂತ ಹೆಚ್ಚು ಸಮಯ ತೆಗೆದುಕೊಂಡಿದ್ದು ಅದು ಕಾಮಗಾರಿಯ ತುರ್ತು ಸ್ವರೂಪವನ್ನು ಸಾಬೀತುಪಡಿಸಲು ವಿಫಲವಾಗಿದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.


ಅದೇ ರೀತಿ, ಬೀದರ್‌ನ ಪಿಡಬ್ಲ್ಯುಡಿ ವಿಭಾಗದಲ್ಲಿ ಒಂದು ಕಾಮಗಾರಿಯಲ್ಲಿ (ಡಬ್ಲ್ಯುಐ ಸಂಖ್ಯೆ:.132470) ಥರ್ಮೋ ಪ್ಲಾಸ್ಟಿಕ್ ರೋಡ್ ಮಾರ್ಕಿಂಗ್ ನಿರುಪಯುಕ್ತವಾಗಿದ್ದರೂ ಸಹ ಗುತ್ತಿಗೆದಾರರು ಅದರ ಅಗತ್ಯ ಪ್ರಮಾಣವನ್ನು ಸಾಧಿಸಿಲ್ಲ ಎಂಬ ನೆಪದಲ್ಲಿ ತಾಂತ್ರಿಕ ಬಿಡ್‌ಅನ್ನು ತಿರಸ್ಕರಿಸಲಾಗಿತ್ತು.

4.1.2 ಬಿಡ್‌ಗಳನ್ನು ಸಲ್ಲಿಸಲು ಅಸಮರ್ಪಕ ಸಮಯ

₹2 ಕೋಟಿ ವೆಚ್ಚದ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಲು ಕನಿಷ್ಠ 30 ದಿನಗಳು ಮತ್ತು ಮತ್ತು ₹2 ಕೋಟಿ ಮತ್ತು ಅದಕ್ಕೂ ಹೆಚ್ಚಿನ ವೆಚ್ಚದ ಕಾಮಗಾರಿಗಳಿಗೆ 60 ದಿನಗಳಾಗಿರಬೇಕೆಂದು ಸರ್ಕಾರ ತನ್ನ ಸುತ್ತೋಲೆಯಲ್ಲಿ (ಮಾರ್ಚ್ 2011) ಕೆಟಿಪಿಪಿ ನಿಯಮಗಳು, 2000ರ ನಿಯಮ 17ರ ನಿಬಂಧನೆಗಳನ್ನು ಪುನರುಚ್ಚರಿಸಿತ್ತು. ಆದರೆ, ₹2 ಕೋಟಿ ವೆಚ್ಚದ ಕಾಮಗಾರಿಗಳಿಗೆ ಕನಿಷ್ಠ 15 ದಿನಗಳು ಮತ್ತು ₹2 ಕೋಟಿ ಮತ್ತು ಅದಕ್ಕಿಂತ ಹೆಚ್ಚಿನ ವೆಚ್ಚದ ಕಾಮಗಾರಿಗಳಿಗೆ 30 ದಿನಗಳೆಂದು ಟೆಂಡರ್‌ಗಳನ್ನು ಸಲ್ಲಿಸಲು ಕನಿಷ್ಠ ಸಮಯವನ್ನು ಪರಿಷ್ಕರಿಸಲಾಗಿತ್ತು (07.09.2019).

ಪರೀಕ್ಷಾ–ತನಿಖೆ ನಡೆಸಿದ 499 ಎನ್‌ಐಟಿಗಳ ಪೈಕಿ ₹2,966.29 ಕೋಟಿ ವೆಚ್ಚದ 469 ಎನ್‌ಐಟಿಗಳಿಗೆ (ಶೇಕಡಾ 94) ಎರಡರಿಂದ 54 ದಿನಗಳ ವ್ಯಾಪ್ತಿಯವರೆಗಿನ (07.09.2019ರ ಹಿಂದಿನ ಎನ್‌ಐಟಿಗಳು) ಮತ್ತು ಪರಿಷ್ಕೃತ ದಿನಾಂಕದ (07.09.2019) (**ಅನುಬಂಧ–4.3**)ನಂತರ ಆಹ್ವಾನಿಸಲಾದ ಎನ್‌ಐಟಿಗಳಿಗೆ ಎಂಟರಿಂದ 28 ದಿನಗಳವರೆಗಿನ ವ್ಯಾಪ್ತಿಯ ಅಲ್ಪಾವಧಿಯ ಟೆಂಡರ್ ಸೂಚನೆಯನ್ನು ನೀಡುವ ಮೂಲಕ ಆಹ್ವಾನಿಸಲಾಗಿತ್ತು ಎಂಬುದನ್ನು ಗಮನಿಸಲಾಯಿತು. ಪತ್ರಿಕೆಗಳಲ್ಲಿ ಪ್ರಕಟವಾದ ಅಲ್ಪಾವಧಿಯ ಎನ್‌ಐಟಿಗಳ ವಿಭಾಗವಾರು ಸ್ಥಿತಿಯನ್ನು **ನಕ್ಷೆ–4.1**ರಲ್ಲಿ ನೀಡಲಾಗಿದೆ:

ನಕ್ಷೆ–4.1: ಬಿಡ್‌ಗಳನ್ನು ಸಲ್ಲಿಸಲು ಅಸಪರ್ಪಕ ಸಮಯ



ಹೀಗೆ, ಬಿಡ್‌ಗಳನ್ನು ಸಲ್ಲಿಸಲು ನೀಡಿದ್ದ ಅಸಮರ್ಪಕ ಸಮಯವು ಟೆಂಡರ್ ಪ್ರಕ್ರಿಯೆಯಲ್ಲಿ ಸ್ಪರ್ಧೆಯನ್ನು ಸೀಮಿತಗೊಳಿಸಿತು. ಏಕೆಂದರೆ ಅದು ನಿರೀಕ್ಷಿತ ಬಿಡ್‌ದಾರರು ಪ್ರತಿಕ್ರಿಯಿಸುವ ಮತ್ತು ಬಿಡ್ ಸಲ್ಲಿಸುವ ಸಮಯವನ್ನು ಮೊಟಕುಗೊಳಿಸಿತು.

ಕೆಟಿಪಿಪಿ ಕಾಯಿದೆಯ ಉಪ–ನಿಯಮ (1)ರ ಅನ್ವಯ, ಟೆಂಡರ್ ಆಹ್ವಾನ ಪ್ರಾಧಿಕಾರಕ್ಕಿಂತ (ಟಿಐಎ) ಉನ್ನತ ಪ್ರಾಧಿಕಾರವು ಲಿಖಿತವಾಗಿ ಕಾರಣಗಳನ್ನು ದಾಖಲಿಸುವ ಮೂಲಕ ಬಿಡ್ ಸಲ್ಲಿಸಲು ಕನಿಷ್ಠ ಸಮಯವನ್ನು ಏಳು ದಿನಗಳಿಗಿಂತ ಕಡಿಮೆಯಿಲ್ಲದಂತೆ ಕಡಿತಗೊಳಿಸಬಹುದು ಎಂದು ಸರ್ಕಾರವು ತಿಳಿಸಿತು (ಆಗಸ್ಟ್ 2022).

ತುರ್ತು ಸಂದರ್ಭಗಳಲ್ಲಿ ಮಾತ್ರ ವಿನಾಯಿತಿ ಇರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ, ಹಾಗೂ ಪರೀಕ್ಷಾ–ತನಿಖೆ ನಡೆಸಿದ ಶೇಕಡಾ 55ಕ್ಕಿಂತ ಹೆಚ್ಚಿನ ಬಿಡ್‌ಗಳನ್ನು 90 ದಿನಗಳನ್ನು ನಂತರ ಅಂತಿಮಗೊಳಿಸಿರುವುದರಿಂದ ಕಾಮಗಾರಿಗಳು ತುರ್ತು ಸ್ವರೂಪದ್ದಾಗಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು.

4.1.3 ಟೆಂಡರ್ ದಸ್ತಾವೇಜಿನಲ್ಲಿ ನ್ಯೂನತೆಗಳು

ಒಪ್ಪಂದಗಳ ಸಾಮಾನ್ಯ ಷರತ್ತುಗಳು, ಗುತ್ತಿಗೆಗಳ ವಿಶೇಷ ಷರತ್ತುಗಳು, ಬಿಡ್‌ದಾರರಿಗೆ ಸೂಚನೆಗಳು (ಐಟಿಬಿ), ಬಿಡ್ ನಮೂನೆ, ವಿಶಿಷ್ಟತೆಗಳು, ಬಿಲ್ ಆಫ್ ಕ್ವಾಂಟಿಟೀಸ್ ಇತ್ಯಾದಿಗಳನ್ನು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಒಳಗೊಂಡಿರುತ್ತದೆ. ಬಿಡ್ ಜಾರಿ ಮಾಡುವ ಅಧಿಕಾರಿಗಳು ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವ ಮೊದಲು ಬಿಡ್ ಡಾಕ್ಯುಮೆಂಟ್‌ನಲ್ಲಿ ವಿಶಿಷ್ಟತೆಗಳು, ಬಿಲ್ ಆಫ್ ಕ್ವಾಂಟಿಟೀಸ್, ಪ್ರಮುಖ ಉಪಕರಣಗಳ ಸಂಖ್ಯೆ ಮತ್ತು ರಸ್ತೆ ಕಾಮಗಾರಿಗಳಿಗೆ ಅಗತ್ಯವಿರುವ ತಾಂತ್ರಿಕ ಸಿಬ್ಬಂದಿ ಮತ್ತು ಕ್ಷೇತ್ರೀಯ ಪ್ರಯೋಗಶಾಲೆ ಇತ್ಯಾದಿಗಳನ್ನು ಸೂಚಿಸಬೇಕಾಗುತ್ತದೆ. ಆಯ್ದ 21 ವಿಭಾಗಗಳಲ್ಲಿನ ದಾಖಲೆಗಳ ಪರೀಕ್ಷಾ–ತನಿಖೆಯ ಸಮಯದಲ್ಲಿ ಐಟಿಬಿಯ ಅನುಬಂಧಕ್ಕೆ ಬಿಡ್‌ದಾರರು ಬಿಡ್‌ಗಳನ್ನು ಅಂತಿಮಗೊಳಿಸಲು ಬಹಳ ಮಹತ್ವದ್ದಾಗಿರುವ ಸಂಬಂಧಿತ ದತ್ತಾಂಶವನ್ನು ಭರ್ತಿ ಮಾಡದೆ ಬಿಡ್ ದಾಖಲೆಗಳನ್ನು ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಉದಾಹರಣೆಗೆ, ಧಾರವಾಡ ವಿಭಾಗ ಮತ್ತು ಎಸ್‌ಎಚ್‌ಡಿಪಿಯನ್ನು ಹೊರತುಪಡಿಸಿ ಪರೀಕ್ಷಾ–ತನಿಖೆ ನಡೆಸಿದ ಯಾವುದೇ ವಿಭಾಗಗಳಲ್ಲಿ ತಾಂತ್ರಿಕ ಸಿಬ್ಬಂದಿಗಳ ಸಂಖ್ಯೆ, ಅವರ ಅರ್ಹತೆ ಮತ್ತು ನಿರ್ಮಾಣ

ಕಾರ್ಯಗಳಿಗೆ ಅಗತ್ಯವಿರುವ ಅನುಭವವನ್ನು ಸೂಚಿಸಿರಲಿಲ್ಲ. ಅಲ್ಲದೆ, ಕ್ಷೇತ್ರೀಯ ಪ್ರಯೋಗಶಾಲೆಗಳಿಗೆ ಅಗತ್ಯವಿರುವ ತಾಂತ್ರಿಕ ಸಿಬ್ಬಂದಿಗಳ ಸಂಖ್ಯೆಯನ್ನು 2016–21ರ ಅವಧಿಯಲ್ಲಿ ಯಾವುದೇ ಬಿಡ್ ದಾಖಲೆಗಳಲ್ಲಿ ವಿಭಾಗಗಳು ಸೂಚಿಸಿರಲಿಲ್ಲ.

ಹೀಗೆ, ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾದ ಬಿಡ್ ದಾಖಲೆಗಳು ಅಪೂರ್ಣವಾಗಿದ್ದು, ಬಿಡ್‌ಗಳನ್ನು ಸೂಕ್ತವಾಗಿ ಅಂತಿಮಗೊಳಿಸಲು ಮತ್ತು ಸರ್ಕಾರದ ಹಿತಾಸಕ್ತಿಗಳನ್ನು ರಕ್ಷಿಸಲು ಅಗತ್ಯವಾದ ಪ್ರಮುಖ ಮಾಹಿತಿಯ ಕೊರತೆಯಿದ್ದಿತು.

ಎ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಎಲ್ಲ ದತ್ತಾಂಶಗಳು ಲಭ್ಯವಿದೆ ಎಂದು ಸರ್ಕಾರವು ತಿಳಿಸಿತು (ಆಗಸ್ಟ್ 2022).

ಲೆಕ್ಕಪರಿಶೋಧನೆಗೆ ಸಲ್ಲಿಸಲಾದ ಟೆಂಡರ್ ಡಾಕ್ಯುಮೆಂಟ್‌ಗಳಲ್ಲಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಿರ್ಣಾಯಕ ಮಾಹಿತಿಯು ಲಭ್ಯವಿಲ್ಲದ ಕಾರಣ ಉತ್ತರವನ್ನು ಒಪ್ಪಲಾಗುವುದಿಲ್ಲ.

4.1.4 ತಾಂತ್ರಿಕ ಮಂಜೂರಾತಿಗೆ ಮೊದಲೇ ಟೆಂಡರ್‌ಗಳನ್ನು ಆಹ್ವಾನಿಸುವ ಸೂಚನೆ ಜಾರಿಮಾಡಿರುವುದು

ಬಿಲ್ ಆಫ್ ಕ್ವಾಂಟಿಟೀಸ್‌ಅನ್ನು ಅಂತಿಮಗೊಳಿಸಿದ ನಂತರ ಮತ್ತು ಸಂಬಂಧಪಟ್ಟ ಸಕ್ಷಮ ಅಧಿಕಾರಿಗಳಿಂದ ಕರಡು ಟೆಂಡರ್ ದಸ್ತಾವೇಜುಗಳ (ಡಿಟಿಪಿ) ಅನುಮೋದನೆಯ ನಂತರ ಎನ್‌ಐಟಿಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸುವುದು ಮತ್ತು ವ್ಯಾಪಕ ಪ್ರಚಾರಕ್ಕಾಗಿ ಇಲಾಖಾ ವೆಬ್‌ಸೈಟ್‌ಗಳಲ್ಲಿ ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿದೆ. ಎಸ್‌ಎಚ್‌ಡಿಪಿಯ ಹಂತ–III ರಡಿಯಲ್ಲಿ ₹3500 ಕೋಟಿ ವೆಚ್ಚದ 127 ಪ್ಯಾಕೇಜ್‌ಗಳ (399 ಅಂದಾಜುಗಳು) ಲೆಕ್ಕಪರಿಶೋಧನಾ ಪರಿಶೀಲನೆಯು 02.02.2016 ಮತ್ತು 02.16.2016ರ ನಡುವೆ ಈ 399 ಅಂದಾಜುಗಳಿಗೆ ತಾಂತ್ರಿಕ ಮಂಜೂರಾತಿ ನೀಡಲಾಗಿತ್ತು ಎಂಬುದನ್ನು ತಿಳಿಯಪಡಿಸಿತು. ಆದರೆ, ಯೋಜನಾ ನಿರ್ವಹಣಾ ಸಮಾಲೋಚನಾ ಸೇವೆಗಳಿಗಾಗಿ ಎನ್‌ಐಟಿ ಸೇರಿದಂತೆ ಈ ಕಾಮಗಾರಿಗಳಿಗೆ ಎನ್‌ಐಟಿಗಳನ್ನು 31.12.2015 ಮತ್ತು 20.01.2016ರ ನಡುವೆ ಪತ್ರಿಕೆಗಳಲ್ಲಿ ಪ್ರಕಟಿಸಲಾಗಿತ್ತು ಮತ್ತು ತಾಂತ್ರಿಕ ಮಂಜೂರಾತಿ ಪಡೆಯುವ ಮೊದಲೇ ಇಲಾಖಾ ವೆಬ್‌ಸೈಟ್‌ಗಳಲ್ಲಿ ಅಪ್‌ಲೋಡ್ ಮಾಡಲಾಗಿತ್ತು. ತರುವಾಯ, ಸಂಬಂಧಪಟ್ಟ ಅಧಿಕಾರಿಗಳಿಂದ ತಾಂತ್ರಿಕ ಮಂಜೂರಾತಿಗಳನ್ನು ಪಡೆದಿರುವುದನ್ನು ಕುರಿತು ತಿದ್ದುಪಡಿ ನೀಡಲಾಯಿತು ಮತ್ತು ಹೊಸ ಎನ್‌ಐಟಿಗಳನ್ನು ನೀಡಲಾಯಿತು. ಹೀಗಾಗಿ, ₹9 ಲಕ್ಷದ ಜಾಹೀರಾತು ಶುಲ್ಕ ಪಾವತಿ ಫಲಪ್ರದವಾಗಲಿಲ್ಲ.

ಆಡಳಿತಾತ್ಮಕ ಅನುಮೋದನೆಯನ್ನು (30.12.2015) ಪಡೆದ ಮೇಲೆ 31.12.2015 ರಂದು ಟೆಂಡರ್ ಅಧಿಸೂಚನೆಯನ್ನು ಹೊರಡಿಸಲಾಗಿತ್ತು ಎಂದು ಸರ್ಕಾರವು ತಿಳಿಸಿತು (ಆಗಸ್ಟ್ 2022). ಆದರೆ, ಅಷ್ಟರೊಳಗೆ ಅಂದಾಜುಗಳು ಸಿದ್ಧವಾಗದ ಕಾರಣ 2016ರ ಫೆಬ್ರವರಿಯಲ್ಲಿ ಔಪಚಾರಿಕ ತಾಂತ್ರಿಕ ಮಂಜೂರಾತಿ ಪಡೆದು ಮತ್ತೊಮ್ಮೆ ಟೆಂಡರ್ ಅಧಿಸೂಚನೆ ಹೊರಡಿಸಲಾಯಿತು ಎಂದೂ ಕೂಡ ತಿಳಿಸಲಾಯಿತು.

ಔಪಚಾರಿಕ ತಾಂತ್ರಿಕ ಮಂಜೂರಾತಿಯನ್ನು ಪಡೆಯುವ ಮೊದಲು ಟೆಂಡರ್ ಅಧಿಸೂಚನೆಯನ್ನು ಹೊರಡಿಸುವುದು ಕ್ರಮಬದ್ಧವಾಗಿಲ್ಲದ ಕಾರಣ ಉತ್ತರವನ್ನು ಒಪ್ಪಲಾಗುವುದಿಲ್ಲ.

ಅದೇ ರೀತಿ ಮಂಡ್ಯ ವಿಭಾಗದಲ್ಲಿ ₹62.52 ಕೋಟಿ ವೆಚ್ಚದ ಆರು ಕಾಮಗಾರಿಗಳಲ್ಲಿ ಡಿಟಿಪಿಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡುವ ಮುನ್ನವೇ ಎನ್‌ಐಟಿ ಪ್ರಕಟಿಸಲಾಗಿತ್ತು. ವಿವರಗಳನ್ನು **ಅನುಬಂಧ–4.4**ರಲ್ಲಿ ನೀಡಲಾಗಿದೆ.

4.1.5 ಗುತ್ತಿಗೆದಾರರ ನೇರ್ಪಡೆಯಲ್ಲಿ ಕೊರತೆಗಳು

ಪಿಡಬ್ಲ್ಯೂಡಿಯಲ್ಲಿ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು, ಗುತ್ತಿಗೆದಾರರು ಇಲಾಖೆಯಲ್ಲಿ ನೋಂದಾಯಿಸಿಕೊಳ್ಳುವುದು ಅಗತ್ಯವಾಗಿದೆ. ರಾಜ್ಯದಲ್ಲಿ ಗುತ್ತಿಗೆದಾರರ ನೋಂದಣಿಯನ್ನು ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆ, 2014ರ ಅಧ್ಯಾಯ–19 ರ ಮೂಲಕ ನಿರ್ವಹಿಸಲಾಗುತ್ತದೆ. ರಾಜ್ಯದಲ್ಲಿ ಗುತ್ತಿಗೆದಾರರು ಟೆಂಡರ್ ಮಿತಿಗಳ ಆಧಾರದ ಮೇಲೆ ವರ್ಗ I ರಿಂದ IV ಎಂಬ ನಾಲ್ಕು ವರ್ಗಗಳ ಅಡಿಯಲ್ಲಿ ನೋಂದಾಯಿಸಲ್ಪಟ್ಟಿದ್ದಾರೆ.

ನೋಂದಣಿಗಾಗಿ, ಗುತ್ತಿಗೆದಾರರು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಅಥವಾ ಅನುಸೂಚಿತ ಬ್ಯಾಂಕ್‌ನಿಂದ ಪಡೆದ ಮಾನ್ಯವಾದ ಋಣಧಾರಣ ಮಿತಿ ಪ್ರಮಾಣಪತ್ರ, ಕಾರ್ಯನಿರ್ವಾಹಕ ಎಂಜಿನಿಯರ್‌ನಿಂದ ಕಾಮಗಾರಿ ನಿರ್ವಹಿಸಿದ ಪ್ರಮಾಣಪತ್ರ ಮತ್ತು ಆದಾಯ ತೆರಿಗೆ ತೀರುವಳಿ ಪ್ರಮಾಣಪತ್ರದೊಂದಿಗೆ ಸಂಬಂಧಿಸಿದ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಬೇಕಾಗುತ್ತದೆ. ಅಲ್ಲದೆ, ಪರವಾನಗಿಗಳನ್ನು ನೀಡುವ ಮೊದಲು ಈ ಎಲ್ಲಾ ಪ್ರಮಾಣಪತ್ರಗಳನ್ನು ವಿತರಣಾ ಪ್ರಾಧಿಕಾರದಿಂದ ಮರು ಪರಿಶೀಲಿಸಬೇಕು.

ಕೆಳಗೆ ಚರ್ಚಿಸಿದಂತೆ, ಇಲಾಖೆಯು ಸೂಚಿಸಿದ ಸಂಹಿತೆಯ ನಿಬಂಧನೆಗಳನ್ನು (**ಅನುಬಂಧ–4.5**) ಅನುಸರಿಸದೆ ಅಧಿಕಾರಿಗಳು ಗುತ್ತಿಗೆದಾರರನ್ನು ನೋಂದಾಯಿಸಿದ್ದರು ಎಂಬುದು ಆಯ್ದ ಸಿಇ ಮತ್ತು ಎಸ್‌ಇ ಕಚೇರಿಗಳಲ್ಲಿ 2016–21ರ ಅವಧಿಗೆ ಸಂಬಂಧಿಸಿದ 321 ನೋಂದಣಿ ಅರ್ಜಿಗಳ ಪರಿಶೀಲನೆಯು ತಿಳಿಯಪಡಿಸಿತು:

- 44 ಪ್ರಕರಣಗಳಲ್ಲಿ ಋಣಧಾರಣ ಮಿತಿ ಪ್ರಮಾಣಪತ್ರಗಳನ್ನು ನಿಗದಿತ ಮೊತ್ತಕ್ಕಿಂತ ಕಡಿಮೆ ಮೊತ್ತಕ್ಕೆ ಪಡೆಯಲಾಗಿತ್ತು.
- ಒಂದು[3] ಪ್ರಕರಣದಲ್ಲಿ, ಋಣಧಾರಣ ಮಿತಿ ಪ್ರಮಾಣಪತ್ರದ ಬದಲಿಗೆ ಷರತ್ತುಬದ್ಧ ಲೈನ್ ಆಫ್ ಕ್ರೆಡಿಟ್ (ಎಲ್‌ಒಸಿ) ಅನ್ನು ನೋಂದಾಯಿಸುವ ಪ್ರಾಧಿಕಾರವು ಸ್ವೀಕರಿಸಿತ್ತು ಮತ್ತು ಇನ್ನೊಂದು ಪ್ರಕರಣದಲ್ಲಿ ಋಣಧಾರಣ ಮಿತಿ ಪ್ರಮಾಣಪತ್ರವನ್ನು ಅನುಸೂಚಿತವಲ್ಲದ[4] ಬ್ಯಾಂಕ್‌ನಿಂದ ಪಡೆಯಲಾಗಿತ್ತು.
- 110 ಪ್ರಕರಣಗಳಲ್ಲಿ, ನಿಗದಿತ ವೆಚ್ಚದಲ್ಲಿ ಕನಿಷ್ಠ ಒಂದು ಕಾಮಗಾರಿಯನ್ನು ಪೂರ್ಣಗೊಳಿಸುವ ಮಾನದಂಡವನ್ನು ಪೂರೈಸಿರಲಿಲ್ಲ ಮತ್ತು 143 ಪ್ರಕರಣಗಳಲ್ಲಿ ಹಿಂದಿನ ಐದು ವರ್ಷಗಳಲ್ಲಿ ಒಟ್ಟು ವಹಿವಾಟು ಮಿತಿಯನ್ನು ಸಾಧಿಸಿರಲಿಲ್ಲ.
- ಗುತ್ತಿಗೆದಾರರು ಒದಗಿಸಿದ ಕಾಮಗಾರಿ ಪೂರ್ಣಗೊಳಿಸಿದ ಪ್ರಮಾಣಪತ್ರಗಳನ್ನು 132 ಪ್ರಕರಣಗಳಲ್ಲಿ ವಿತರಣಾ ಅಧಿಕಾರಿಗಳಿಂದ ಪರಿಶೀಲಿಸಲಾಗಿರಲಿಲ್ಲ.
- ಒಂದು[5] ಪ್ರಕರಣದಲ್ಲಿ ಕರ್ನಾಟಕದ ಹೊರಗೆ ತೆಗೆದುಕೊಳ್ಳಲಾದ ಸಿವಿಲ್ ಕಾಮಗಾರಿಗಳ ಪ್ರಮಾಣಪತ್ರಗಳ ಆಧಾರದ ಮೇಲೆ ವರ್ಗ–IIರ ಗುತ್ತಿಗೆದಾರರನ್ನು ವರ್ಗ–Iಕ್ಕೆ ಉನ್ನತೀಕರಿಸಲಾಗಿತ್ತು.
- ಆದಾಯ ತೆರಿಗೆ ತೀರುವಳಿ ಪ್ರಮಾಣಪತ್ರವನ್ನು 210 ಗುತ್ತಿಗೆದಾರರು ಸಲ್ಲಿಸಿರಲಿಲ್ಲವಾದರೆ 29 ಪ್ರಕರಣಗಳಲ್ಲಿ ಗುತ್ತಿಗೆದಾರರು ಪ್ಯಾನ್ ಕಾರ್ಡ್ ವಿವರಗಳನ್ನು ಸಲ್ಲಿಸಿರಲಿಲ್ಲ.
- 20 ಪ್ರಕರಣಗಳಲ್ಲಿ ವ್ಯಾಟ್/ಜಿಎಸ್‌ಟಿ ನೋಂದಣಿ ಪ್ರಮಾಣಪತ್ರ ಲಭ್ಯವಿರಲಿಲ್ಲ.
- ಕೆಪಿಡಬ್ಲ್ಯುಡಿ ಸಂಹಿತೆಯ ಕಂಡಿಕೆ 253(4)ರ ಪ್ರಕಾರ, ಅರ್ಜಿದಾರರು ಕಾಮಗಾರಿಯನ್ನು ನಿರ್ವಹಿಸಿದ ಅರ್ಹತೆಯನ್ನು ಹೊಂದಿರದ ಹೊಸ ನೋಂದಣಿಯ ಸಂದರ್ಭದಲ್ಲಿ ಅವರಿಗೆ

[3] ಮೆ.ಮೆರಿ ಸಾಡನ್ ಎದತಲಾ ಇಂಟರ್‌ನ್ಯಾಶನಲ್ ಪ್ರೈವೇಟ್ ಲಿಮಿಟೆಡ್.

[4] ಮೊಹಮ್ಮದ್ ಸಲೀಂ ವರ್ಗ–II ಪ್ರಕರಣದಲ್ಲಿ ವಿಶ್ವೇಶ್ವರಯ್ಯ ಸಹಕಾರಿ ಬ್ಯಾಂಕ್

[5] ಸಿಇ ಸಿ&ಬಿ (ದಕ್ಷಿಣ), ಬೆಂಗಳೂರು ಇಲ್ಲಿ ಎಸ್ ಸುದರ್ಶನ್ ರೆಡ್ಡಿ

ವಹಿಸಿಕೊಟ್ಟಿರುವ ಒಂದು ಅಥವಾ ಎರಡು ಕಾಮಗಾರಿಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಮೇಲೆ ಅಂತಹ ಎಂಜಿನಿಯರಿಂಗ್ ಅರ್ಜಿದಾರರ ಆರ್ಥಿಕ ಸಾಮರ್ಥ್ಯ ಮತ್ತು ಅರ್ಹತೆಯ ಬಗ್ಗೆ ತೃಪ್ತರಾದ ನಂತರ ನೋಂದಣಿ ಪ್ರಾಧಿಕಾರವು ಅವರನ್ನು ವರ್ಗ–III ಕ್ಕಿಂತ ಹೆಚ್ಚಿಲ್ಲದಂತೆ ನೋಂದಣಿ ಮಾಡಬಹುದು. 70 ಪ್ರಕರಣಗಳಲ್ಲಿ, ಇಂಜಿನಿಯರಿಂಗ್ ಪದವೀಧರರಿಗೆ ನಿಗದಿತ ಮಾನದಂಡಗಳನ್ನು ಖಚಿತಪಡಿಸಿಕೊಳ್ಳದೇ ಪರವಾನಗಿಗಳನ್ನು ನೀಡಲಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

- ಕೆಪಿಡಬ್ಲ್ಯುಡಿ ಸಂಹಿತೆ, 2014ರ ಕಂಡಿಕೆ–255 ರ ಪ್ರಕಾರ, ವರ್ಗ–I ಮತ್ತು ವರ್ಗ–II ಗುತ್ತಿಗೆದಾರರು ₹15 ಲಕ್ಷ ಮತ್ತು ಅದಕ್ಕಿಂತ ಹೆಚ್ಚಿನ ವೆಚ್ಚದ ಪ್ರತಿ ಕಾಮಗಾರಿಗೆ ಕನಿಷ್ಠ ಒಬ್ಬ ಸಿವಿಲ್ ಎಂಜಿನಿಯರಿಂಗ್ ಪದವೀಧರರನ್ನು ತೊಡಗಿಸಿಕೊಳ್ಳಬೇಕು. ಲೆಕ್ಕಪರಿಶೋಧನೆ ನಡೆಸಿದ ನಾಲ್ಕು ವಲಯ ಕಚೇರಿಗಳಲ್ಲಿ ಸಿಇ, ಸಿ&ಬಿ (ಈಶಾನ್ಯ), ಕಲ್ಬುರ್ಗಿಯಲ್ಲಿ ನಾಲ್ಕು ಪ್ರಕರಣಗಳಲ್ಲಿ ಇಲಾಖೆಯು ಮೆಕ್ಯಾನಿಕಲ್/ಆಟೋಮೊಬೈಲ್ ಎಂಜಿನಿಯರಿಂಗ್‌ನಂತಹ ಪದವಿ ಹೊಂದಿರುವ ಪದವೀಧರರನ್ನು ಸೇರಿಸಿಕೊಂಡಿರುವುದನ್ನು ಗಮನಿಸಲಾಯಿತು. ಬೇರೆ ನಾಲ್ಕು ಪ್ರಕರಣಗಳಲ್ಲಿ ಅದೇ ತಾಂತ್ರಿಕ ಸಿಬ್ಬಂದಿ ಬಹು ಗುತ್ತಿಗೆದಾರರಿಗೆ ಕಾಮಗಾರಿಗಳನ್ನು ನಿರ್ವಹಿಸುತ್ತಿರುವುದು ಕಂಡುಬಂದಿತ್ತು.
- ಒಂದು ಪ್ರಕರಣದಲ್ಲಿ[6] ಕೆಪಿಡಬ್ಲ್ಯುಡಿ ಸಂಹಿತೆಯ ಕಂಡಿಕೆ–253(4) ರಡಿಯಲ್ಲಿ ಸೂಚಿಸಿದಂತೆ ಇತರ ರಾಜ್ಯದ ಗುತ್ತಿಗೆದಾರರಿಗೆ ವರ್ಗ–III ಪರವಾನಗಿಯ ಬದಲಿಗೆ ನೇರವಾಗಿ ವರ್ಗ–I ರ ಪರವಾನಗಿಯನ್ನು ನೀಡಲಾಗಿತ್ತು.

ಹೀಗಾಗಿ, ಪರೀಕ್ಷಾ–ತನಿಖೆ ನಡೆಸಿದ ಪ್ರಕರಣಗಳಲ್ಲಿ ನೋಂದಾಯಿಸುವ ಅಧಿಕಾರಿಗಳು ಕೆಪಿಡಬ್ಲ್ಯುಡಿ ಸಂಹಿತೆಯಲ್ಲಿ ಸೂಚಿಸಲಾದ ನಿಬಂಧನೆಗಳನ್ನು ಅನುಸರಿಸುವುದನ್ನು ಖಚಿತಪಡಿಸಿಕೊಳ್ಳದಿರುವುದು ಅನರ್ಹ ಗುತ್ತಿಗೆದಾರರ ನೋಂದಣಿಯಲ್ಲಿ ಪರಿಣಮಿಸಿತು.

ಕೆಪಿಡಬ್ಲ್ಯುಡಿ–ಡಿ ಸಂಹಿತೆಯ ನಿಬಂಧನೆಗಳನ್ನು ಮತ್ತು ಸಂಬಂಧಿತ ಸರ್ಕಾರಿ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುವುದು ಎಂದು ಸರ್ಕಾರವು ತಿಳಿಸಿತು (ಆಗಸ್ಟ್ 2022).

4.1.6 ಗುತ್ತಿಗೆದಾರರ ಋಣಧಾರಣ ಮಿತಿಗಳು

ಕೆಪಿಡಬ್ಲ್ಯುಡಿ ಸಂಹಿತೆ, 2014ರ ಪ್ರಕಾರ ಮೊದಲ ನೋಂದಣಿ ಮತ್ತು ನಂತರದ ನವೀಕರಣಗಳಿಗೆ, ಗುತ್ತಿಗೆದಾರರು ಕಂದಾಯ ಅಧಿಕಾರಿಗಳು (ನಮೂನೆ–V) ಮತ್ತು ರಾಷ್ಟ್ರೀಕೃತ ಬ್ಯಾಂಕ್ (ನಮೂನೆ–VI) ನೀಡಿದ ನಿಗದಿತ ನಮೂನೆಯಲ್ಲಿ ಅಗತ್ಯವಿರುವ ಋಣಧಾರಣ ಮಿತಿ ಮೊತ್ತದ ಪ್ರಮಾಣಪತ್ರವನ್ನು ಸಲ್ಲಿಸಬೇಕು.

ಹಣಕಾಸು ಇಲಾಖೆಯ ಒಪ್ಪಿಗೆಯೊಂದಿಗೆ ಸರ್ಕಾರವು ವರ್ಗ I, II, III ಮತ್ತು IVರ ಗುತ್ತಿಗೆದಾರರಿಗೆ ಅನುಕ್ರಮವಾಗಿ ₹1 ಕೋಟಿ, ₹50 ಲಕ್ಷ, ₹25 ಲಕ್ಷ ಮತ್ತು ₹10 ಲಕ್ಷದ ಕನಿಷ್ಠ ಋಣಧಾರಣ ಮಿತಿಯನ್ನು ನಿಗದಿಪಡಿಸಿತ್ತು (ಜೂನ್ 2014) ಎಂಬುದು ದಾಖಲೆಗಳ ಪರಿಶೀಲನೆಯಿಂದ ತಿಳಿದುಬಂದಿತು. ಇತ್ತೀಚಿನ ವರ್ಷಗಳಲ್ಲಿ ನಿರ್ಮಾಣ ಸಾಮಗ್ರಿಗಳ ಬೆಲೆಯಲ್ಲಿ ಗಣನೀಯ ಏರಿಕೆಯಾಗಿದ್ದರಿಂದ ಸರ್ಕಾರವು ಪ್ರತಿ ಗುತ್ತಿಗೆದಾರರ ಕಾಮಗಾರಿಗಳನ್ನು ಕೈಗೊಳ್ಳುವ ಅರ್ಹತೆಯನ್ನು 20 ಪಟ್ಟು ಹೆಚ್ಚಿಸಿದ್ದರೆ (ಸೆಪ್ಟೆಂಬರ್ 2017) ಹಣಕಾಸು ಇಲಾಖೆಯ ಒಪ್ಪಿಗೆಯಿಲ್ಲದೆ ಋಣಧಾರಣ ಮಿತಿಯನ್ನು ಅನುಕ್ರಮವಾಗಿ ಸುಮಾರು ಮೂರು ದಶಕಗಳ ಹಿಂದೆ ಗುತ್ತಿಗೆದಾರರ ನೋಂದಣಿ ನಿಯಮಗಳು, 1994ರಡಿಯಲ್ಲಿ ಪ್ರಚಲಿತವಿದ್ದ ₹20 ಲಕ್ಷ, ₹10 ಲಕ್ಷ, ₹1 ಲಕ್ಷ ಮತ್ತು ₹20000ಕ್ಕೆ ಇಳಿಸಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

[6] ಮೆ.ಮೆರಿ ಸಾಡನ್ ಎದತಲಾ ಇಂಟರ್‌ನ್ಯಾಶನಲ್ ಪ್ರೈವೇಟ್ ಲಿಮಿಟೆಡ್.

ಹೀಗೆ, ನಿರ್ಮಾಣ ಸಾಮಗ್ರಿಗಳ ಬೆಲೆಗಳ ಹೆಚ್ಚಳವನ್ನು ನಿರ್ಲಕ್ಷಿಸುವುದರ ಜೊತೆಗೆ ಋಣಧಾರನ ಮಿತಿಯನ್ನು ಕಡಿಮೆ ಮಾಡುವುದು ಮತ್ತು ಗುತ್ತಿಗೆದಾರರ ಅರ್ಹತೆಯನ್ನು ಹೆಚ್ಚಿಸುವುದು ಸರ್ಕಾರದ ಹಿತಾಸಕ್ತಿಗಳನ್ನು ರಾಜಿ ಮಾಡಿಕೊಳ್ಳುವ ಅಪಾಯವನ್ನು ಹೆಚ್ಚಿಸುತ್ತದೆ. ಗುಜರಾತ್‌ನ ರಸ್ತೆ ಮತ್ತು ಕಟ್ಟಡಗಳ ಇಲಾಖೆಯಲ್ಲಿ ಅತ್ಯುನ್ನತ ವರ್ಗದ ಗುತ್ತಿಗೆದಾರರಿಗೆ ಕನಿಷ್ಠ ಋಣಧಾರಣ ಮಿತಿಯು ₹3 ಕೋಟಿ ಆಗಿತ್ತು ಎಂಬುದನ್ನು ಹೋಲಿಕೆಗಾಗಿ ಇಲ್ಲಿ ತಿಳಿಸುವುದು ಸೂಕ್ತವಾಗಿದೆ.

4.1.7 ಗುತ್ತಿಗೆದಾರರ ದತ್ತಸಂಚಯದ ಅನುಪಸ್ಥಿತಿ

ರಾಜ್ಯದಲ್ಲಿನ ರಸ್ತೆ ಕಾಮಗಾರಿಗಳನ್ನು ಗುತ್ತಿಗೆದಾರರ ಮೂಲಕ ನಿರ್ವಹಿಸಲಾಗುತ್ತಿದೆ ಮತ್ತು ಬಿಡ್ ಸಾಮರ್ಥ್ಯ, ಅಗತ್ಯವಿರುವ ತಾಂತ್ರಿಕ ಸಿಬ್ಬಂದಿ ಹಾಗೂ ಸ್ಥಾವರ ಮತ್ತು ಯಂತ್ರೋಪಕರಣಗಳ ಲಭ್ಯತೆ, ಕಳೆದ ಐದು ವರ್ಷಗಳಲ್ಲಿ ನಿರ್ವಹಿಸಿದ ಕಾಮಗಾರಿಗಳು ಇತ್ಯಾದಿಗಳನ್ನು ತಾಂತ್ರಿಕ ಮೌಲ್ಯಮಾಪನದ ಸಮಯದಲ್ಲಿ ನಿರ್ಧರಣೆ ಮಾಡಲಾಗುತ್ತದೆ. ಗುತ್ತಿಗೆದಾರರು ಒದಗಿಸಿದ ವಿವಿಧ ಪ್ರಮಾಣಪತ್ರಗಳ ನಿಖರತೆಯನ್ನು ಪರಿಶೀಲಿಸಲು ರಾಜ್ಯ ಮಟ್ಟದಲ್ಲಿ ಗುತ್ತಿಗೆದಾರರ ದತ್ತಸಂಚಯವನ್ನು ನಿರ್ವಹಿಸುವುದು ಕಡ್ಡಾಯವಾಗಿದೆ.

ಆದರೆ, 2016–21ರ ಅವಧಿಯಲ್ಲಿ ಅಂತಹ ಯಾವುದೇ ದತ್ತಸಂಚಯವನ್ನು ನಿರ್ವಹಿಸಿರಲಿಲ್ಲವಾಗಿ ಅದು ಕಂಡಿಕೆ–4.2.7 ಮತ್ತು ಕಂಡಿಕೆ 4.2.9ರಲ್ಲಿ ಚರ್ಚಿಸಿದಂತೆ ಬಿಡ್ ಸಾಮರ್ಥ್ಯದ ತಪ್ಪು ಲೆಕ್ಕಾಚಾರ, ನಕಲಿ ಕಾಮಗಾರಿ ಪ್ರಮಾಣಪತ್ರಗಳನ್ನು ಒದಗಿಸುವುದು, ಇತರ ಗುತ್ತಿಗೆದಾರರಿಗೆ ಸಂಬಂಧಿಸಿದ ಯಂತ್ರೋಪಕರಣಗಳ ದಾಖಲೆಗಳನ್ನು ಒದಗಿಸುವುದು ಇತ್ಯಾದಿಗಳಲ್ಲಿ ಪರಿಣಮಿಸಿತು.

ಶಿಫಾರಸು–6: ಋಣಧಾರಣ ಮಿತಿ, ಲಭ್ಯವಿರುವ ಉಪಕರಣಗಳು ಮತ್ತು ತಾಂತ್ರಿಕ ಸಿಬ್ಬಂದಿಯ ವಿವರಗಳು, ಬ್ಯಾಲೆನ್ಸ್ ಶೀಟ್‌ಗಳು, ಕಾರ್ಯಗತಗೊಳಿಸಿದ ಕಾಮಗಾರಿಗಳು ಇತ್ಯಾದಿಗಳನ್ನು ಒಳಗೊಂಡಂತೆ ನೋಂದಾಯಿತ ಗುತ್ತಿಗೆದಾರರ ಸಂಪೂರ್ಣ ದತ್ತಸಂಚಯವನ್ನು ಇಲಾಖೆಯು ನಿರ್ವಹಿಸುವುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು.

ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್‌ನ ಹಂತ–2ರ ಭಾಗವಾಗಿ ದತ್ತಸಂಚಯವನ್ನು ರಚಿಸಲಾಗುತ್ತಿದೆ ಎಂದು ನಿರ್ಗಮನ ಸಭೆಯಲ್ಲಿ ಸರ್ಕಾರವು ತಿಳಿಸಿತು (ಏಪ್ರಿಲ್ 2022).

4.2 ಬಿಡ್‌ಗಳ ಮೌಲ್ಯಮಾಪನದಲ್ಲಿ ಮತ್ತು ಗುತ್ತಿಗೆದಾರರ ಆಯ್ಕೆಯಲ್ಲಿ ನ್ಯೂನತೆಗಳು

ಟೆಂಡರ್ ನಿಯಮಗಳು ಮತ್ತು ಷರತ್ತುಗಳಲ್ಲಿ ನಿಗದಿಪಡಿಸಿದ ಮಾನದಂಡಗಳಿಗೆ ಅನುಗುಣವಾಗಿ ಕಟ್ಟುನಿಟ್ಟಾಗಿ ಬಿಡ್‌ಗಳ ಮೌಲ್ಯಮಾಪನವನ್ನು ಮಾಡಬೇಕು. ಲೆಕ್ಕಪರಿಶೋಧನೆಯು ಆಯ್ದ ವಿಭಾಗಗಳಿಂದ ಕಾರ್ಯಗತಗೊಳಿಸಿದ ₹3583.28 ಕೋಟಿ ವೆಚ್ಚದ 499 ಗುತ್ತಿಗೆಗಳನ್ನು ಲೆಕ್ಕಪರಿಶೋಧನೆಯು ಪರಿಶೀಲಿಸಿತು ಮತ್ತು ಬಿಡ್‌ದಾರರ ತಾಂತ್ರಿಕ ಮೌಲ್ಯಮಾಪನದಲ್ಲಿ ನಿಗದಿಪಡಿಸಿದ ಮಾನದಂಡಗಳಿಂದ ದೊಡ್ಡ ಪ್ರಮಾಣದ ವ್ಯತ್ಯಾಸಗಳನ್ನು ಗಮನಿಸಲಾಯಿತು. ವಿವರವಾದ ಲೆಕ್ಕಪರಿಶೋಧನಾ ಅವಿಷ್ಕಾರಗಳನ್ನು ಮುಂದಿನ ಕಂಡಿಕೆಗಳನ್ನು ನೀಡಲಾಗಿದೆ.

4.2.1 ಒಂದೇ ಬಿಡ್‌ಅನ್ನು ಅಂಗೀಕರಿಸಿದ್ದರಿಂದ ಸ್ಪರ್ಧೆಯ ಕೊರತೆ

ಸ್ಪರ್ಧಾತ್ಮಕ ಆಧಾರದ ಮೇಲೆ ಗುತ್ತಿಗೆಗಳನ್ನು ನೀಡಬೇಕೆಂದು ಹಣಕಾಸಿನ ನಿಯಮಗಳು ನಿಗದಿಪಡಿಸುತ್ತವೆ. ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆಯ ಕಂಡಿಕೆ–179 ಒಂದೇ ಬಿಡ್, ಶಂಕಿತ ಒಳಸಂಚು ಅಥವಾ ಕನಿಷ್ಠ ಬೆಲೆಯ ಬಿಡ್ ಅಂದಾಜು ವೆಚ್ಚಕ್ಕಿಂತ ಗಣನೀಯವಾಗಿ ಹೆಚ್ಚಿದ್ದರೆ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವುದು ಮತ್ತು ಹೊಸ ಟೆಂಡರ್‌ಗಳನ್ನು ಮರು–ಆಹ್ವಾನಿಸುವುದು ಮೊದಲ ಆಯ್ಕೆಯಾಗಬೇಕು. ಆದರೆ ಸಿವಿಸಿ ಮಾರ್ಗಸೂಚಿಗಳಲ್ಲಿ ನಿಗದಿಪಡಿಸಿದ ಪ್ರಕರಣಗಳನ್ನು ಒಳಗೊಂಡಂತೆ ಏಕೈಕ ಬಿಡ್

ಪ್ರಕರಣಗಳನ್ನು ವ್ಯವಹರಿಸುವ ವಿಧಾನದ ಬಗ್ಗೆ ಸರ್ಕಾರವು ಹಲವಾರು ಸೂಚನೆಗಳನ್ನು ನೀಡಿದ್ದರೂ, ಪರೀಕ್ಷಾ–ತನಿಖೆ ನಡೆಸಿದ ವಿಭಾಗಗಳಲ್ಲಿ ಸ್ಪರ್ಧಾತ್ಮಕ ಬಿಡ್‌ಗಳನ್ನು ಪಡೆಯಲು ಮರು–ಟೆಂಡರ್ ಮಾಡದೇ ಏಕೈಕ ಬಿಡ್‌ದಾರರಿಗೆ ಗುತ್ತಿಗೆಯನ್ನು ನೀಡಿರುವುದನ್ನು ಗಮನಿಸಲಾಯಿತು.

2016–21ರ ಅವಧಿಯಲ್ಲಿ ಎನ್‌ಐಟಿಗಳಿಗೆ ಪ್ರತಿಯಾಗಿ ಸ್ವೀಕರಿಸಿದ ಬಿಡ್‌ಗಳ ಸಂಖ್ಯೆ ಕಡಿಮೆಯಿದ್ದರೂ, ಸ್ವೀಕರಿಸಿದ ಸೀಮಿತ ಬಿಡ್‌ಗಳಲ್ಲಿಯೇ ಗುತ್ತಿಗೆಗಳನ್ನು ಅಂತಿಮಗೊಳಿಸಲಾಗಿರುವುದನ್ನು ಆಯ್ದ ವಿಭಾಗಗಳಲ್ಲಿನ ದಾಖಲೆಗಳ ಪರೀಕ್ಷಾ–ತನಿಖೆಯ ಸಮಯದಲ್ಲಿ ಗಮನಿಸಲಾಯಿತು. ಪರೀಕ್ಷಾ–ತನಿಖೆ ನಡೆಸಿದ ವಿಭಾಗಗಳಲ್ಲಿ 2016–21ರ ಅವಧಿಯಲ್ಲಿ ಪರೀಕ್ಷಾ–ತನಿಖೆ ನಡೆಸಿದ ಕಾಮಗಾರಿಗಳಿಗೆ ಪ್ರತಿಯಾಗಿ ಸ್ವೀಕರಿಸಿದ ಬಿಡ್‌ಗಳ ಸ್ಥಿತಿಯನ್ನು ಕೆಳಗಿನ **ಕೋಷ್ಟಕ–4.2ರಲ್ಲಿ** ನೀಡಲಾಗಿದೆ:

ಕೋಷ್ಟಕ–4.2: 2016–21ರ ಅವಧಿಯಲ್ಲಿ ಸ್ವೀಕರಿಸಿದ ಬಿಡ್‌ಗಳ ವಿಭಾಗಾವಾರು ಸಂಖ್ಯೆ

(₹ ಕೋಟಿಗಳಲ್ಲಿ)

ಕ್ರಮ ಸಂಖ್ಯೆ	ವಿಭಾಗ	ಕಾಮಗಾರಿಗಳ ಸಂಖ್ಯೆ	ಏಕೈಕ ಬಿಡ್		ಎರಡು ಬಿಡ್‌ಗಳು		ಮೂರು ಮತ್ತು ಹೆಚ್ಚಿನ ಬಿಡ್‌ಗಳು	
			ಕಾಮಗಾರಿಗಳ ಸಂಖ್ಯೆ	ವೆಚ್ಚ	ಕಾಮಗಾರಿಗಳ ಸಂಖ್ಯೆ	ವೆಚ್ಚ	ಕಾಮಗಾರಿಗಳ ಸಂಖ್ಯೆ	ವೆಚ್ಚ
1	ಎಸ್‌ಹೆಚ್‌ಡಿಪಿ	40	6	161.00	23	634.29	11	279.71
2	ಶಿವಮೊಗ್ಗ	26	9	23.00	9	26.50	8	30.78
3	ಮೈಸೂರು	22	3	27.60	10	126.96	9	51.58
4	ಕೋಲಾರ	20	3	22.18	8	30.53	9	37.59
5	ತುಮಕೂರು	26	7	23.89	11	70.25	8	32.30
6	ಮಂಡ್ಯ	29	10	46.79	12	77.77	7	34.91
7	ಹಾಸನ	29	8	34.95	17	81.81	4	12.97
8	ಚಿಕ್ಕಮಗಳೂರು	27	13	76.23	12	51.68	2	7.44
9	ಸಿರ್ಸಿ	20	3	8.88	10	24.73	7	18.93
10	ಕಲಬುರಗಿ	22	4	12.86	7	22.85	11	40.98
11	ರಾಮನಗರ	23	5	26.95	7	40.85	11	39.43
12	ಚಿತ್ರದುರ್ಗ	25	17	68.34	6	34.29	2	8.29
13	ಮಂಗಳೂರು	27	10	32.13	14	98.80	3	11.01
14	ಧಾರವಾಡ	24	3	37.80	11	57.88	10	45.96
15	ಚಿಕ್ಕೋಡಿ	21	5	23.32	14	60.37	2	7.72
16	ಬಳ್ಳಾರಿ	19	6	35.80	13	80.65	0	0.00
17	ರಾಯಚೂರು	20	7	62.59	12	105.15	1	6.00
18	ಬೆಂಗಳೂರು	19	2	13.39	8	37.21	9	60.58
19	ಬೀದರ್	20	3	23.40	14	77.73	3	15.78
20	ಬೆಳಗಾವಿ	20	7	48.45	7	47.89	6	40.45
21	ಬಾಗಲಕೋಟೆ	20	0	0.00	17	141.12	3	61.14
ಒಟ್ಟು		**499**	**131**	**809.55**	**242**	**1929.31**	**126**	**843.55**

ಆಧಾರ: ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಪಡೆದ ಮಾಹಿತಿ

2016–21ರ ಅವಧಿಯಲ್ಲಿ ಪರೀಕ್ಷಾ–ತನಿಖೆಗೆ ಆಯ್ಕೆಯಾದ ಬಿಡ್‌ಗಳ ಸಂಖ್ಯೆಗೆ ಸಂಬಂಧಿಸಿದ ದತ್ತಾಂಶ ವಿಶ್ಲೇಷಣೆಯು ಈ ಕೆಳಗಿನ ಅಂಶಗಳನ್ನು ತಿಳಿಯಪಡಿಸಿತು:

- ಪರೀಕ್ಷಾ–ತನಿಖೆ ನಡೆಸಲಾದ 499 ಗುತ್ತಿಗೆಗಳಲ್ಲಿ, ₹809.55 ಕೋಟಿ ಮೌಲ್ಯದ 131 ಗುತ್ತಿಗೆಗಳನ್ನು (ಶೇಕಡಾ 26) ಏಕೈಕ ಬಿಡ್‌ದಾರರಿಗೆ ನೀಡಲಾಗಿತ್ತು. ಈ ಯಾವುದೇ ಪ್ರಕರಣಗಳಲ್ಲಿ ಸ್ಪರ್ಧಾತ್ಮಕ ದರಗಳನ್ನು ಪಡೆಯಲು ಮರುಟೆಂಡರ್ ಮಾಡಿರಲಿಲ್ಲ.
- ₹1929.31 ಕೋಟಿ ಮೌಲ್ಯದ (ಶೇಕಡಾ 49) 242 ಗುತ್ತಿಗೆಗಳನ್ನು ಮರು ಟೆಂಡರ್ ಮಾಡದೇ ಸ್ವೀಕರಿಸಿದ್ದ ಎರಡು ಬಿಡ್‌ಗಳಲ್ಲಿ ಒಂದಕ್ಕೆ ವಹಿಸಲಾಗಿತ್ತು.

- ₹843.55 ಕೋಟಿ (ಶೇಕಡಾ 25) ವೆಚ್ಚದ 126 ಪ್ರಕರಣಗಳಲ್ಲಿ ಮೂರು ಅಥವಾ ಹೆಚ್ಚಿನ ಬಿಡ್‌ಗಳನ್ನು ಸ್ವೀಕರಿಸಲಾಗಿತ್ತು. ಹೀಗೆ, ಒಪ್ಪಂದಗಳ ಸ್ವಲ್ಪ ಭಾಗಕ್ಕೆ ಮಾತ್ರ ಸ್ಪರ್ಧಾತ್ಮಕ ಬಿಡ್‌ಗಳನ್ನು ಸ್ವೀಕರಿಸಲಾಗಿತ್ತು.

ವ್ಯಾಪಕ ಪ್ರಚಾರ ಮತ್ತು ಸಾಕಷ್ಟು ಸಮಯವನ್ನು ನೀಡಿದ್ದರೂ, ನಿರ್ದಿಷ್ಟ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯ ಕಾಮಗಾರಿಗಳು ಕೇಂದ್ರೀಕೃತವಾಗಿದ್ದ ಕಾರಣ ಮತ್ತು ಲೋಹದ ಕ್ವಾರಿ ಮತ್ತು ಯಂತ್ರೋಪಕರಣಗಳ ಕೊರತೆಯಿಂದಾಗಿ ಎಸ್‌ಹೆಚ್‌ಡಿಪಿಗೆ ಸಂಬಂಧಿಸಿದ ಆರು ಕಾಮಗಾರಿಗಳಲ್ಲಿ ಒಂದೇ ಬಿಡ್ ಮತ್ತು 23 ಕಾಮಗಾರಿಗಳಲ್ಲಿ ಎರಡು ಬಿಡ್‌ಗಳನ್ನು ಸ್ವೀಕರಿಸಲಾಗಿತ್ತು ಎಂದು ಸರ್ಕಾರವು ತಿಳಿಸಿತು (ಆಗಸ್ಟ್ 2022).

ಕಂಡಿಕೆ–4.1.2ರಲ್ಲಿ ಸೂಚಿಸಿದಂತೆ ಎಸ್‌ಎಚ್‌ಡಿಪಿಯಲ್ಲಿ ಪರೀಕ್ಷಾ–ತನಿಖೆ ನಡೆಸಿದ 40 ಕಾಮಗಾರಿಗಳಲ್ಲಿ 30ರಲ್ಲಿ ಬಿಡ್‌ಗಳ ಸಲ್ಲಿಕೆಗೆ ಸಾಕಷ್ಟು ಸಮಯವನ್ನು ನೀಡದ ಕಾರಣ ಉತ್ತರವನ್ನು ಒಪ್ಪಲಾಗುವುದಿಲ್ಲ. ಇತರ ವಿಭಾಗಗಳಿಗೆ ಸಂಬಂಧಿಸಿದಂತೆ ಸರ್ಕಾರವು ಉತ್ತರವನ್ನು ನೀಡಿಲ್ಲ.

ಶಿಫಾರಸು–7: ಸರ್ಕಾರದ ಸೂಚನೆಗಳನ್ನು ಉಲ್ಲಂಘಿಸಿ ಏಕೈಕ ಬಿಡ್ಡನ್ನು ಸ್ವೀಕರಿಸಿ ಟೆಂಡರ್ ಅಂಗೀಕರಿಸುವ ಪ್ರಾಧಿಕಾರದ ವಿರುದ್ಧ ಶಿಸ್ತು ಕ್ರಮವನ್ನು ಪ್ರಾರಂಭಿಸಲು ರಾಜ್ಯ ಸರ್ಕಾರವು ಕೆಪಿಡಬ್ಲ್ಯುಡಿ ಸಂಹಿತೆಯಡಿಯಲ್ಲಿ ಅಗತ್ಯ ನಿಬಂಧನೆಗಳನ್ನು ಸೇರಿಸಬೇಕು

4.2.2 ಟೆಂಡರ್‌ಗಳ ನಿಯಮಬಾಹಿರ ಅಂಗೀಕಾರ

ಪ್ರಸ್ತುತ ದರಪಟ್ಟಿಯ (ಸಿಎಸ್‌ಆರ್) ಶೇಕಡಾ 10ಕ್ಕಿಂತ ಹೆಚ್ಚು ಪ್ರೀಮಿಯಂನೊಂದಿಗೆ ಟೆಂಡರ್‌ಗಳನ್ನು ಸ್ವೀಕರಿಸಿದರೆ ದರಗಳನ್ನು ಕಡಿಮೆ ಮಾಡಲು ಕನಿಷ್ಠ ಬೆಲೆ ನೀಡಿರುವ ಟೆಂಡರ್‌ದಾರರೊಂದಿಗೆ ಸಂಧಾನವನ್ನು ನಡೆಸಬಾರದು ಎಂದು 3ನೇ ಡಿಸೆಂಬರ್ 2002ರ ಸುತ್ತೋಲೆ ಸೂಚನೆಗಳು ನಿಗದಿಪಡಿಸಿದ್ದವು. ಟೆಂಡರ್‌ಗಳನ್ನು ತಿರಸ್ಕರಿಸಿ ಹೊಸದಾಗಿ ಟೆಂಡರ್‌ಗಳನ್ನು ಆಹ್ವಾನಿಸುವುದು ಆದ್ಯತೆಯ ಕ್ರಮವಾಗಿರಬೇಕು. ಕನಿಷ್ಠ ಮೂರು ಬಾರಿ ಟೆಂಡರ್ ಆಹ್ವಾನಿಸಿದ ನಂತರವೇ ಸಂಧಾನ ನಡೆಸಬೇಕು ಎಂದು ಸರ್ಕಾರದ ಸುತ್ತೋಲೆಗಳು (ಆಗಸ್ಟ್ 2006 ಮತ್ತು ಜೂನ್ 2007) ಷರತ್ತು ವಿಧಿಸಿವೆ. ₹50 ಲಕ್ಷ ಮತ್ತು ಅದಕ್ಕಿಂತ ಹೆಚ್ಚಿನ ಟೆಂಡರ್ ಮೌಲ್ಯಕ್ಕೆ ಸಂಬಂಧಿಸಿದಂತೆ ಗುತ್ತಿಗೆದಾರರ ಜೊತೆ ಸಂಧಾನ ನಡೆಸಿ ಸಿಎಸ್‌ಆರ್‌ನ ಶೇಕಡಾ ಹತ್ತರಷ್ಟು ಮೀರದ ಪ್ರೀಮಿಯಂ ಒಳಗೆ ತರಲು ಮತ್ತು ಟಿಎಎಗೆ ಸಲ್ಲಿಸಲು ಸರ್ಕಾರವು ಟೆಂಡರ್ ಪರಿಶೀಲನೆ ಸಮಿತಿಗೆ (ಟಿಎಸ್‌ಸಿ) ಅಧಿಕಾರ ನೀಡಿದೆ. (ಜೂನ್ 2009 ಮತ್ತು ಸೆಪ್ಟೆಂಬರ್ 2018 ರಲ್ಲಿ ಅಧಿಕಾರದ ನಿಯೋಗ).

2016–21ರ ಅವಧಿಯಲ್ಲಿ, ₹220.54 ಕೋಟಿ[7] ವೆಚ್ಚದ 43 ಟೆಂಡರ್‌ಗಳನ್ನು (₹50 ಲಕ್ಷ ಮತ್ತು ಅದಕ್ಕಿಂತ ಹೆಚ್ಚಿನ ಮೌಲ್ಯದ) (ಪರೀಕ್ಷಾ–ತನಿಖೆ ನಡೆಸಿದ 131 ಏಕ ಬಿಡ್‌ಗಳಲ್ಲಿ) ಶೇಕಡಾ 10ಕ್ಕಿಂತ ಹೆಚ್ಚಿನ ಟೆಂಡರ್ ಪ್ರೀಮಿಯಂನೊಂದಿಗೆ ಮೊದಲ ಕರೆಯಲ್ಲಿಯೇ ಸ್ವೀಕರಿಸಲಾಗಿತ್ತು. ಈ ಟೆಂಡರ್‌ಗಳನ್ನು ತಿರಸ್ಕರಿಸುವ ಬದಲು ಟಿಎಸ್‌ಸಿಯಿಂದ ಅವುಗಳನ್ನು ಒಪ್ಪಿಸಿಕೊಳ್ಳಲು ಶಿಫಾರಸು ಮಾಡಲಾಯಿತು ಮತ್ತು ಕಾರ್ಯದರ್ಶಿಯಿಂದ 'ಅನುಮೋದಿಸಲಾಗಿದೆ' ಎಂದು ದೃಢೀಕರಿಸಲಾಯಿತು. ಈ ಬಿಡ್‌ಗಳಿಗೆ ಶಿಫಾರಸು ಮಾಡಲಾದ ಟೆಂಡರ್ ಪ್ರೀಮಿಯಂ ದರವು ಸಿಎಸ್‌ಆರ್‌ಗಿಂತ ಶೇಕಡಾ 11 ಮತ್ತು 32ರ ನಡುವಿನ ವ್ಯಾಪ್ತಿಯಲ್ಲಿತ್ತು. ಟಿಎಸಿ ರಚನೆಯ ನಂತರವೂ ಈ ಟೆಂಡರ್‌ಗಳನ್ನು ಅದರ ಪರಿಶೀಲನೆಗೆ ಒಳಪಡಿಸಿರಲಿಲ್ಲ. ಹೀಗೆ, ಟಿಎಸ್‌ಸಿ ಅಳವಡಿಸಿಕೊಂಡ ಕಾರ್ಯವಿಧಾನವು ಸರ್ಕಾರದ ಸೂಚನೆಗಳಿಗೆ ಅನುಗುಣವಾಗಿರಲಿಲ್ಲ ಮತ್ತು ₹18.68 ಕೋಟಿ ಹೆಚ್ಚುವರಿ ಆರ್ಥಿಕ ಪರಿಣಾಮದಲ್ಲಿ ಪರಿಣಮಿಸಿತು. ವಿವರಗಳನ್ನು **ಅನುಬಂಧ–4.6** ರಲ್ಲಿ ನೀಡಲಾಗಿದೆ.

[7] ಎನ್‌ಐಟಿ ಪ್ರಕಾರ ಟೆಂಡರ್ ಮಾಡಿದ ಮೊತ್ತ

ದಿನಾಂಕ 30.07.2009ರ ಸರ್ಕಾರೀ ಆದೇಶದ ಅನ್ವಯ ಗಣನೀಯವಾಗಿ ಹೆಚ್ಚಿನ ಮೌಲ್ಯವಿರುವ ಟೆಂಡರ್‌ಗಳನ್ನು ಸಂಧಾನ ಮಾಡುವ ಅಧಿಕಾರವನ್ನು ಟಿಎಸ್‌ಸಿಯಿಂದ ತೆಗೆದುಹಾಕಲಾಗಿದೆ ಆದರೆ ಅದನ್ನು ಸಂಧಾನ ನಡೆಸಲು ಟಿಎಎಗೆ ಅಧಿಕಾರ ನೀಡಲಾಗಿದೆ ಎಂದು ಸರ್ಕಾರವು ತಿಳಿಸಿತು (ಆಗಸ್ಟ್ 2022). ಕಾಮಗಾರಿಯ ತುರ್ತು ಸ್ಥಿತಿಯಿಂದ ಟಿಎಸ್‌ಸಿ ಬಿಡ್‌ಗಳನ್ನು ರವಾನಿಸಿತ್ತು ಮತ್ತು ಅದನ್ನು ಟಿಎಎ ಅನುಮೋದಿಸಿತು ಎಂದೂ ಸಹ ತಿಳಿಸಲಾಯಿತು.

ದಿನಾಂಕ 24.09.2018ರ ಸರ್ಕಾರೀ ಆದೇಶದ ಅನ್ವಯ ಹಣಕಾಸು ಅಧಿಕಾರಗಳ ಬದಲಾವಣೆಗಳನ್ನು ಮಾಡುವಾಗ ಸಂಧಾನಿತ ದರವು ಸಿಎಸ್‌ಆರ್ ಅನ್ನು ಶೇಕಡಾ 10ಕ್ಕಿಂತ ಹೆಚ್ಚಿಗೆ ಮೀರದಿದ್ದರೆ ಟಿಎಸ್‌ಸಿ ಸ್ವೀಕಾರಕ್ಕಾಗಿ ಸರ್ಕಾರಕ್ಕೆ ಶಿಫಾರಸು ಮಾಡಬಹುದು ಎಂದು ಹೇಳಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

4.2.3 ಟೆಂಡರ್‌ಗಳ ನಿಯಮಬಾಹಿರ ತಿರಸ್ಕಾರ

ಟೆಂಡರ್‌ನಲ್ಲಿ ಪ್ರಮುಖ ಬಿಡ್‌ದಾರರು ಮಾತ್ರ ಭಾಗವಹಿಸುತ್ತಾರೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಮುಂಗಡ ಹಣ ಠೇವಣಿ (ಇಎಮ್‌ಡಿ) ಎಂಬ ಮರುಪಾವತಿಸಬಹುದಾದ ಠೇವಣಿ ತೆಗೆದುಕೊಳ್ಳಲಾಗುತ್ತದೆ. ₹ ಒಂದು ಲಕ್ಷದವರೆಗಿನ ಇಎಮ್‌ಡಿ ಮೊತ್ತವನ್ನು ಕ್ರೆಡಿಟ್ ಕಾರ್ಡ್/ಡೆಬಿಟ್ ಕಾರ್ಡ್/ಎನ್‌ಇಎಫ್‌ಟಿ ಮೂಲಕ ಸ್ವೀಕರಿಸಲಾಗುತ್ತದೆ. ಇಎಮ್‌ಡಿ ಮೊತ್ತವು ₹ ಒಂದು ಲಕ್ಷಕ್ಕಿಂತ ಹೆಚ್ಚಿದ್ದರೆ, ಗುತ್ತಿಗೆದಾರರು ₹ ಒಂದು ಲಕ್ಷಕ್ಕಿಂತ ಹೆಚ್ಚಿನ ಮೊತ್ತವನ್ನು ಬ್ಯಾಂಕ್ ಖಾತರಿ (ಬಿಜಿ) ಅಥವಾ ಟೆಂಡರ್ ಡಾಕ್ಯುಮೆಂಟ್‌ನಲ್ಲಿ ಸೂಚಿಸಲಾದ ಯಾವುದೇ ನಮೂನೆಯ ಮೂಲಕ ಪಾವತಿಸುವ ಆಯ್ಕೆಯನ್ನು ಹೊಂದಿರುತ್ತಾರೆ. ಟೆಂಡರ್‌ಗಳಲ್ಲಿ ಇಎಮ್‌ಡಿ ಪೂರ್ಣವಾಗಿ ಅಥವಾ ಸ್ವೀಕಾರಾರ್ಹ ರೂಪದಲ್ಲಿ ಇರದಿದ್ದರೆ ಅಥವಾ ಬಿಡ್ ತೆರೆದ ನಂತರ ಟೆಂಡರ್‌ದಾರರು ಟೆಂಡರ್ ಅನ್ನು ಹಿಂತೆಗೆದುಕೊಂಡರೆ ಹೀಗೆ ಪಾವತಿಸಿದ ಇಎಮ್‌ಡಿಯನ್ನು ಸರ್ಕಾರದ ಖಾತೆಗೆ ಮುಟ್ಟುಗೋಲು ಹಾಕಿಕೊಳ್ಳಬಹುದು.

ದಿನಾಂಕ 20.02.2014ರ ಸರ್ಕಾರೀ ಆದೇಶದ ಪ್ರಕಾರ ಯಶಸ್ವಿ ಬಿಡ್‌ದಾರರು ಮಾತ್ರ ಒಪ್ಪಂದವನ್ನು ಕಾರ್ಯಗತಗೊಳಿಸುವ ಸಮಯದಲ್ಲಿ ಮೂಲ ಬಿಜಿಯನ್ನು ಸಲ್ಲಿಸಬೇಕು. ಆದ್ದರಿಂದ, ಮೂಲ ಬಿಜಿಯನ್ನು ನೀಡಿಲ್ಲ ಎಂಬ ನೆಪದಲ್ಲಿ ತಾಂತ್ರಿಕ ಪರಿಶೀಲನೆಯ ಸಮಯದಲ್ಲಿ ಅಥವಾ ಹಣಕಾಸಿನ ಮೌಲ್ಯಮಾಪನದ ಹಂತಗಳಲ್ಲಿ ಯಾವುದೇ ಬಿಡ್‌ಗಳನ್ನು ಅನರ್ಹಗೊಳಿಸಬಾರದು.

ಹಂತ IIIರ ಅಡಿಯಲ್ಲಿ 126 ಪ್ಯಾಕೇಜ್‌ಗಳ ಸಂಬಂಧವಾಗಿ ಮತ್ತು ಹಂತ IVರ ಅಡಿಯಲ್ಲಿ ಐದು ಪ್ಯಾಕೇಜ್‌ಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಿದ 446 ಬಿಡ್‌ಗಳಲ್ಲಿ, , ಈ ಕೆಳಗೆ ತಿಳಿಸಿರುವಂತೆ, ಏಜೆನ್ಸಿ/ಗುತ್ತಿಗೆದಾರರು ಮೂಲ ಬಿಜಿಯನ್ನು ಸಲ್ಲಿಸಿರಲಿಲ್ಲ ಎಂಬ ನೆಪದಿಂದ ತಾಂತ್ರಿಕ ಮೌಲ್ಯಮಾಪನದ ಸಮಯದಲ್ಲಿ ಒಟ್ಟು 89 ಬಿಡ್‌ಗಳನ್ನು ತಿರಸ್ಕರಿಸಿರುವುದನ್ನು ಮುಖ್ಯ ಇಂಜಿನಿಯರ್, ಪಿಐಯು, ಎಸ್‌ಹೆಚ್‌ಡಿಪಿಯಲ್ಲಿನ ದಾಖಲೆಗಳ ಲೆಕ್ಕಪರಿಶೋಧನಾ ಪರಿಶೀಲನೆಯ ಸಮಯದಲ್ಲಿ ಗಮನಿಸಲಾಯಿತು

- 80 ಬಿಡ್‌ಗಳನ್ನು ತಾಂತ್ರಿಕ ಬಿಡ್‌ಗಳನ್ನು ತೆರೆಯದೆಯೇ ತಿರಸ್ಕರಿಸಲಾಯಿತು
- ತಾಂತ್ರಿಕ ಬಿಡ್‌ಗಳನ್ನು ತೆರೆಯಲಾದ ಎಂಟು ಪ್ರಕರಣಗಳಲ್ಲಿ, ನಿರೀಕ್ಷಿತ ಬಿಡ್‌ದಾರರು ಪೂರ್ಣ ಮೊತ್ತಕ್ಕೆ ಬಿಜಿಯನ್ನು ಅಪ್‌ಲೋಡ್ ಮಾಡಿದ್ದರೂ ಸಹ ಬಿಡ್‌ಗಳನ್ನು ತಿರಸ್ಕರಿಸಲಾಗಿದೆ.
- ಒಂದು[8] ಪ್ರಕರಣದಲ್ಲಿ ₹48.50 ಲಕ್ಷದ ಸಂಪೂರ್ಣ ಇಎಂಡಿ ಮೊತ್ತವನ್ನು ಬಿಜಿ ಬದಲಿಗೆ ಇ–ಪಾವತಿ ಮೂಲಕ ಪಾವತಿಸಲಾಗಿದೆ ಎಂಬ ಕಾರಣದಿಂದ ಬಿಡ್ ಅನ್ನು ತಿರಸ್ಕರಿಸಲಾಗಿದೆ.

[8] ಮೆ.ಅಮೃತ ಕನ್‌ಸ್ಟ್ರಕ್ಷನ್ ಅವರ ಬಿಡ್‌ನ ಪ್ಯಾಕೇಜ್ ಸಂಖ್ಯೆ 219.

ಟೆಂಡರ್‌ಗಳನ್ನು ಮನಬಂದಂತೆ/ತರ್ಕಬದ್ಧವಲ್ಲದ ರೀತಿಯಲ್ಲಿ ತಿರಸ್ಕರಿಸಿರುವುದು ಸೀಮಿತ ಸ್ಪರ್ಧೆಯಲ್ಲಿ ಪರಿಣಮಿಸಿತಲ್ಲದೇ ನಿರ್ದಿಷ್ಟ ಬಿಡ್‌ದಾರರಿಗೆ ಒಲವು ತೋರಿರುವ ಅಪಾಯವನ್ನು ತಳ್ಳಿಹಾಕಲು ಸಾಧ್ಯವಿಲ್ಲ. ವಿವರಗಳನ್ನು **ಅನುಬಂಧ–4.7** ರಲ್ಲಿ ನೀಡಲಾಗಿದೆ.

ಕಳಪೆ ಆರ್ಥಿಕ ಮತ್ತು ಆರೋಗ್ಯದ ನಿರ್ಬಂಧಗಳಿಂದಾಗಿ ಗುತ್ತಿಗೆದಾರರು ಟೆಂಡರ್ ಸ್ಪರ್ಧೆಯಿಂದ ಹೊರಬರಲು ಇಎಮ್‌ಡಿಗೆ ಬಿಜಿಗಳನ್ನು ಸಲ್ಲಿಸಿರಲಿಲ್ಲ ಎಂದು ಸರ್ಕಾರವು ತಿಳಿಸಿತು (ಆಗಸ್ಟ್ 2022). ಆದರೆ, ಶಿಕ್ಷಾರ್ಹ ಕ್ರಮವಾಗಿ ಸಂಬಂಧಪಟ್ಟ ಗುತ್ತಿಗೆದಾರರಿಂದ ಇಎಮ್‌ಡಿ ವಸೂಲಿ ಮಾಡಲು ಮತ್ತು ಭವಿಷ್ಯದಲ್ಲಿ ಸರ್ಕಾರದ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಲು ಕ್ರಮ ಕೈಗೊಳ್ಳುವುದಾಗಿ ಸರ್ಕಾರವು ತಿಳಿಸಿತು.

ಗುತ್ತಿಗೆದಾರ ನಿಯಮಗಳ ನೋಂದಣಿ, 1994ರ ನಿಯಮ 13ರ ಪ್ರಕಾರ, ನೋಂದಾಯಿತ ಗುತ್ತಿಗೆದಾರನು ಟೆಂಡರ್ ಫಾರ್ಮ್‌ಗಳನ್ನು ಖರೀದಿಸಿ (ಮೂರಕ್ಕಿಂತ ಹೆಚ್ಚು ಬಾರಿ) ಟೆಂಡರ್‌ಗಳನ್ನು ಸಲ್ಲಿಸದ ಅಭ್ಯಾಸ ಹೊಂದಿರುವ ನೋಂದಾಯಿತ ಗುತ್ತಿಗೆದಾರರು ಮುಂದಿನ ಟೆಂಡರ್‌ನಲ್ಲಿ ಭಾಗವಹಿಸಲು ಅನರ್ಹರಾಗುತ್ತಾರೆ. ಕೆಪಿಡಬ್ಲ್ಯುಡಿ ಸಂಹಿತೆಯ ಕಂಡಿಕೆ 262ರ ಪ್ರಕಾರ ನೋಂದಣಿ ಪ್ರಾಧಿಕಾರವು ಅಂತಹ ಗುತ್ತಿಗೆದಾರರನ್ನು ನಿರ್ದಿಷ್ಟ ಅವಧಿಗೆ ಕಪ್ಪುಪಟ್ಟಿಗೆ ಸೇರಿಸಬಹುದು. ಆದರೆ, ಕರ್ತವ್ಯ ಲೋಪವೆಸಗಿರುವ ಗುತ್ತಿಗೆದಾರರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಿರುವುದನ್ನು ಗಮನಿಸಲಾಯಿತು. ಉದಾಹರಣೆಗೆ, ಮೂರು ಗುತ್ತಿಗೆದಾರರು ಸಲ್ಲಿಸಿದ 20 ಬಿಡ್‌ಗಳನ್ನು ಟೆಂಡರ್ ದಸ್ತಾವೇಜಿನಲ್ಲಿ (**ಅನುಬಂಧ–4.8**) ಸೂಚಿಸಿದ ರೂಪದಲ್ಲಿ ಪೂರ್ಣ ಇಎಮ್‌ಡಿಯನ್ನು ಸಲ್ಲಿಸದ ಕಾರಣ ತಿರಸ್ಕರಿಸಲಾಗಿತ್ತು ಆದರೆ, ಆ ಗುತ್ತಿಗೆದಾರನ ವಿರುದ್ಧ ಯಾವುದೇ ಶಿಕ್ಷಾರ್ಹ ಕ್ರಮ ಕೈಗೊಂಡಿರಲಿಲ್ಲ.

ತಪ್ಪಿತಸ್ಥ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳಲು ಮತ್ತು ಅಂತಹ ಗುತ್ತಿಗೆದಾರರನ್ನು ಭವಿಷ್ಯದ ಟೆಂಡರ್‌ಗಳಲ್ಲಿ ಭಾಗವಹಿಸದಂತೆ ಅನರ್ಹಗೊಳಿಸಲು ಮತ್ತು ಅವರ ನೋಂದಣಿಯನ್ನು ರದ್ದುಗೊಳಿಸಲು ಸಂಬಂಧಿಸಿದ ಮುಖ್ಯ ಇಂಜಿನಿಯರ್‌ಗಳಿಗೆ ಸೂಚನೆ ನೀಡುವುದಾಗಿ ತಿಳಿಸಿತು (ಆಗಸ್ಟ್ 2022).

4.2.4 ಯಂತ್ರೋಪಕರಣಗಳು/ಉಪಕರಣಗಳ ಮೌಲ್ಯಮಾಪನ ಮಾಡದಿರುವುದು

ಎಲ್ಲಾ ಬಿಡ್‌ದಾರರು ಪ್ರಮುಖ ಮತ್ತು ನಿರ್ಣಾಯಕ ನಿರ್ಮಾಣ ಸಲಕರಣೆಗಳ ಮಾಲೀಕತ್ವದ ಲಭ್ಯತೆಯ ಪುರಾವೆಗಳನ್ನು ಒದಗಿಸಬೇಕು ಎಂದು ಎಸ್‌ಟಿಡಿಯ ಅನುಚ್ಛೇದ 3.3(ಎ) ನಿಗದಿಪಡಿಸುತ್ತದೆ.

₹21.50 ಕೋಟಿ ವೆಚ್ಚದ ಏಳು ಕಾಮಗಾರಿಗಳಲ್ಲಿ ಗುತ್ತಿಗೆ ವಹಿಸುವ ಮುನ್ನ ಉಪಕರಣ/ಯಂತ್ರಗಳ ಮೌಲ್ಯಮಾಪನ ಮಾಡದಿರುವುದನ್ನು ಗಮನಿಸಲಾಯಿತು. ಐದು ಕಾಮಗಾರಿಗಳಲ್ಲಿ[9] ಗುತ್ತಿಗೆದಾರರು ಮತ್ತೊಬ್ಬ ಗುತ್ತಿಗೆದಾರನಿಗೆ ಸಂಬಂಧಿಸಿದ ಯಂತ್ರೋಪಕರಣಗಳ ಸರಕುಪಟ್ಟಿಗಳನ್ನು ಲಗತ್ತಿಸಿದ್ದರೆ, ಯಂತ್ರೋಪಕರಣಗಳ ಮಾಲೀಕರಾದ ಆ ಗುತ್ತಿಗೆದಾರರು ಅದೇ ಅವಧಿಯಲ್ಲಿ ನೀಡಲಾದ ಕಾಮಗಾರಿಗಳಿಗೆ ಅದೇ ಯಂತ್ರೋಪಕರಣಗಳ ಅದೇ ಸರಕುಪಟ್ಟಿಗಳನ್ನು ಲಗತ್ತಿಸಿದ್ದರು.

ಶಿವಮೊಗ್ಗ ವಿಭಾಗಕ್ಕೆ ಸಂಬಂಧಿಸಿದ ₹7.50 ಕೋಟಿ ವೆಚ್ಚದ ಎರಡು ಕಾಮಗಾರಿಗಳಲ್ಲಿ (ಡಬ್ಲ್ಯು.ಐ.ಸಂಖ್ಯೆ: 38983 & 41270) 40/60 ಟಿಪಿಹೆಚ್ ಹೆಚ್‌ಎಮ್‌ಪಿಗಾಗಿ ಸರಕುಪಟ್ಟಿ ಅಪ್‌ಲೋಡ್ ಮಾಡುವ ಬದಲು, ಗುತ್ತಿಗೆದಾರರೊಬ್ಬರು 6/10 ಟಿಪಿಹೆಚ್ ಮಿನಿ ಮಿಕ್ಸ್ ಡಾಂಬರು ಘಟಕದ ಸರಕುಪಟ್ಟಿಯನ್ನು ಅಪ್‌ಲೋಡ್ ಮಾಡಿದ್ದರು. ಗುತ್ತಿಗೆದಾರರು ನಿಜವಾದ ಸರಕುಪಟ್ಟಿ/ರಶೀದಿಯ ಬದಲಿಗೆ ಪಗ್ ಮಿಲ್‌ಗೆ ಬೆಲೆ ಪಟ್ಟಿಯನ್ನು ಅಪ್‌ಲೋಡ್ ಮಾಡಿರುವುದನ್ನು ಗಮನಿಸಲಾಯಿತು. ಆದರೆ ಕಾಮಗಾರಿಯನ್ನು ಅದೇ ಗುತ್ತಿಗೆದಾರರಿಗೆ

[9] ಕಲಬುರಗಿ ವಿಭಾಗ: 40836, 66010 ಮತ್ತು 97307. ಶಿವಮೊಗ್ಗ ವಿಭಾಗ: 65188 and 61348.

ವಹಿಸಲಾಗಿತ್ತು. ಅನರ್ಹ ಗುತ್ತಿಗೆದಾರರಿಗೆ ಕಾಮಗಾರಿ ವಹಿಸುವುದು ಕಾಮಗಾರಿ ಪೂರ್ಣಗೊಳ್ಳಲು ವಿಳಂಬವಾಗುವ ಸಂಭವನೀಯತೆಯಲ್ಲಿ ಪರಿಣಮಿಸುತ್ತದೆ.

4.2.5 ಪ್ರಮಾಣೀಕರಿಸದ ವಹಿವಾಟು ಪ್ರಮಾಣಪತ್ರಗಳನ್ನು ಒಪ್ಪಿಕೊಂಡಿರುವುದು

ವಹಿವಾಟು ಪ್ರಮಾಣಪತ್ರವು ಚಾರ್ಟರ್ಡ್ ಅಕೌಂಟೆಂಟ್ (ಸಿಎ) ನೀಡಿದ ವಾಸ್ತವಿಕ ದಾಖಲೆಯಾಗಿದ್ದು ಅದು ಅವಶ್ಯಕತೆಗಳ ಆಧಾರದ ಮೇಲೆ ಘಟಕದ ವಹಿವಾಟನ್ನು ಅದು ಪ್ರಮಾಣೀಕರಿಸುತ್ತದೆ. ಬಿಡ್ ಡಾಕ್ಯುಮೆಂಟ್‌ನ ಅನುಚ್ಛೇದ–3.2ರ ಪ್ರಕಾರ, ಕಳೆದ ಐದರಲ್ಲಿ ಎರಡು ಹಣಕಾಸು ವರ್ಷಗಳಲ್ಲಿ ಟೆಂಡರ್‌ದಾರರು ಕಾಮಗಾರಿಯ ಅಂದಾಜು ವೆಚ್ಚಕ್ಕಿಂತ ಎರಡು ಪಟ್ಟು ಕನಿಷ್ಠ ವಹಿವಾಟು ನಡೆಸಿರಬೇಕು. ಅಂತಹ ವಹಿವಾಟು ಪ್ರಮಾಣಪತ್ರಗಳ ದೃಢೀಕರಣದ ಪರಿಶೀಲನೆಗಾಗಿ, ಯುಡಿಐಎನ್ ಎಂದು ಕರೆಯಲ್ಪಡುವ 18 ಅಂಕೆಗಳ ವಿಶಿಷ್ಟ ಸಂಖ್ಯೆಯ ಸಿಸ್ಟಂ ರಚನೆಯ ಪರಿಕಲ್ಪನೆಯನ್ನು ಐಸಿಎಐ ಪರಿಚಯಿಸಿತು. ಸಿಎಯಿಂದ ದೃಢೀಕರಿಸಿದ ಪ್ರತಿ ಡಾಕ್ಯುಮೆಂಟ್‌ಗೆ ಪ್ರತ್ಯೇಕವಾಗಿ ಅದರ ರಚನೆಯಾಗುತ್ತದೆ ಮತ್ತು ಇದು ಫೆಬ್ರವರಿ 1, 2019ರಿಂದ ಕಡ್ಡಾಯವಾಗಿದೆ.

2019ರ ಫೆಬ್ರವರಿ 1ರ ನಂತರ ಎನ್‌ಐಟಿ ಪ್ರಕಟಿಸಲಾದ ₹801.71 ಕೋಟಿ ಮೌಲ್ಯದ 157 ಕಾಮಗಾರಿಗಳಲ್ಲಿ ಯಾವುದರಲ್ಲಿಯೂ ವಹಿವಾಟು ಪ್ರಮಾಣಪತ್ರಗಳಲ್ಲಿ ಸಿಎಗಳು ಯುಡಿಐಎನ್ ಸಂಖ್ಯೆಯನ್ನು ಸೂಚಿಸಿರಲಿಲ್ಲ (**ಅನುಬಂಧ–4.9**) ಎಂಬುದನ್ನು 17 ವಿಭಾಗಗಳಲ್ಲಿನ ದಾಖಲೆಗಳ ಪರೀಕ್ಷಾ–ತನಿಖೆಯು ತಿಳಿಯಪಡಿಸಿತು. ಯುಡಿಐಎನ್ ಅನುಪಸ್ಥಿತಿಯಲ್ಲಿ, ಬಿಡ್‌ದಾರರು ಅಪ್‌ಲೋಡ್ ಮಾಡಿದ ವಹಿವಾಟು ಪ್ರಮಾಣಪತ್ರಗಳ ದೃಢೀಕರಣವನ್ನು ಲೆಕ್ಕಪರಿಶೋಧನೆಯು ಪರಿಶೀಲಿಸಲು ಸಾಧ್ಯವಾಗಲಿಲ್ಲ.

ಈ ವಿಷಯವನ್ನು ತಿಳಿಸಿದ ನಂತರ, ಯುಡಿಐಎನ್ ಅನ್ನು ಕಡ್ಡಾಯಗೊಳಿಸುವುದಾಗಿ ನಿರ್ಗಮನ ಸಭೆಯಲ್ಲಿ ಸರ್ಕಾರವು ತಿಳಿಸಿತು (ಏಪ್ರಿಲ್ 2022).

4.2.6 ಬಿಡ್ಡರ್‌ಗಳ ಬಿಡ್ ಸಾಮರ್ಥ್ಯವನ್ನು ಪರಿಶೀಲಸಲು ವ್ಯವಸ್ಥೆಯ ಅನುಪಸ್ಥಿತಿ

ಕಾಮಗಾರಿಗಳನ್ನು ಸಕಾಲದಲ್ಲಿ ಪೂರ್ಣಗೊಳಿಸಲು ಬಿಡ್‌ದಾರರ ಬಿಡ್ ಸಾಮರ್ಥ್ಯದ ಸೂಕ್ತವಾದ ಮೌಲ್ಯಮಾಪನ ಅತ್ಯಗತ್ಯವಾಗಿದೆ. ಎಸ್‌ಟಿಡಿ ಬಿಡ್ ಸಾಮರ್ಥ್ಯವನ್ನು ನಿರ್ಣಯಿಸಲು ಸೂತ್ರವನ್ನು[10] ಸೂಚಿಸಿದೆ. ಆದರೆ, ಬಿಡ್‌ದಾರರ ಬಿಡ್ ಸಾಮರ್ಥ್ಯವನ್ನು ಸೂಕ್ತವಾಗಿ ಮೌಲ್ಯಮಾಪನ ಮಾಡಿರಲಿಲ್ಲ ಮತ್ತು ಬಿಡ್‌ದಾರರ ಸ್ವಯಂ ಘೋಷಣೆಯ ಮೇಲೆ ಕಾಮಗಾರಿಗಳನ್ನು ವಹಿಸಲಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತತ್ಪರಿಣಾಮವಾಗಿ, ಗುತ್ತಿಗೆದಾರರು ಅರ್ಹತೆ ಹೊಂದಿರದಿದ್ದರೂ ಸಹ ಹೆಚ್ಚಿನ ಮೌಲ್ಯದ ಗುತ್ತಿಗೆಗಳನ್ನು ವಹಿಸಲಾಯಿತು.

ತುಮಕೂರು ವಿಭಾಗದಲ್ಲಿ 1ನೇ ವರ್ಗದ ಗುತ್ತಿಗೆದಾರರು ಚಾಲ್ತಿಯಲ್ಲಿರುವ ಕಾಮಗಾರಿಗಳ (ಎಸ್‌ಎಚ್‌ಡಿಪಿಯಲ್ಲಿ ₹67.25 ಕೋಟಿಗೆ ಹಂತ IV – ಪ್ಯಾಕೇಜ್ ಸಂಖ್ಯೆ 265, 280 ಮತ್ತು 312) ಮಾಹಿತಿಯನ್ನು ಮರೆಮಾಚಿ, ಅವರು ಭಾಗವಹಿಸಲು ಅರ್ಹರಾಗಿರದ ₹5.59 ಕೋಟಿ ವೆಚ್ಚದ ಮತ್ತೊಂದು ಕಾಮಗಾರಿಯನ್ನು (ಡಬ್ಲ್ಯುಐ ನಂ. 115941) ಪಡೆಯುವಲ್ಲಿ ಯಶಸ್ವಿಯಾಗಿದ್ದರು, ಅಲ್ಲದೆ, ಎಸ್‌ಎಚ್‌ಡಿಪಿಯ ಹಂತ–IVರಡಿಯಲ್ಲಿ ಗುತ್ತಿಗೆದಾರರು ಈ ಹಿಂದೆ ಕೈಗೆತ್ತಿಕೊಂಡ ಕಾಮಗಾರಿಗಳು ಎಂಟು ತಿಂಗಳು ಕಳೆದರೂ ಪೂರ್ಣಗೊಂಡಿರಲಿಲ್ಲ.

---

[10] ಮೌಲ್ಯಮಾಪನ ಮಾಡಲಾದ ಬಿಡ್ ಸಾಮರ್ಥ್ಯ = ಎ * ಎನ್ * 1.5 – ಬಿ, ಇಲ್ಲಿ ಎ ಎಂಬುದು ಕಳೆದ ಐದು ವರ್ಷಗಳಲ್ಲಿ ಯಾವುದೇ ಒಂದು ವರ್ಷದಲ್ಲಿ ಕಾರ್ಯಗತಗೊಳಿಸಿದ ಸಿವಿಲ್ ಎಂಜಿನಿಯರಿಂಗ್ ಕಾಮಗಾರಿಗಳ ಗರಿಷ್ಠ ಮೌಲ್ಯ, ಎನ್ ಎಂಬುದು ಕಾಮಗಾರಿಗಳನ್ನು ಪೂರ್ಣಗೊಳಿಸಲು ಸೂಚಿಸಲಾದ ವರ್ಷಗಳ ಸಂಖ್ಯೆ (ಆರು ತಿಂಗಳವರೆಗೆ ಅವಧಿಯವರೆಗೆ ಅರ್ಧ ವರ್ಷ ಮತ್ತು ಆರು ತಿಂಗಳಿಗಿಂತ ಹೆಚ್ಚು ಒಂದು ವರ್ಷ ಎಂದು ತೆಗೆದುಕೊಳ್ಳಲಾಗುತ್ತದೆ), ಮತ್ತು ಬಿ ಎಂಬುದು ಪ್ರಸ್ತುತ ಬೆಲೆ ಮಟ್ಟದಲ್ಲಿ ಅಸ್ತಿತ್ವದಲ್ಲಿರುವ ಬದ್ಧತೆಗಳ ಮೌಲ್ಯವಾಗಿದೆ.

ಈ ವಿಷಯವನ್ನು ಸರ್ಕಾರಕ್ಕೆ ತಿಳಿಸಿದ ನಂತರ ಅಗತ್ಯವಿರುವ ಕ್ರಮಗಳನ್ನು ತೆಗೆದುಕೊಳ್ಳುವುದಾಗಿ ಸರ್ಕಾರವು ತಿಳಿಸಿತು (ಆಗಸ್ಟ್ 2022).

4.2.7 ಕರಡು ಟೆಂಡರ್ ದಾಖಲೆಗಳ ತಯಾರಿಕೆಯಲ್ಲಿ ವ್ಯತ್ಯಾಸಗಳು

ಎಸ್‌ಟಿಡಿಯ ಷರತ್ತು–3 ರ ಪ್ರಕಾರ, ಗುತ್ತಿಗೆಯನ್ನು ಪಡೆಯುವುದಕ್ಕೆ ಅರ್ಹತೆ ಪಡೆಯಲು, ಅವರ ಹೆಸರಿನಲ್ಲಿ ಪ್ರತಿ ಟೆಂಡರ್‌ದಾರರು ಕಳೆದ ಐದು ಹಣಕಾಸು ವರ್ಷಗಳಲ್ಲಿ ಕನಿಷ್ಠ ಎರಡು ಹಣಕಾಸು ವರ್ಷಗಳಲ್ಲಿ ಒಪ್ಪಂದದ[11] ಅಡಿಯಲ್ಲಿನ ಅಂದಾಜು ವಾರ್ಷಿಕ ಪಾವತಿಯ ಎರಡು ಪಟ್ಟು ವಹಿವಾಟನ್ನು ಸಾಧಿಸಿರಬೇಕು.

ಅಲ್ಲದೆ, ಗುತ್ತಿಗೆದಾರನು ಮೂರು ತಿಂಗಳ ಗರಿಷ್ಠ ನಿರ್ಮಾಣ ಅವಧಿಯಲ್ಲಿ[12] ಅಂದಾಜು ನಗದು ಹರಿವುಗಿಂತ ಕಡಿಮೆಯಿಲ್ಲದ ಪ್ರಸ್ತುತ ಆಸ್ತಿಗಳು/ಕ್ರೆಡಿಟ್ ಸೌಲಭ್ಯಗಳ ಲಭ್ಯತೆಯನ್ನು ಪ್ರದರ್ಶಿಸಬೇಕು.

ಈ ವಿಷಯದಲ್ಲಿ, ಕೋಷ್ಟಕ–4.3ರಲ್ಲಿ ತೋರಿಸಿರುವಂತೆ, ಕೆಳಗಿನ ಅಂಶಗಳನ್ನು ಗಮನಿಸಲಾಯಿತು.

ಕೋಷ್ಟಕ–4.3: ಕರಡು ಟೆಂಡರ್ ದಾಖಲೆಗಳನ್ನು ತಯಾರಿಸುವಲ್ಲಿ ವ್ಯತ್ಯಾಸಗಳು

ಕ್ರಮ ಸಂಖ್ಯೆ	ಪ್ರಕರಣಗಳ ಸಂಖ್ಯೆ	ಟೆಂಡರ್ ಮಾಡಿದ ಮೊತ್ತ	ಗಮನಿಸಿದ ಅಂಶಗಳು	ವ್ಯತ್ಯಾಸದ ಪರಿಣಾಮ
1.	199	₹1027.60 ಕೋಟಿ	ಡಿಟಿಪಿ ಪ್ರಕಾರ ಗುತ್ತಿಗೆದಾರರು ಪ್ರದರ್ಶಿಸಬೇಕಾದ ವಹಿವಾಟು ₹2352.42 ಕೋಟಿಗಳಷ್ಟು ಕಡಿಮೆಯಾಗಿತ್ತು	ಅನರ್ಹ ಗುತ್ತಿಗೆದಾರರನ್ನು ಭಾಗವಹಿಸಲು ಅನುಮತಿಸಲಾಯಿತು
2.	3	₹40.74 ಕೋಟಿ	ಬಿಡ್ ಡಾಕ್ಯುಮೆಂಟ್‌ನಲ್ಲಿ ಅಗತ್ಯವಿರುವ ವಹಿವಾಟು ಎಸ್‌ಟಿಡಿಗಿಂತ ₹24.11 ಕೋಟಿಗಳಷ್ಟು ಅಧಿಕವಾಗಿದೆ.	ಈ ನಿರ್ಬಂಧಿತ ತಾಂತ್ರಿಕ ಮಾನದಂಡವು ಬೃಹತ್ ಗುತ್ತಿಗೆದಾರರ ಪರವಾಗಿ ಸ್ಪರ್ಧೆಯನ್ನು ಸೀಮಿತಗೊಳಿಸಿತು.
3.	125	₹590.21 ಕೋಟಿ	ನಿಗದಿಪಡಿಸಿದ್ದ ಎಲ್‌ಒಸಿ ಎಸ್‌ಟಿಡಿಗಿಂತ ₹163.30 ಕೋಟಿ ಅಧಿಕವಾಗಿದ್ದಿತು.	
4.	28	₹262.70 ಕೋಟಿ	ಡಿಟಿಪಿ ಪ್ರಕಾರ ಗುತ್ತಿಗೆದಾರರು ಪ್ರದರ್ಶಿಸಬೇಕಾದ ಎಲ್‌ಒಸಿ ₹11.76 ಕೋಟಿ ಕಡಿಮೆಯಾಗಿತ್ತು	ಅನರ್ಹ ಗುತ್ತಿಗೆದಾರರಿಗೆ ಭಾಗವಹಿಸಲು ಅನುಮತಿ ದೊರೆತಂತಾಯಿತು ಮತ್ತು ಕಡಿಮೆ ಪ್ರಸ್ತುತ ಆಸ್ತಿ ಹೊಂದಿರುವ ಗುತ್ತಿಗೆದಾರರಿಗೆ ಕಾಮಗಾರಿ ವಹಿಸುವುದನ್ನು ತಳ್ಳಿಹಾಕಲಾಗುವುದಿಲ್ಲ.

ಉತ್ತರ ಮತ್ತು ಈಶಾನ್ಯ ವಲಯದಲ್ಲಿ ಪರೀಕ್ಷಾ–ತನಿಖೆ ನಡೆಸಲಾದ ವಿಭಾಗಗಳಲ್ಲಿ ಟೆಂಡರ್‌ದಾರರಿಗೆ ನಿಗದಿಪಡಿಸಿದ ಅರ್ಹತೆ ಸರಿಯಾಗಿತ್ತು ಎಂಬುದು ಬಿಡ್ ದಾಖಲೆಗಳ ಪರಿಶೀಲನೆಯಿಂದ ಕಂಡುಬಂದಿತು ಎಂಬುದನ್ನು ತಿಳಿಸುವುದು ಇಲ್ಲಿ ಸೂಕ್ತವಾಗುತ್ತದೆ.

[11] ಉದಾಹರಣೆಗೆ, ಟೆಂಡರ್ ಮಾಡಲಾದ ಮೊತ್ತವು ₹500 ಲಕ್ಷ ಮತ್ತು ನಿಗದಿತ ಪೂರ್ಣಗೊಳಿಸುವ ಅವಧಿ ಒಂಬತ್ತು ತಿಂಗಳುಗಳು ಇದ್ದರೆ ಅಗತ್ಯವಿರುವ ವಹಿವಾಟು = ₹500/9*12*2 = ₹1333.33 ಲಕ್ಷ.

[12] ಉದಾಹರಣೆಗೆ, ಟೆಂಡರ್ ಮಾಡಲಾದ ಮೊತ್ತವು ₹500 ಲಕ್ಷ ಮತ್ತು ನಿಗದಿತ ಮುಕ್ತಾಯದ ಅವಧಿ ಒಂಬತ್ತು ತಿಂಗಳುಗಳು ಇದ್ದರೆ ಅಗತ್ಯವಿರುವ ಎಲ್‌ಒಸಿ = ₹500/9*3 = ₹166.67 ಲಕ್ಷ.

4.2.8 ತಾಂತ್ರಿಕ ಮತ್ತು ನಿರ್ವಹಣಾ ಸಿಬ್ಬಂದಿಯ ನಿಯೋಜನೆ

ಐಟಿಬಿಯ ಅನುಬಂಧದಲ್ಲಿ ವಿವರಿಸಿದಂತೆ ಟೆಂಡರ್‌ದಾರರೊಂದಿಗೆ ಖಾಯಂ ಉದ್ಯೋಗದಲ್ಲಿರುವ ಪ್ರಮುಖ ತಾಂತ್ರಿಕ ಮತ್ತು ನಿರ್ವಹಣಾ ಸಿಬ್ಬಂದಿಯ ಅರ್ಹತೆ ಮತ್ತು ಅನುಭವವನ್ನು ಪ್ರತಿ ಬಿಡ್‌ದಾರರು ಪ್ರದರ್ಶಿಸಬೇಕು ಎಂದು ಎಸ್‌ಟಿಡಿ ನಿಗದಿಪಡಿಸುತ್ತದೆ. ಪರೀಕ್ಷಾ–ತನಿಖೆ ನಡೆಸಿದ 499 ಕಾಮಗಾರಿಗಳಲ್ಲಿ 435ರಲ್ಲಿ ತಾಂತ್ರಿಕ ಮತ್ತು ನಿರ್ವಹಣಾ ಸಿಬ್ಬಂದಿಯನ್ನು ಹೊಂದಿರುವ ಪುರಾವೆಗಳನ್ನು ಬಿಡ್‌ದಾರರು ಒದಗಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ವಿವರಗಳನ್ನು ಒದಗಿಸಲಾದ ಉಳಿದ 64 ಕಾಮಗಾರಿಗಳಲ್ಲಿ 40 ಎಸ್‌ಎಚ್‌ಡಿಪಿ ಪ್ಯಾಕೇಜ್‌ಗಳಿಗೆ ಮತ್ತು 24 ಕಾಮಗಾರಿಗಳು ಧಾರವಾಡದ ಪಿಡಬ್ಲ್ಯೂಡಿ ವಿಭಾಗಕ್ಕೆ ಸಂಬಂಧಿಸಿದ್ದವು. ಹೀಗೆ, ಪರೀಕ್ಷಾ–ತನಿಖೆ ನಡೆಸಿದ 19 ವಿಭಾಗಗಳ ಇಇಗಳು ಎಸ್‌ಟಿಡಿಯ ನಿಬಂಧನೆಗಳನ್ನು ಖಚಿತಪಡಿಸಿಕೊಳ್ಳಲು ವಿಫಲರಾಗಿದ್ದು ಬಿಡ್‌ದಾರರಿ ತಪ್ಪು ಮಾಹಿತಿಯನ್ನು ಒದಗಿಸುವಲ್ಲಿ ಪರಿಣಮಿಸಿತು.

4.2.9 ಮುಂಗಡ ಹಣ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳದಿರುವುದು

ಎಸ್‌ಟಿಡಿಯ ಅನುಚ್ಛೇದ–3.2ರ ಪ್ರಕಾರ, ಅರ್ಹತಾ ಅವಶ್ಯಕತೆಗಳ ಪುರಾವೆಯಾಗಿ ಸಲ್ಲಿಸಿದ ನಮೂನೆಗಳು, ತ:ಖ್ತೆಗಳು ಮತ್ತು ದಾಖಲೆಗಳಲ್ಲಿ ತಪ್ಪು ಮಾಹಿತಿಯನ್ನು ನೀಡಿದ್ದರೆ ಟೆಂಡರ್‌ದಾರರು ಅನರ್ಹರಾಗುತ್ತಾರೆ.

ಟೆಂಡರ್ ಮೌಲ್ಯಮಾಪನದ ಲೆಕ್ಕಪರಿಶೋಧನಾ ಪರಿಶೀಲನೆಯು **ಕೋಷ್ಟಕ–4.4**ರಲ್ಲಿ ವಿವರಿಸಿದಂತೆ ನಾಲ್ಕು ವಿಭಾಗಗಳಲ್ಲಿ ಈ ಕೆಳಗಿನ ವ್ಯತ್ಯಾಸಗಳನ್ನು ತಿಳಿಯಪಡಿಸಿತು:

ಕೋಷ್ಟಕ–4.4: ಮುಂಗಡ ಹಣ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳದಿರುವುದು

(₹ ಕೋಟಿಗಳಲ್ಲಿ)

ಕ್ರಮ ಸಂಖ್ಯೆ	ಕಾಮಗಾರಿ ವಿಭಾಗಗಳ ಸಂಖ್ಯೆ	ಎಪಿಟಿ	ಗಮನಿಸಿದ ಉಲ್ಲಂಘನೆಗಳ ಸ್ವರೂಪ	ಇಲಾಖೆಯು ತೆಗೆದುಕೊಂಡ ಕ್ರಮ	ಲೆಕ್ಕಪರಿಶೋಧನಾ ವೀಕ್ಷಣೆ	ಇಎಮ್‌ಡಿ ಮೊತ್ತ
1.	2: ಎಸ್‌ಹೆಚ್‌ಡಿಪಿ 2: ಚಿಕ್ಕಮಗಳೂರು	75.07	ನಕಲಿ ಕಾಮಗಾರಿ ನಿರ್ವಹಿಸಿದ ಪ್ರಮಾಣ ಪತ್ರಗಳನ್ನು ಸಲ್ಲಿಸಿದ್ದರು	ತಾಂತ್ರಿಕ ಬಿಡ್‌ಗಳನ್ನು ತಿರಸ್ಕರಿಸಲಾಗಿತ್ತು, ಮತ್ತು ಯಾವುದೇ ದಂಡನಾತ್ಮಕ ಕ್ರಮವನ್ನು ತೆಗೆದುಕೊಳ್ಳಲಾಗಿಲ್ಲ.	ಟೆಂಡರ್‌ದಾರರಿಗೆ ಒಂದು ವರ್ಷದ ಅವಧಿಗೆ ನಿರ್ಬಂಧಿಸಿರಲಿಲ್ಲ ಅಥವಾ ಪರವಾನಗಿ ಪ್ರಾಧಿಕಾರದ ಗಮನಕ್ಕೆ ತಂದಿರಲಿಲ್ಲ. ಒಬ್ಬ ಬಿಡ್‌ದಾರರು ನಂತರ ಎಸ್‌ಹೆಚ್‌ಡಿಪಿಯ IV ಹಂತದಡಿಯಲ್ಲಿ ₹61.44 ಕೋಟಿ ವೆಚ್ಚದ ಮೂರು ಗುತ್ತಿಗೆಗಳನ್ನು ಪಡೆದಿದ್ದರು.	0.150
2.	3: ಧಾರವಾಡ	3.90	ನಕಲಿ ವಹಿವಾಟು ಪ್ರಮಾಣಪತ್ರ ಸಲ್ಲಿಸಿದ್ದರು	ಗುತ್ತಿಗೆದಾರರನ್ನು ಒಂದು ವರ್ಷ ನಿರ್ಬಂಧಿಸಲಾಗಿದೆ	ಪರವಾನಗಿ ಪ್ರಾಧಿಕಾರದ ಗಮನಕ್ಕೆ ತಂದಿರಲಿಲ್ಲ	0.046
3.	8: ಸಿಸಿ	6.84	ಎಲ್‌ಒಸಿಗಳು ನಕಲಿಯಾಗಿದ್ದವು ಅಥವಾ ಟೆಂಡರ್‌ದಾರರ ಕೋರಿಕೆಯಂತೆ ಬ್ಯಾಂಕ್‌ಗಳಿಂದ ದೃಢೀಕರಿಸಲ್ಪಟ್ಟಿರಲಿಲ್ಲ	ತಾಂತ್ರಿಕ ಬಿಡ್‌ಗಳನ್ನು ತಿರಸ್ಕರಿಸಲಾಯಿತು	ಇಎಮ್‌ಡಿಯನ್ನು ಮುಟ್ಟುಗೋಲು ಹಾಕಿಕೊಂಡಿಲ್ಲ.	0.156
ಒಟ್ಟು	**15**	**85.81**				**0.352**

ವಿವರಗಳನ್ನು **ಅನುಬಂಧ–4.10** ರಲ್ಲಿ ನೀಡಲಾಗಿದೆ.

ಹೀಗೆ, ಮೇಲಿನ ಕ್ರಮಸಂಖ್ಯೆ–3ರಲ್ಲಿ ನಮೂದಿಸಲಾದ 8 ಕಾಮಗಾರಿಗಳಿಗೆ ಸಂಬಂಧಿಸಿದ ₹0.16 ಕೋಟಿಯ ಇಎಮ್‌ಡಿ ಮೊತ್ತವನ್ನು ಸರ್ಕಾರದ ಆದಾಯವಾಗಿ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿದ್ದು ಅದನ್ನು ತಪ್ಪಾಗಿ ಮರುಪಾವತಿ ಮಾಡಲಾಗಿದೆ.

ಶಿಫಾರಸು–8: ಎಲ್ಲಾ ವಿಧದ ದುಷ್ಕೃತ್ಯಗಳಲ್ಲಿ ಭಾಗಿಯಾಗಿರುವ ಟೆಂಡರ್‌ದಾರರನ್ನು ಕಪ್ಪುಪಟ್ಟಿಗೆ ಸೇರಿಸಲು ಮತ್ತು ಇಎಮ್‌ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲು ಅಗತ್ಯವಾದ ನಿಬಂಧನೆಯನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು.

4.2.10 ಮ್ಯಾನುಯಲ್ ಪರಿಶೀಲನೆ

ನ್ಯಾಯಯುತ ಮತ್ತು ಪಾರದರ್ಶಕ ಹರಾಜು ಪ್ರಕ್ರಿಯೆಯನ್ನು ಖಚಿತಪಡಿಸಿಕೊಳ್ಳಲು, ಸರ್ಕಾರವು ಏಪ್ರಿಲ್ 2008ರಿಂದ ₹50 ಲಕ್ಷಕ್ಕಿಂತ ಹೆಚ್ಚು ವೆಚ್ಚದ (03.12.2012ರಿಂದ ₹5 ಲಕ್ಷಕ್ಕೆ ಪರಿಷ್ಕರಿಸಲ್ಪಟ್ಟಿತು) ಕಾಮಗಾರಿಗಳ ಟೆಂಡರ್‌ಗಳನ್ನು ಇ–ಟೆಂಡರ್ ಮೂಲಕ ಮಾತ್ರ ಸ್ವೀಕರಿಸಲು ನಿರ್ಧರಿಸಿತು (2008).

₹5 ಲಕ್ಷಕ್ಕಿಂತ ಹೆಚ್ಚು ವೆಚ್ಚದ ಕಾಮಗಾರಿಗಳಿಗೆ ಇ–ಟೆಂಡರಿಂಗ್‌ಅನ್ನು ಅಳವಡಿಸಿಕೊಂಡಾಗ, ಭದ್ರತಾ ಠೇವಣಿ, ವಹಿವಾಟು ಪ್ರಮಾಣಪತ್ರ, ಕಾಮಗಾರಿ ಪೂರ್ಣಗೊಳಿಕೆ ಪ್ರಮಾಣಪತ್ರಗಳು ಇತ್ಯಾದಿಗಳಿಗೆ ಸಂಬಂಧಿಸಿದ ಕಾಗದಗಳನ್ನು ಭೌತಿಕವಾಗಿ ಪರಿಶೀಲಿಸುವ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವ ಮೂಲಕ ಇಲಾಖೆಯು ಪ್ರಕ್ರಿಯೆಯಲ್ಲಿ ಪಾರದರ್ಶಕತೆಯನ್ನು ಸೀಮಿತಗೊಳಿಸಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು. ಇ–ಟೆಂಡರ್ ಮೂಲಕ ಕಾಮಗಾರಿಗಳಲ್ಲಿ ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳುವ ಗುರಿಯನ್ನು ಸಾಧಿಸಲಾಗಲಿಲ್ಲ.

ಮೌಲ್ಯಮಾಪನ ಮತ್ತು ಪರಿಶೀಲನೆಯ ಪ್ರಕ್ರಿಯೆಯು ಗೌಪ್ಯವಾಗಿರಬೇಕಿದ್ದರಿಂದ ಅಂತಹ ಮೌಲ್ಯಮಾಪನದ ವಿವರಗಳನ್ನು ಈ–ಖರೀದಿ ಪೋರ್ಟಲ್‌ನಲ್ಲಿ ಲಭ್ಯಗೊಳಿಸಲಿಲ್ಲ ಎಂದು ಸರ್ಕಾರವು ತಿಳಿಸಿತು (ಆಗಸ್ಟ್ 2022). ಆದರೂ ಲೆಕ್ಕಪರಿಶೋಧನಾ ವೀಕ್ಷಣೆಯನ್ನು ಪರಿಗಣಿಸಲು ಸರ್ಕಾರವು ಒಪ್ಪಿಕೊಂಡಿತು.

4.3 ಗುತ್ತಿಗೆಯನ್ನು ವಹಿಸುವಲ್ಲಿ ನ್ಯೂನತೆಗಳು

ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನೊಂದಿಗೆ ಕೆಟಿಪಿಪಿ ನಿಯಮಗಳು 2000ರ ನಿಯಮ 22ರ ಪ್ರಕಾರ, ಟೆಂಡರನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಿಂದ 90 ದಿನಗಳಲ್ಲಿ ಟೆಂಡರನ್ನು ಅಂತಿಮಗೊಳಿಸಬೇಕು. ಅಲ್ಲದೆ, ಗುತ್ತಿಗೆದಾರರಿಗೆ ಗುತ್ತಿಗೆ ಒಪ್ಪಂದದ ಸ್ವೀಕಾರ ಪತ್ರವನ್ನು ನೀಡಿದ 20 ದಿನಗಳಲ್ಲಿ ಅವರು ಗುತ್ತಿಗೆ ಒಪ್ಪಂದವನ್ನು ಕಾರ್ಯಗತಗೊಳಿಸಬೇಕು, ಇಲ್ಲದಿದ್ದರೆ ಟೆಂಡರನ್ನು ರದ್ದುಗೊಳಿಸಲಾಗುತ್ತದೆ ಮತ್ತು ಭದ್ರತೆಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.

4.3.1 ಗುತ್ತಿಗೆಯನ್ನು ಅಂತಿಮಗೊಳಿಸುವಲ್ಲಿ ವಿಳಂಬಗಳು

2016–21ರಲ್ಲಿ ಅಂತಿಮಗೊಳಿಸಲಾದ 499ರಲ್ಲಿ 279 ಗುತ್ತಿಗೆಗಳಲ್ಲಿ ಕೆಳಗಿನ **ಕೋಷ್ಟಕ–4.5**ರಲ್ಲಿ ತೋರಿಸಿರುವಂತೆ, **ಅನುಬಂಧ–4.11** ರಲ್ಲಿ ವಿವರಿಸಿದ ಪ್ರಕರಣಗಳಿಗೆ ಸಂಬಂಧಿಸಿದಂತೆ, ಟೆಂಡರ್‌ಗಳನ್ನು ಅಂತಿಮಗೊಳಿಸುವಲ್ಲಿ ಅಸಾಮಾನ್ಯ ವಿಳಂಬಗಳನ್ನು ಗಮನಿಸಲಾಯಿತು:

ಕೋಷ್ಟಕ–4.5: ಟೆಂಡರ್‌ಗಳನ್ನು ಅಂತಿಮಗೊಳಿಸುವಲ್ಲಿನ ವಿಳಂಬದ ಸ್ಥಿತಿ

ವಿಳಂಬದ ವ್ಯಾಪ್ತಿ (ದಿನಗಳಲ್ಲಿ)	ಗುತ್ತಿಗೆಗಳ ಸಂಖ್ಯೆ	ಗುತ್ತಿಗೆ ಮೊತ್ತ (₹ ಕೋಟಿಗಳಲ್ಲಿ)	ಗರಿಷ್ಠ ವಿಳಂಬ (ದಿನಗಳಲ್ಲಿ)
90 ದಿನಗಳೊಳಗೆ	220	1870.87	–
91 ರಿಂದ 120	71	513.87	119
121 ರಿಂದ 180	92	471.12	180
180 ದಿನಗಳಿಗೂ ಅಧಿಕ	116	727.42	639
ಒಟ್ಟು	**499**	**3583.28**	

ಆಧಾರ: ಇಲಾಖಾ ದಾಖಲೆಗಳಿಂದ ಸಂಕಲಿಸಿದ್ದು

₹389.80 ಕೋಟಿ ವೆಚ್ಚದ 65 ಪ್ರಕರಣಗಳಲ್ಲಿ ಸ್ವೀಕೃತಿ ಪತ್ರವನ್ನು (**ಅನುಬಂಧ–4.12**) ನೀಡಿದ ನಂತರ ಕಾಮಗಾರಿಯನ್ನು ಪ್ರಾರಂಭಿಸಲು ಕಾಮಗಾರಿ ಆದೇಶವನ್ನು ನೀಡಲು ಒಂದರಿಂದ 181 ದಿನಗಳ ವ್ಯಾಪ್ತಿಯ ವಿಳಂಬವಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಹೀಗೆ, ಇಲಾಖೆಯು (20 ಪರೀಕ್ಷಾ–ತನಿಖೆ ನಡೆಸಿದ ಪಿಡಬ್ಲ್ಯೂಡಿ ವಿಭಾಗಗಳು ಮತ್ತು ಎಸ್ಎಚ್ಡಿಪಿ) ಕೆಟಿಪಿಪಿ ನಿಯಮಗಳಲ್ಲಿ ಒಳಗೊಂಡಿರುವ ಸೂಚನೆಗಳನ್ನು ಅನುಸರಿಸಲು ವಿಫಲವಾಗಿತ್ತು ಮತ್ತು ಟೆಂಡರ್ಗಳನ್ನು ಅಂತಿಮಗೊಳಿಸುವಲ್ಲಿ 639 ದಿನಗಳವರೆಗಿನ ವಿಳಂಬವಾಗಿ ಅದು ಅಂತಿಮವಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬಕ್ಕೆ ಕಾರಣವಾಯಿತು.

ಟೆಂಡರ್ಗಳ ಅಂತಿಮಗೊಳಿಸುವಿಕೆ ಮತ್ತು ಗುತ್ತಿಗೆದಾರರಿಗೆ ಕಾಮಗಾರಿಗಳನ್ನು ವಹಿಸುವುದರಲ್ಲಿನ ಇಂತಹ ಅಸಾಮಾನ್ಯ ವಿಳಂಬಗಳು ಬಿಡ್ಗಳ ಮೌಲ್ಯಮಾಪನ ಮತ್ತು ಒಪ್ಪಂದದ ಪ್ರದಾನ ಪ್ರಕ್ರಿಯೆಯಲ್ಲಿ ಕೈಚಳಕದ ಅಪಾಯವನ್ನು ಹೆಚ್ಚಿಸಬಹುದು. ಒಂದೆಡೆ, ತುರ್ತು ಸ್ಥಿತಿಯನ್ನು ಉಲ್ಲೇಖಿಸಿ ಅಲ್ಪಾವಧಿಯ ಟೆಂಡರ್ಗಳನ್ನು ಆಹ್ವಾನಿಸಿದರೆ ಇನ್ನೊಂದೆಡೆ ಟೆಂಡರ್ಗಳನ್ನು ಅಂತಿಮಗೊಳಿಸಲು ಇಲಾಖೆಯು ಅಧಿಕ ಸಮಯ ತೆಗೆದುಕೊಂಡಿತು. ಅಲ್ಲದೆ, ಕೆಲವು ಸಂದರ್ಭಗಳಲ್ಲಿ ದರಪಟ್ಟಿಗಳ ಪರಿಷ್ಕರಣೆಯ ಹೊರತಾಗಿಯೂ, ಉಲ್ಲೇಖಿಸಿದ ಹಳೆಯ ದರಗಳ ಮೇಲೆ ಗುತ್ತಿಗೆದಾರರು ವಿಳಂಬಿತ ಕಾಮಗಾರಿಗಳನ್ನು ಕಾರ್ಯಗತಗೊಳಿಸುವುದು, ವಿಭಾಗಗಳು ಗಣನೀಯವಾಗಿ ಹೆಚ್ಚಿಸಿದ ಅಂದಾಜುಗಳನ್ನು ತಯಾರಿಸಿರಬಹುದು ಅಥವಾ ಗುತ್ತಿಗೆದಾರರು ಕಳಪೆ–ಗುಣಮಟ್ಟದ ಕಾಮಗಾರಿಗಳನ್ನು ನಿರ್ವಹಿಸುತ್ತಿದ್ದಾರೆ ಎಂಬುದನ್ನು ಸೂಚಿಸುತ್ತದೆ.

ಟೆಂಡರ್ಗಳನ್ನು ಅಂತಿಮಗೊಳಿಸುವಲ್ಲಿ ಗಣನೀಯ ವಿಳಂಬಕ್ಕೆ ಲಗತ್ತಿಸಲಾದ ಟೆಂಡರ್ ದಾಖಲೆಗಳ ಕೂಲಂಕುಶ ಪರಿಶೀಲನೆಯೇ ಪ್ರಮುಖ ಕಾರಣವಾಗಿತ್ತು ಎಂದು ಸರ್ಕಾರವು ತಿಳಿಸಿತು (ಆಗಸ್ಟ್ 2022). 11.05.2022ರ ಸುತ್ತೋಲೆಯ ಮೂಲಕ ಟೆಂಡರ್ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಲು ಹಣಕಾಸು ಇಲಾಖೆಯು ನಿಖರವಾದ ಸಮಯಾವಧಿಯನ್ನು ನಿಗದಿಪಡಿಸಿದೆ ಮತ್ತು ಭವಿಷ್ಯದಲ್ಲಿ ಅದನ್ನು ಅನುಸರಿಸಲಾಗುವುದು ಎಂದೂ ಕೂಡ ತಿಳಿಸಲಾಯಿತು.

ಕೇಸ್ ಸ್ಟಡಿ–4.2

ತುಮಕೂರು ಪಿಡಬ್ಲ್ಯೂಡಿ ವಿಭಾಗ ಕಾರ್ಯನಿರ್ವಾಹಕ ಇಂಜಿನಿಯರ್ರವರು ಡಬ್ಲ್ಯು.ಐ.ನಂ.67898 ಅಡಿಯಲ್ಲಿ ₹8.50 ಕೋಟಿ ವೆಚ್ಚದಲ್ಲಿ "ಆರು ಎಮ್ಡಿಆರ್ಗಳಿಗೆ ಸುಧಾರಣೆ" ಕಾಮಗಾರಿಗೆ ಬಿಡ್ಗಳನ್ನು ಆಹ್ವಾನಿಸಿದರು (07.08.2017). ಟೆಂಡರ್ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 13.09.2017 ಆಗಿತ್ತು. ಮೂರು[13] ಬಿಡ್ಗಳನ್ನು ಸ್ವೀಕರಿಸಲಾಯಿತು. ಈ ಮಧ್ಯೆ, ಬಿಡ್ದಾರರದಲ್ಲಿ ಒಬ್ಬರು ವಿವಿಧ ಕಾಮಗಾರಿಗಳಿಗೆ ಎರಡು ವಿಭಿನ್ನ ವಹಿವಾಟು ಪ್ರಮಾಣಪತ್ರಗಳನ್ನು ಸಲ್ಲಿಸಿರುವ ಬಗ್ಗೆ ವೃತ್ತಕಛೇರಿಯಲ್ಲಿ ದೂರು ಸ್ವೀಕರಿಸಲಾಯಿತು (20.09.17) ಮತ್ತು ಹಾಗಾಗಿ ಆ ಗುತ್ತಿಗೆದಾರರ ತಾಂತ್ರಿಕ ಬಿಡ್ಅನ್ನು ತಿರಸ್ಕರಿಸಲಾಯಿತು (19.10.17).

ಹಾನಿಗೊಳಗಾದ ಬಿಡ್ದಾರರು[14] ಕರ್ನಾಟಕದ ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿದರು (ಅಕ್ಟೋಬರ್ 2017). ಆದಾಗ್ಯೂ, ಅವರ ಹಣಕಾಸಿನ ಬಿಡ್ಅನ್ನು ಪರಿಗಣಿಸಲು ಸರ್ಕಾರವು ಒಪ್ಪಿಗೆ ನೀಡಿದ್ದರಿಂದ ಗುತ್ತಿಗೆದಾರರು ಆಗಸ್ಟ್ 2018ರಲ್ಲಿ ರಿಟ್ ಅರ್ಜಿಯನ್ನು ಹಿಂತೆಗೆದುಕೊಂಡರು. ಮಾನ್ಯತೆಯ ಅವಧಿಯನ್ನು ಮೀರಿ ಟೆಂಡರ್ಅನ್ನು ಸ್ವೀಕರಿಸುವಲ್ಲಿ ಸಾಕಷ್ಟು ವಿಳಂಬವಾದ ಕಾರಣ, ಮಾನ್ಯತೆಯ ಅವಧಿಯನ್ನು ವಿಸ್ತರಿಸಲು ಕಾರ್ಯನಿರ್ವಾಹಕ ಇಂಜಿನಿಯರ್ರವರು ಫೆಬ್ರವರಿ 2019ರಲ್ಲಿ ಸಮ್ಮತಿಯನ್ನು ಕೋರಿದರು. ಶ್ರೀ ಸಿಹೆಚ್ವಿಎನ್ ರೆಡ್ಡಿಯವರನ್ನು ಹೊರತುಪಡಿಸಿ ಇತರ ಇಬ್ಬರು ಗುತ್ತಿಗೆದಾರರು ತಮ್ಮ ಬಿಡ್ ಮಾನ್ಯತೆಯ ಅವಧಿಯನ್ನು ವಿಸ್ತರಿಸಲು

[13] ಸಿಹೆಚ್ವಿಎನ್ ರೆಡ್ಡಿ, ಶ್ರೀ ಹೆಚ್ ಎನ್ ರಾಮೇಗೌಡ ಮತ್ತು ಮೆ.ರಾಯೇಗೌಡ ಕನ್ಸ್ಟ್ರಕ್ಷನ್ ಕಂಪನಿ.

[14] ಸಿಹೆಚ್ವಿಎನ್ ರೆಡ್ಡಿ

ಒಪ್ಪಲಿಲ್ಲ. ಹೀಗಾಗಿ, ವಿಭಾಗವು ಕೆಟಿಪಿಪಿ ನಿಯಮಗಳ ನಿಯಮ 27(2) ರಡಿಯಲ್ಲಿ ಅವರ ಬಿಡ್‌ಗಳನ್ನು ಪ್ರತಿಕ್ರಿಯಿಸದಿರುವ ಬಿಡ್‌ಗಳು ಎಂದು ತಿರಸ್ಕರಿಸಬೇಕು ಮತ್ತು ಶ್ರೀ ಸಿಹೆಚ್‌ವಿಎನ್ ರೆಡ್ಡಿ ಅವರ ಬಿಡ್ ಅನ್ನು ಮಾತ್ರ ಸಿಇರವರ ಅನುಮೋದನೆಗಾಗಿ ರವಾನಿಸಬೇಕು. ಆದರೂ, ವಿಭಾಗವು ಎಲ್ಲಾ ಮೂರು ತಾಂತ್ರಿಕ ಬಿಡ್‌ಗಳನ್ನು ಅರ್ಹ ಬಿಡ್‌ಗಳಾಗಿ ಮರುಸಲ್ಲಿಸಿತು (01.01.2019) ಮತ್ತು ಹಣಕಾಸು ಬಿಡ್‌ಗಳನ್ನು ತೆರೆಯಿತು (23.02.19).

ತತ್ಪರಿಣಾಮವಾಗಿ, ಇನ್ನೆರಡು ಬಿಡ್ದಾರರು ಎಲ್1 ಮತ್ತು ಎಲ್2 ಬಿಡ್‌ದಾರರಾದರು ಮತ್ತು ಶ್ರೀ.ಸಿಹೆಚ್‌ವಿಎನ್ ರೆಡ್ಡಿಯವರು ಅವರ ₹8.51 ಕೋಟಿ ಬೆಲೆಗಾಗಿ ಎಲ್3 ಆದರು ಎಂದು ವರದಿ ಮಾಡಲಾಯಿತು. ಮಾನ್ಯತೆಯ ಅವಧಿಯನ್ನು ವಿಸ್ತರಿಸಲು ಎಲ್1 ಮತ್ತು ಎಲ್2 ಒಪ್ಪಿಗೆ ನೀಡದ ಕಾರಣ ಅವರ ಹಣಕಾಸಿನ ಬಿಡ್‌ಗಳನ್ನು ತಿರಸ್ಕರಿಸಲಾಯಿತು ಮತ್ತು ಶ್ರೀಸಿಹೆಚ್‌ವಿಎನ್ ರೆಡ್ಡಿಯವರಿಗೆ ₹7.82 ಕೋಟಿಯ ಎಲ್1 ದರದಲ್ಲಿ ಕಾಮಗಾರಿಯನ್ನು ವಹಿಸಲಾಯಿತು, ಆದರೆ ಅವರು ಅದನ್ನು ಒಪ್ಪಲಿಲ್ಲ. ಅಂತಿಮವಾಗಿ, ವಿಭಾಗವು ಬಿಡ್‌ಅನ್ನು ರದ್ದುಗೊಳಿಸಲು ಶಿಫಾರಸು ಮಾಡಿತು. ತಮ್ಮ ಬಿಡ್‌ಗಳ ಮಾನ್ಯತೆಯ ಅವಧಿಯನ್ನು ವಿಸ್ತರಿಸಲು ಗುತ್ತಿಗೆದಾರರ ಒಪ್ಪಿಗೆಯನ್ನು ಪಡೆಯಲು ವಿಭಾಗವು ವಿಫಲವಾದ ಕಾರಣಕ್ಕೆ ವಿವರಣೆಗಾಗಿ ಕೇಳಿ ಸರ್ಕಾರವು ಹೊಸ ಟೆಂಡರ್‌ಗಳನ್ನು ಆಹ್ವಾನಿಸಲು ಅನುಮೋದನೆಯನ್ನು ನೀಡಿತು (02.07.19).

ಹೊಸದಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಯಿತು (ಸೆಪ್ಟೆಂಬರ್'19) ಮತ್ತು ಮೇ 2021ರೊಳಗೆ ಪೂರ್ಣಗೊಳಿಸುವಂತೆ ನಿಗದಿಪಡಿಸಿ ₹9.90 ಕೋಟಿ ವೆಚ್ಚದಲ್ಲಿ ಮತ್ತೊಂದು ಗುತ್ತಿಗೆದಾರರಿಗೆ ಕಾಮಗಾರಿಯನ್ನು ವಹಿಸಲಾಯಿತು (ಆಗಸ್ಟ್'20).

ಇದು ರಾಜ್ಯದ ಬೊಕ್ಕಸಕ್ಕೆ ₹1.39 ಕೋಟಿ (₹9.90 ಕೋಟಿಯಿಂದ ₹8.51 ಕೋಟಿಯನ್ನು ಕಳೆಯಲಾಗಿದೆ) ಹೆಚ್ಚುವರಿ ಹೊರೆಯಾಗುವುದರಲ್ಲಿ ಪರಿಣಮಿಸಿತು ಮತ್ತು ಅದನ್ನು ತಪ್ಪಿಸಬಹುದಾಗಿತ್ತು.

4.3.2 ಕಾಮಗಾರಿಗಳ ಪೂರ್ಣಗೊಳಿಸುವ ಅವಧಿಯನ್ನು ಮನಬಂದಂತೆ ನಿರ್ಧರಿಸಿರುವುದು

ಎಮ್‌ಒಆರ್‌ಟಿಹೆಚ್ ಮಾರ್ಗಸೂಚಿಗಳು (ಇಪಿಸಿ ಪ್ರಾಜೆಕ್ಟ್‌ಗಳನ್ನು ಪೂರ್ಣಗೊಳಿಸಲು ಸಮಯ ಸೂಚಿಗಳು) ಬಲಪಡಿಸುವ ಕಾಮಗಾರಿಗಳಿಗೆ ಗರಿಷ್ಠ 12 ತಿಂಗಳವರೆಗೆ ಒಳಪಟ್ಟು ಪ್ರತಿ ಕಿಲೋಮೀಟರ್‌ಗೆ 12 ದಿನಗಳ ಕಾಲಾವಧಿಯನ್ನು ಮತ್ತು ಅಗಲೀಕರಣ ಮತ್ತು ಬಲಪಡಿಸುವ ಕಾಮಗಾರಿಗಳಿಗೆ ಗರಿಷ್ಠ 18 ತಿಂಗಳವರೆಗೆ ಒಳಪಟ್ಟು ಕಿಲೋಮೀಟರ್‌ಗೆ 20 ದಿನಗಳು ಎಂದು ನಿಗದಿಪಡಿಸಿದೆ (ಜುಲೈ 2013). ಆದರೆ, ಗುತ್ತಿಗೆದಾರರಿಂದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಮಯದ ಚೌಕಟ್ಟನ್ನು ನಿರ್ಧರಿಸಲು ಲೋಕೋಪಯೋಗಿ ಇಲಾಖೆಯಲ್ಲಿ ಯಾವುದೇ ಸೂಚನೆಗಳು ಅಥವಾ ಮಾರ್ಗಸೂಚಿಗಳು ಲಭ್ಯವಿರಲಿಲ್ಲ.

ಕಾಮಗಾರಿ ಪೂರ್ಣಗೊಳಿಸುವ ಅವಧಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಮನಬಂದಂತೆ ನಿರ್ಧರಿಸಿರುವುದನ್ನು ಗಮನಿಸಲಾಯಿತು. ಕೆಳಗಿನ **ಕೋಷ್ಟಕ–4.6ರಲ್ಲಿ** ನೀಡಲಾದ ಒಂದೇ ರೀತಿಯ ಸ್ವರೂಪ/ಕಾಮಗಾರಿಗಳ ಪ್ರಮಾಣವನ್ನು ಪೂರ್ಣಗೊಳಿಸಲು ವಿಭಿನ್ನ ಅವಧಿಯ ಚೌಕಟ್ಟನ್ನು ನಿಗದಿ ಪಡಿಸಲಾಗಿತ್ತು.

ಕೋಷ್ಟಕ–4.6: ಮನಬಂದಂತೆ ಪೂರ್ಣಗೊಳಿಸುವ ಅವಧಿಯನ್ನು ನಿರ್ಧರಿಸಿರುವುದು

ಕ್ರಮ ಸಂಖ್ಯೆ	ಮೌಲ್ಯದ ವ್ಯಾಪ್ತಿ (₹ ಕೋಟಿಗಳಲ್ಲಿ)	ಗುತ್ತಿಗೆಗಳ ಸಂಖ್ಯೆ	ಟೆಂಡರ್ ಮಾಡಿದ ಮೊತ್ತ (₹ ಕೋಟಿಗಳಲ್ಲಿ)	ಅನುಮತಿಸಿದ ಕನಿಷ್ಠ ಸಮಯ (ತಿಂಗಳುಗಳು)	ಅನುಮತಿಸಿದ ಗರಿಷ್ಠ ಸಮಯ (ತಿಂಗಳುಗಳು)
1	1 ಕ್ಕಿಂತ ಕಡಿಮೆ	30	21.42	1	9
2	1 ರಿಂದ 3	93	196.36	2	18
3	3 ರಿಂದ 5	202	831.90	1	12

4	5 ರಿಂದ 10	109	786.82	1	11
5	10 ರಿಂದ 20	30	412.91	1.5	24
6	20 ಕ್ಕಿಂತ ಹೆಚ್ಚು	35	997.74	9	24
	ಒಟ್ಟು	**499**	**3247.15**		

ಒಂದೇ ರೀತಿಯ ಸ್ವರೂಪ ಮತ್ತು ಮೌಲ್ಯದ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಅನುಮತಿಸಲಾದ ಸಮಯವು ವ್ಯಾಪಕವಾಗಿ ಬೇರೆ ಬೇರೆಯಾಗಿತ್ತು ಎಂಬುದನ್ನು ಕೋಷ್ಟಕ ಸೂಚಿಸುತ್ತದೆ.

ಎಸ್ಎಚ್ಡಿಪಿಯಲ್ಲಿಯೂ ಸಹ ₹8.01 ಕೋಟಿಯಿಂದ ₹62.55 ಕೋಟಿ ವೆಚ್ಚದ ಕಾಮಗಾರಿಗಳು ಮತ್ತು 20 ಕಿಮೀನಿಂದ 30 ಕಿಮೀ ಉದ್ದದ ಪುನರ್ ನಿರ್ಮಾಣ ಕಾಮಗಾರಿಗಳನ್ನು ಪೂರ್ಣಗೊಳಿಸಲು ಹನ್ನೊಂದು ತಿಂಗಳ ಕಾಲಾವಕಾಶ ನೀಡಿರುವುದನ್ನು ಗಮನಿಸಲಾಯಿತು.

ಅದೇ ರೀತಿ ಹಾಸನ ವಿಭಾಗದಲ್ಲಿ ಶ್ರೀರಂಗಪಟ್ಟಣದಿಂದ ಅರಸೀಕೆರೆ ರಸ್ತೆಯ ಸುಧಾರಣೆಗಾಗಿ ಎಸ್ಎಚ್–7, (ಡಬ್ಲ್ಯುಐ ನಂ.77506), 2.0 ಕಿ.ಮೀ ಉದ್ದದ ಸಿ.ಸಿ ರಸ್ತೆ ನಿರ್ಮಾಣ ಸೇರಿದಂತೆ 26.25 ಕಿ.ಮೀ ಬಲಪಡಿಸುವ ಕಾಮಗಾರಿಯನ್ನು ಪ್ರಸ್ತಾವಿಸಿದ್ದರೂ ಸಹ ಮುಕ್ತಾಯದ ಅವಧಿಯಾಗಿ ಕೇವಲ ಒಂದೂವರೆ ತಿಂಗಳುಗಳನ್ನು ಅನುಮತಿಸಲಾಗಿದೆ.

ಪೂರ್ಣಗೊಳಿಸುವ ಅವಧಿಯು ಗುತ್ತಿಗೆದಾರರ ಬಿಡ್ ಸಾಮರ್ಥ್ಯದ[15] ಲೆಕ್ಕಾಚಾರದ ಮೇಲೆ ನೇರವಾದ ಪ್ರಭಾವವನ್ನು ಹೊಂದಿರುವುದರಿಂದ, ಗುತ್ತಿಗೆದಾರರ ಬಿಡ್ ಸಾಮರ್ಥ್ಯವನ್ನು ಬದಲಾಯಿಸಲು ಪೂರ್ಣಗೊಳಿಸುವ ಅವಧಿಯನ್ನು ಮಾರ್ಪಡಿಸುವ ಮೂಲಕ ಅವರು ಅರ್ಹತೆ ಹೊಂದಿರದ ಒಪ್ಪಂದಗಳನ್ನು ಪಡೆಯಲು ಸಹಾಯ ಮಾಡುವುದನ್ನು ತಳ್ಳಿಹಾಕಲಾಗುವುದಿಲ್ಲ.

ನಿಗದಿತ ಪೂರ್ಣಗೊಳಿಸುವ ಅವಧಿಯು ಕೇವಲ ಕಾಮಗಾರಿಗಳ ವೆಚ್ಚವನ್ನು ಅವಲಂಬಿಸಿರುವುದಿಲ್ಲ ಆದರೆ ಸ್ಥಳೀಯ ಪರಿಸ್ಥಿತಿಗಳು, ಕಾಮಗಾರಿಯ ಸ್ವರೂಪ, ಕಾಮಗಾರಿಯ ತುರ್ತು ಇತ್ಯಾದಿಗಳನ್ನು ಆಧರಿಸಿರುತ್ತದೆ ಎಂದು ಸರ್ಕಾರವು ತಿಳಿಸಿತು (ಆಗಸ್ಟ್ 2022).

ಈ ಸಂಬಂಧವಾಗಿ ಎಮ್ಒಆರ್ಟಿಹೆಚ್ ಮಾರ್ಗಸೂಚಿಯೊಂದಿಗೆ ಅನುರೂಪವಾಗುವ ಸಾಮಾನ್ಯ ಮಾರ್ಗಸೂಚಿಯೊಂದನ್ನು ಇಲಾಖೆಯು ಇನ್ನೂ ರಚಿಸದಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

ಶಿಫಾರಸು–9: ಎಮ್ಒಆರ್ಟಿಹೆಚ್ ಮಾರ್ಗಸೂಚಿಗಳ ಪ್ರಕಾರ ಸಮಯಾವಧಿಯನ್ನು ನಿಗದಿಪಡಿಸಲು ಸರ್ಕಾರವು ಅಗತ್ಯ ಕ್ರಮವನ್ನು ತೆಗೆದುಕೊಳ್ಳಬೇಕು.

4.3.3 ಗುತ್ತಿಗೆದಾರರಿಂದ ವಿಮಾ ರಕ್ಷಣೆ ಒದಗಿಸದಿರುವುದು

ಗುತ್ತಿಗೆದಾರನು ತನ್ನ ವೆಚ್ಚದಲ್ಲಿ ಉದ್ಯೋಗದಾತ ಮತ್ತು ಗುತ್ತಿಗೆದಾರರ ಜಂಟಿ ಹೆಸರುಗಳಲ್ಲಿ ಪ್ರಾರಂಭ ದಿನಾಂಕದಿಂದ ಪೂರ್ಣಗೊಳ್ಳುವ ದಿನಾಂಕದವರೆಗೆ ಕಾಮಗಾರಿಯ ನಷ್ಟ ಅಥವಾ ಹಾನಿ ಮತ್ತು ವೈಯಕ್ತಿಕ ಗಾಯ ಅಥವಾ ಸಾವು. ವೈಯಕ್ತಿಕ ಹಾನಿ ಅಥವಾ ಮರಣ, ಮುಂತಾದವುಗಳಿಗೆ ವಿಮಾ ರಕ್ಷಣೆಯನ್ನು ಒದಗಿಸಬೇಕು ಎಂದು ಎಸ್ಟಿಡಿ (ಕೆಡಬ್ಲ್ಯು–4) ನಲ್ಲಿ ಸೇರಿಸಲಾದ ಒಪ್ಪಂದದ ಷರತ್ತುಗಳ 13ನೇ ಅನುಚ್ಛೇದವು ಸೂಚಿಸುತ್ತದೆ. ವೈಯಕ್ತಿಕ ಹಾನಿ ಅಥವಾ ಮರಣಗಳಿಗೆ ಪೂರ್ಣಗೊಂಡ ದಿನಾಂಕದಿಂದ ದೋಷ ಹೊಣೆಗಾರಿಕೆ ಅವಧಿಯ (ಡಿಎಲ್ಪಿ) ಅಂತ್ಯದವರೆಗೆ ವಿಮಾ ರಕ್ಷಣೆಯನ್ನು ಒದಗಿಸುವ ಅಗತ್ಯವಿದೆ. ಕಾಮಗಾರಿ ಪ್ರಾರಂಭ ದಿನಾಂಕದ ಮೊದಲು ವಿಮಾ ಪಾಲಿಸಿಗಳ ಪ್ರಮಾಣಪತ್ರವನ್ನು

[15] ಆರು ತಿಂಗಳವರೆಗೆ ಪೂರ್ಣಗೊಳ್ಳುವ ಸಮಯವನ್ನು 0.5 ಎಂದು ಪರಿಗಣಿಸಲಾಗುತ್ತದೆ ಮತ್ತು ಆರು ತಿಂಗಳಿಗಿಂತ ಹೆಚ್ಚಿನ ಸಮಯವನ್ನು ಒಂದು ಎಂದು ಪರಿಗಣಿಸಲಾಗುತ್ತದೆ.

ಕಾರ್ಯನಿರ್ವಾಹಕ ಇಂಜಿನಿಯರ್‌ಗೆ ಅನುಮೋದನೆಗಾಗಿ ತಲುಪಿಸುವ ಅಗತ್ಯವಿದೆ. ಗುತ್ತಿಗೆದಾರನು ಯಾವುದೇ ವಿಮೆಗಳನ್ನು ಜಾರಿಗೆ ತರಲು ವಿಫಲವಾದರೆ ಅಥವಾ ಜಾರಿಯಲ್ಲಿಡಲು ವಿಫಲವಾದರೆ, ಉದ್ಯೋಗದಾತನು ಅಂತಹ ಕರ್ತವ್ಯ ಲೋಪಕ್ಕೆ ಸಂಬಂಧಿಸಿದ ಅವಧಿಗೆ ವಿಮೆ ಮಾಡಿಸಬಹುದು ಮತ್ತು ಗುತ್ತಿಗೆದಾರನಿಗೆ ಪಾವತಿಸಬೇಕಾದ ಯಾವುದೇ ಪಾವತಿಯಿಂದ ಪ್ರೀಮಿಯಂಗಳನ್ನು ಕಡಿತಪಡಿಸಿ ಮರುಪಡೆಯಬಹುದು.

2016–21ರ ಅವಧಿಯಲ್ಲಿ ಕಾರ್ಯಗತಗೊಳಿಸಲಾದ ₹2490.35 ಕೋಟಿ ವೆಚ್ಚದ 471 ಪರೀಕ್ಷಾ–ತನಿಖೆ ನಡೆಸಿದ ಗುತ್ತಿಗೆಗಳಲ್ಲಿ ಗುತ್ತಿಗೆದಾರರು ವಿಮಾ ರಕ್ಷಣೆಯನ್ನು ಒದಗಿಸುವ ಅಗತ್ಯವಿದ್ದಿತು ಎಂಬುದನ್ನು ಪರೀಕ್ಷಾ–ತನಿಖೆ ನಡೆಸಿದ 20 ವಿಭಾಗಗಳು ಮತ್ತು ಎಸ್‌ಎಚ್‌ಡಿಪಿಗಳಲ್ಲಿನ ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಲೆಕ್ಕಪರಿಶೋಧನೆಯು ಗಮನಿಸಿತು. ಆದರೆ, ಎಸ್‌ಎಚ್‌ಡಿಪಿಯಿಂದ ಕೈಗೆತ್ತಿಕೊಂಡ ಕಾಮಗಾರಿಗಳನ್ನು ಹೊರತುಪಡಿಸಿ ಪರೀಕ್ಷಾ–ತನಿಖೆ ನಡೆಸಲಾದ ವಿಭಾಗಗಳಲ್ಲಿ ಯಾವುದೇ ಗುತ್ತಿಗೆದಾರರಿಂದ ವಿಮಾ ರಕ್ಷಣೆಯನ್ನು ಒದಗಿಸಲಾಗಿರಲಿಲ್ಲ. ಅಲ್ಲದೆ, ಕಾರ್ಯಗತಗೊಳಿಸಿದ ಕಾಮಗಾರಿಗಳಿಗೆ ವಿಮಾ ರಕ್ಷಣೆಯನ್ನು ಒದಗಿಸುವುದನ್ನು ಖಚಿತಪಡಿಸಿಕೊಳ್ಳಲು ವಿಭಾಗಗಳು ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಇದು ಗುತ್ತಿಗೆದಾರರು 2016–21ರ ಅವಧಿಯಲ್ಲಿ ಅಂದಾಜು ₹1.99 ಕೋಟಿ ಲಾಭ ಪಡೆಯುವಲ್ಲಿ ಪರಿಣಮಿಸಿತು ವಿವರಗಳನ್ನು, **ಅನುಬಂಧ–4.13ರಲ್ಲಿ** ನೀಡಲಾಗಿದೆ.

ಪಿಡಬ್ಲ್ಯುಡಿ ದಕ್ಷಿಣ ವಲಯಕ್ಕೆ ಸಂಬಂಧಿಸಿದ ಬಹುತೇಕ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ ಎಂದು ಸರ್ಕಾರವು ತಿಳಿಸಿತು (ಆಗಸ್ಟ್ 2022). ಆದರೆ, ಭವಿಷ್ಯದಲ್ಲಿ ಕೈಗೆತ್ತಿಕೊಳ್ಳುವ ಎಲ್ಲ ಕಾಮಗಾರಿಗಳಿಗೂ ವಿಮೆ ಪಡೆಯಲು ಇಲಾಖೆಯು ಒಪ್ಪಿಗೆ ನೀಡಿತು.

ಇತರ ವಲಯಗಳಿಗೆ ಸಂಬಂಧಿಸಿದಂತೆ ಸರ್ಕಾರವು ಉತ್ತರ ನೀಡಿಲ್ಲ.

4.3.4 ಉದ್ದೇಶ ಪತ್ರ/ಸ್ವೀಕಾರ ಪತ್ರ ಮತ್ತು ಕಾಮಗಾರಿ ಆದೇಶವನ್ನು ಕೈಬರಹದಿಂದ ನೀಡಿರುವುದು

ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಖರೀದಿಸುವ ಘಟಕದಿಂದ ಲೆಟರ್ ಆಫ್ ಇಂಟೆಂಟ್ (ಎಲ್‌ಒಐ)/ ಲೆಟರ್ ಆಫ್ ಅಕ್ಸೆಪ್ಟೆನ್ಸ್ (ಎಲ್‌ಒಎ) ಅನ್ನು ಉತ್ಪಾದಿಸಲು ಅವಕಾಶ ಒದಗಿಸುತ್ತದೆ ಮತ್ತು ಅದನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಯಶಸ್ವಿ ಬಿಡ್‌ದಾರರಿಗೆ ಕಳುಹಿಸುತ್ತದೆ. ಎಲ್‌ಒಐ/ ಎಲ್‌ಒಎ ಮತ್ತು ಕಾಮಗಾರಿ ಆದೇಶವನ್ನು ಯಶಸ್ವಿ ಗುತ್ತಿಗೆದಾರರಿಗೆ ಹಸ್ತಚಾಲಿತವಾಗಿ ನೀಡುವುದು ಪೋರ್ಟಲ್‌ನಲ್ಲಿ ಹಣಕಾಸಿನ ಬಿಡ್‌ಗಳ ಅಪೂರ್ಣ ಮೌಲ್ಯಮಾಪನಕ್ಕೆ ಕಾರಣವಾಗುತ್ತದೆ, ಹಣಕಾಸು ಇಲಾಖೆಯು 01.08.2018 ರಂದು ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಲ್ಲಿ ಕಡ್ಡಾಯವಾಗಿ ಎಲ್‌ಒಐ/ ಎಲ್‌ಒಎ ಯನ್ನು ಉತ್ಪಾದಿಸಲು ಮತ್ತು ಯಶಸ್ವಿ ಬಿಡ್‌ದಾರರಿಗೆ ವಿತರಿಸಲು ಸರ್ಕಾರೀ ಆದೇಶವನ್ನು ಹೊರಡಿಸಿತು. ಅಲ್ಲದೆ, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಎಲ್‌ಒಐ/ಎಲ್‌ಒಎ ನೀಡುವಿಕೆಯು 'ಬಿಡ್ಡರ್‌ಗಳ ಲಭ್ಯವಿರುವ ಟೆಂಡರ್ ಸಾಮರ್ಥ್ಯ'ದ ಸ್ವಯಂಚಾಲಿತ ಮೌಲ್ಯಮಾಪನಕ್ಕೆ ಸಹಾಯ ಮಾಡುತ್ತದೆ.

ಲೆಕ್ಕಪರಿಶೋಧನೆಯು ದಾಖಲೆಗಳ ಪರಿಶೋಧನೆಯಲ್ಲಿ ಪಿಡ್ಲೂಡಿ, ಬಿದರ್ ಹೊರತುಪಡಿಸಿ ಆಯ್ದ ಎಲ್ಲಾ ವಿಭಾಗಗಳು ಸರ್ಕಾರದ ಆದೇಶವನ್ನು ಗಣನೆಗೆ ತೆಗೆದು ಕೊಳ್ಳದೆ, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ನಲ್ಲಿ ಆರ್ಥಿಕ ಬಿಡ್‌ಗಳನ್ನು ತೆರೆದ ನಂತರ, LoI/LoA ಮತ್ತು ಕಾರ್ಯಾದೇಶಗಳನ್ನು ಮ್ಯಾನುಯಲ್‌ಆಗಿಯೇ ನೀಡುತ್ತಿರುವುದನ್ನು ಗಮನಿಸಿತು.

ಕೇಸ್ ಸ್ಟಡಿ–4.3

ನಂಜನಗೂಡು ತಾಲೂಕಿನ ಎಸ್‌ಎಚ್–86 (ಡಬ್ಲ್ಯುಐ–113170) ರಸ್ತೆಗೆ ಸಂಬಂಧಿಸಿದಂತೆ ಗುತ್ತಿಗೆದಾರರ ಹಣಕಾಸಿನ ಬಿಡ್‌ಅನ್ನು ₹4.04 ಕೋಟಿಗೆ ಮುಖ್ಯ ಎಂಜಿನಿಯರ್, ಸಿ & ಬಿ (ದಕ್ಷಿಣ), ಬೆಂಗಳೂರು ಅವರು ಅನುಮೋದಿಸಿದ್ದರು (04.02.2020). 90 ದಿನಗಳ ವಿಳಂಬದ ನಂತರ 04.05.20ರಂದು ವಿಭಾಗದಿಂದ ಎಲ್‌ಒಎಯನ್ನು ಕೈಬರಹದಲ್ಲಿ ಕಳುಹಿಸಲಾಯಿತು. ತರುವಾಯ ಗುತ್ತಿಗೆದಾರರು ಎಲ್‌ಒಎ ಪ್ರತಿಯನ್ನು ಸ್ವೀಕರಿಸಿಲ್ಲ ಎಂಬ ಮನವಿಯ ಮೇರೆಗೆ 19.10.20ರಂದು ಮತ್ತೊಂದು

ಎಲ್ಒಯನ್ನು ನೀಡಲಾಯಿತು ಮತ್ತು ಟೆಂಡರ್ ಸ್ವೀಕರಿಸಿದ 306 ದಿನಗಳ ನಂತರ (18.12.19) 21.10.20ರಂದು ಕಾಮಗಾರಿಯನ್ನು ಮುಂದುವರಿಸಲು ಸೂಚನೆ ನೀಡಲಾಯಿತು.

ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರವೇ ಎಲ್ಒಎ/ಎಲ್ಒಐ ಗಳನ್ನು ನೀಡಲು ಸರ್ಕಾರವು ಒಪ್ಪಿಕೊಂಡಿತು (ಆಗಸ್ಟ್ 2022).

4.3.5 ದೋಷ ಹೊಣೆಗಾರಿಕೆ ಅವಧಿ (ಡಿಎಲ್‌ಪಿ)

ಒಪ್ಪಂದದಲ್ಲಿ ನಿಗದಿಪಡಿಸಿದ ಮಾನದಂಡಗಳಿಗೆ ಕಾಮಗಾರಿಯನ್ನು ನಿರ್ವಹಿಸುವುದು ಮತ್ತು ಪೂರ್ಣಗೊಳಿಸುವುದು ನಿರ್ಮಾಣ ಗುತ್ತಿಗೆಯಡಿಯಲ್ಲಿ ಗುತ್ತಿಗೆದಾರನ ಪ್ರಾಥಮಿಕ ಕರ್ತವ್ಯಗಳಲ್ಲಿ ಒಂದಾಗಿದೆ. ದೋಷಗಳೇನಾದರೂ ಇದ್ದಲ್ಲಿ ಗುತ್ತಿಗೆದಾರರು ಅದನ್ನು ಹೇಗೆ ಮತ್ತು ಯಾವಾಗ ಸರಿಪಡಿಸಬೇಕು ಎನ್ನುವ ಹೊಣೆಗಾರಿಕೆಯನ್ನು ಪೂರೈಸಲು ಡಿಎಲ್‌ಪಿಯನ್ನು ಉದ್ದೇಶಿಸಲಾಗಿದೆ. ಪೂರ್ಣಗೊಂಡ ನಂತರದ ಅವಧಿಯಲ್ಲಿ ದೋಷಗಳು ಉಂಟಾಗುತ್ತವೆ ಎಂದು ಡಿಎಲ್‌ಪಿ ಗುರುತಿಸುತ್ತದೆ ಮತ್ತು ಅಗತ್ಯವಿರುವ ಗುಣಮಟ್ಟಕ್ಕೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಆ ದೋಷಗಳನ್ನು ಸರಿಪಡಿಸುವ ಹೊಣೆಗಾರಿಕೆಯನ್ನು ಒಳಗೊಂಡಿದೆ.

ಬಿಟುಮಿನಸ್ ದಪ್ಪವು 40 ಮಿ.ಮೀ.ಗಿಂತ ಹೆಚ್ಚು ಅಥವಾ ಅದಕ್ಕಿಂತ ಅಧಿಕವಾಗಿದ್ದರೆ ಹಾಗೂ ಬಿಟುಮಿನಸ್ ದಪ್ಪವು 40 ಮಿ.ಮೀ.ಗಿಂತ ಕಡಿಮೆಯಿದ್ದರೆ ಪೂರ್ಣಗೊಂಡ ದಿನಾಂಕದಿಂದ ಅನುಕ್ರಮವಾಗಿ ಮೂರು ವರ್ಷಗಳ ಮತ್ತು ಒಂದು ವರ್ಷದ ಡಿಎಲ್‌ಪಿಯನ್ನು ಎಮ್ಒಆರ್‌ಟಿಹೆಚ್ ನಿಗದಿಪಡಿಸಿದೆ (ಏಪ್ರಿಲ್ 2012). ಹೋಲಿಕೆಗಾಗಿ, ಕೇರಳ ಸರ್ಕಾರದಲ್ಲಿ ಎಲ್ಲಾ ಪಿಡಬ್ಲ್ಯುಡಿ ರಸ್ತೆ ಕಾಮಗಾರಿಗಳಿಗೆ ಅದೇ ಡಿಎಲ್‌ಪಿ ಚಾಲ್ತಿಯಲ್ಲಿದೆ. ಆದರೆ, ಕರ್ನಾಟಕದಲ್ಲಿ, ಪಿಡಬ್ಲ್ಯೂಡಿ ರಸ್ತೆಗಳಲ್ಲಿ ಕೈಗೊಳ್ಳಲಾದ ಸುಧಾರಣಾ ಕಾಮಗಾರಿಗಳಿಗಾಗಿ ಎಸ್ಎಚ್‌ಡಿಪಿ ಎರಡು ವರ್ಷಗಳ ಡಿಎಲ್‌ಪಿಯನ್ನು ನಿಗದಿಪಡಿಸಿತ್ತು. ಅಲ್ಲದೆ, ರಸ್ತೆ ಕಾಮಗಾರಿಗಳಿಗೆ ಡಿಎಲ್‌ಪಿಯನ್ನು ನಿಗದಿಪಡಿಸಲು ಪಿಡಬ್ಲ್ಯುಡಿಯಲ್ಲಿ ಅಂತಹ ಯಾವುದೇ ಸೂಚನೆಗಳು ಅಥವಾ ಮಾರ್ಗಸೂಚಿಗಳು ಲಭ್ಯವಿರಲಿಲ್ಲ.

₹2047.77 ಕೋಟಿ ಮೌಲ್ಯದ 363 ಗುತ್ತಿಗೆಗಳಲ್ಲಿ ಸರ್ಕಾರವು ಅನುಮೋದಿಸಿದ ನಿರ್ದಿಷ್ಟ ಸಮಯದ ವೇಳಾಪಟ್ಟಿಯ ಅನುಪಸ್ಥಿತಿಯಲ್ಲಿ, ಕೈಗೊಂಡ ಕಾಮಗಾರಿಯ ಸ್ವರೂಪವನ್ನು ಲೆಕ್ಕಿಸದೆ ಪಿಡಬ್ಲ್ಯುಡಿ ಅಧಿಕಾರಿಗಳು ಒಂದು ವರ್ಷದ ಡಿಎಲ್‌ಪಿಯನ್ನು ನಿರ್ಧರಿಸಿದ್ದರು. ವಿವರಗಳು **ಅನುಬಂಧ–4.14**ರಲ್ಲಿವೆ.

₹24.60 ಕೋಟಿ ವೆಚ್ಚದ ಒಂಬತ್ತು[16] ಪ್ರಕರಣಗಳಲ್ಲಿ ಮುಖ್ಯ ಎಂಜಿನಿಯರ್‌ಗಳು ಎರಡು ವರ್ಷಗಳ ಡಿಎಲ್‌ಪಿಯನ್ನು ಅನುಮೋದಿಸಿದ್ದರೆ ವಿಭಾಗ ಕಚೇರಿಯು (ತುಮಕೂರು) ಗುತ್ತಿಗೆ ಒಪ್ಪಂದ ಮಾಡಿಕೊಳ್ಳುವಾಗ ಅದನ್ನು ಒಂದು ವರ್ಷಕ್ಕೆ ಬದಲಾಯಿಸಿರುವುದನ್ನು ಗಮನಿಸಲಾಯಿತು. ಇದು ಗುತ್ತಿಗೆದಾರರಿಗೆ ಅನಗತ್ಯ ಲಾಭವಾಗುವಲ್ಲಿ ಪರಿಣಮಿಸಿತು.

ನಿರ್ದಿಷ್ಟ ಮಾರ್ಗಸೂಚಿಗಳ ಅನುಪಸ್ಥಿತಿಯಲ್ಲಿ ದೋಷ ಹೊಣೆಗಾರಿಕೆಯ ಅವಧಿಯನ್ನು ಸ್ವೇಚ್ಛಾನುಸಾರವಾಗಿ ನಿಗದಿಪಡಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಆಗಸ್ಟ್ 2022) ಹೇಳಿದೆ. ಆದರೆ, ಎಮ್ಒಆರ್‌ಟಿಹೆಚ್ ಅಥವಾ ಐಆರ್‌ಸಿ ಮಾರ್ಗಸೂಚಿಗಳಿಗೆ ಅನುಸಾರವಾಗಿ ನಿರ್ಧಾರವನ್ನು ತೆಗೆದುಕೊಳ್ಳಲು ಒಪ್ಪಿಕೊಳ್ಳಲಾಯಿತು.

ಶಿಫಾರಸು–10: ಎಮ್ಒಆರ್‌ಟಿಹೆಚ್ ನಿಯಮಗಳ ಪ್ರಕಾರ ಡಿಎಲ್‌ಪಿಯನ್ನು ನಿಗದಿಪಡಿಸಲು ಸರ್ಕಾರವು ಅಗತ್ಯ ಕ್ರಮವನ್ನು ತೆಗೆದುಕೊಳ್ಳಬೇಕು.

[16] 41274, 41276, 42034, 42325, 42353, 54926, 74797, 79927 ಮತ್ತು 81601

4.3.6 ಗುತ್ತಿಗೆ ರದ್ದುಗೊಳಿಸುವಲ್ಲಿ ಅಸಾಮಾನ್ಯ ವಿಳಂಬ

ಒಪ್ಪಂದದ ಷರತ್ತುಗಳ ಅನುಚ್ಛೇದ 17ರ ಪ್ರಕಾರ, ಟೆಂಡರ್‌ನಲ್ಲಿ ನಮೂದಿಸಿದ ಕಾಮಗಾರಿಯನ್ನು ನಿರ್ವಹಿಸಲು ಅನುಮತಿಸಲಾದ ಸಮಯವನ್ನು ಗುತ್ತಿಗೆದಾರರು ಕಟ್ಟುನಿಟ್ಟಾಗಿ ಪಾಲಿಸಬೇಕು. ಕಾಮಗಾರಿಯನ್ನು ಪೂರ್ಣಗೊಳಿಸಲು ವಿಫಲವಾದಲ್ಲಿ, ಒಪ್ಪಂದವನ್ನು ರದ್ದುಗೊಳಿಸಲಾಗುತ್ತದೆ ಮತ್ತು ಉಳಿದ ಕೆಲಸವನ್ನು ಪೂರ್ಣಗೊಳಿಸಲು ಉದ್ಯೋಗದಾತರ ಹೆಚ್ಚುವರಿ ವೆಚ್ಚವಾಗಿ ಗುತ್ತಿಗೆದಾರರಿಂದ ಉಳಿದ ಕೆಲಸದ ಮೌಲ್ಯದ ಶೇಕಡಾ 30ರಷ್ಟನ್ನು ವಸೂಲು ಮಾಡಲಾಗುತ್ತದೆ (ಅನುಚ್ಛೇದ 49 ಮತ್ತು 50).

ಮೈಸೂರಿನ ಪಿಡಬ್ಲ್ಯುಡಿ ವಿಭಾಗದಲ್ಲಿ ನಂಜನಗೂಡು ತಾಲೂಕಿನ ಹೆಜ್ಜಿಗೆ ಗ್ರಾಮದ ಬಳಿ ಕಬಿನಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಸೇತುವೆಗೆ ರಸ್ತೆ ಬದಿಯ ಸೌಕರ್ಯಗಳನ್ನು ಒದಗಿಸುವ ₹10 ಕೋಟಿ ಅಂದಾಜು ವೆಚ್ಚದ ಕಾಮಗಾರಿಯ ಗುತ್ತಿಗೆಯನ್ನು (ಸಿಇಆರ್ ನಂ.708/2017–18) ಏಪ್ರಿಲ್ 2019ರೊಳಗೆ ಪೂರ್ಣಗೊಳಿಸುವಂತೆ ನಿಗದಿಪಡಿಸಿ ₹10.13 ಕೋಟಿಗೆ ಗುತ್ತಿಗೆದಾರರಿಗೆ[17] ವಹಿಸಿರುವುದನ್ನು ಗಮನಿಸಲಾಯಿತು (ಜುಲೈ 2018). ಇಲಾಖೆಯು ಹಲವಾರು ನೋಟೀಸ್‌ಗಳನ್ನು ನೀಡಿದ್ದರೂ ಸಹ ಕಾಮಗಾರಿ ಶೆಡ್ಯೂಲ್‌ನ ಪ್ರಕಾರ ಕಾಮಗಾರಿಯನ್ನು ನಿರ್ವಹಿಸಲು ಗುತ್ತಿಗೆದಾರರು ವಿಫಲರಾಗಿದ್ದರು. ವಿಭಾಗದಿಂದ ಖಚಿತ ಪಡಿಸಿಕೊಂಡಂತೆ, ಕಾಮಗಾರಿಯನ್ನು ಸ್ಥಗಿತಗೊಳಿಸಿ ಮೂರು ವರ್ಷಗಳಿಗೂ ಹೆಚ್ಚು ಸಮಯವಾಗಿತ್ತು ಮತ್ತು 2021ರ ಜುಲೈನಲ್ಲಿ ಮಾತ್ರ ರದ್ದುಗೊಳಿಸುವ ಪ್ರಸ್ತಾವನೆಯನ್ನು ಕಳುಹಿಸಲಾಗಿತ್ತು ಹಾಗೂ ಅಂತಿಮ ಅಳತೆಯನ್ನು ಆಗಸ್ಟ್ 2021ರಲ್ಲಿ ತೆಗೆದುಕೊಳ್ಳಲಾಗಿತ್ತು. ಅಂತಿಮ ಅಳತೆಯನ್ನು ತೆಗೆದುಕೊಂಡ ನಂತರ ಸಿದ್ಧಪಡಿಸಿದ ತುಲನಾತ್ಮಕ ತ:ಖ್ತೆಯ ಪ್ರಕಾರ, ಗುತ್ತಿಗೆದಾರರು ನಿಗದಿತ ಪೂರ್ಣಗೊಳಿಸುವ ದಿನಾಂಕದೊಳಗೆ ₹0.36 ಕೋಟಿ ಮೊತ್ತದ ಕಾಮಗಾರಿಯನ್ನು ಪೂರ್ಣಗೊಳಿಸಿದ್ದರು.

ಅದರಂತೆ ಉಳಿದ ಕಾಮಗಾರಿಯ ಮೌಲ್ಯದ ಶೇಕಡಾ 30ರಷ್ಟಾ ₹2.93 ಕೋಟಿ ದಂಡವನ್ನು ಗುತ್ತಿಗೆದಾರರಿಂದ ವಸೂಲು ಮಾಡಬೇಕಿತ್ತು. ಆದರೆ, ಅದರ ಬೇಡಿಕೆ ಮತ್ತು ವಸೂಲಿ ಮಾಡಲು ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಇದಲ್ಲದೆ, 1ನೇ ಆರ್‌ಎ ಬಿಲ್‌ನಿಂದ ವಸೂಲು ಮಾಡಬೇಕಿದ್ದ ₹0.51 ಕೋಟಿ ಮೊತ್ತದ ಕಾರ್ಯಕ್ಷಮತಾ ಖಾತರಿಯನ್ನು ಗುತ್ತಿಗೆದಾರರ ಕೋರಿಕೆಯ ಮೇರೆಗೆ ಒಪ್ಪಂದವನ್ನು ಕಾರ್ಯಗತಗೊಳಿಸುವ ಸಮಯದಲ್ಲಿ ಪಡೆಯದಿರುವುದನ್ನು ಗಮನಿಸಲಾಯಿತು. ಗುತ್ತಿಗೆಯನ್ನು ಮುಕ್ತಾಯಗೊಳಿಸುವಲ್ಲಿ ಅತಿಯಾದ ವಿಳಂಬವಾದ್ದರಿಂದ, ಹೆಚ್ಚುವರಿ ವೆಚ್ಚದ ₹2.57 ಕೋಟಿ (₹2.93 ಕೋಟಿ ಮೈನಸ್ ₹ 0.36 ಕೋಟಿ) ವಸೂಲು ಮಾಡುವ ಸಾಧ್ಯತೆ ಅನುಮಾನಾಸ್ಪದವಾಗಿದೆ.

ಬೆಂಗಳೂರಿನ ಪಿಡಬ್ಲ್ಯೂಡಿ ವಿಭಾಗದಲ್ಲಿ ₹8.50 ಕೋಟಿ ವೆಚ್ಚದ ಡಬ್ಲ್ಯೂ ಐ ಸಂಖ್ಯೆ.65596 ಪ್ರಕರಣದಲ್ಲಿ ₹1.83 ಕೋಟಿ ಆರ್ಥಿಕ ಪ್ರಗತಿಯನ್ನು ನೀಡಿ ಗುತ್ತಿಗೆದಾರರು ಕಾಮಗಾರಿಯನ್ನು ಸ್ಥಗಿತಗೊಳಿಸಿದ್ದರು (ಆಗಸ್ಟ್ 2019). ಆದರೆ, ಗುತ್ತಿಗೆಯನ್ನು ರದ್ದುಪಡಿಸಿ ಬೇರೆ ಗುತ್ತಿಗೆದಾರರ ಮೂಲಕ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಂಡಿರಲಿಲ್ಲ. ₹0.43 ಕೋಟಿ ಮೊತ್ತದ ಬ್ಯಾಂಕ್ ಖಾತರಿಯೂ ಸಹ ಲೋಪವಾಗಿರುವುದನ್ನು ಉಲ್ಲೇಖಿಸುವುದು ಸೂಕ್ತವಾಗುತ್ತದೆ.

ಟೆಂಡರ್ ಷರತ್ತುಗಳ ಪ್ರಕಾರ ಒಪ್ಪಂದವನ್ನು ರದ್ದುಗೊಳಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಸರ್ಕಾರವು ತಿಳಿಸಿತು (ಆಗಸ್ಟ್ 2022). ಬಾಕಿ ಕಾಮಗಾರಿಗೆ ಟೆಂಡರ್ ಕರೆಯಲು ಸಹ ಕ್ರಮ ಕೈಗೊಳ್ಳಲಾಗಿದೆ ಎಂದೂ ತಿಳಿಸಲಾಯಿತು. ಬೆಂಗಳೂರು ವಿಭಾಗಕ್ಕೆ ಸಂಬಂಧಿಸಿದ ಕಾಮಗಾರಿಗೆ ಸಂಬಂಧಿಸಿದಂತೆ ರದ್ದುಪಡಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ ಎಂದು ತಿಳಿಸಲಾಯಿತು.

[17] ಮೆ.ರವಿಶಂಕರ್ ಇನ್‌ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್

4.3.7 ಭೂಮಿಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳದೇ ಕಾಮಗಾರಿಗಳನ್ನು ವಹಿಸಿರುವುದು

ಕೆಪಿಡಬ್ಲ್ಯುಡಿ ಸಂಹಿತೆಯ ಕಂಡಿಕೆ 279ರ ಪ್ರಕಾರ, 2014ರ ರೈಟ್ ಆಫ್ ವೇ (ಆರ್ಇಡಬ್ಲ್ಯು) ಮಾಲೀಕತ್ವವನ್ನು ನೀಡುವುದಿಲ್ಲ. ಅರಣ್ಯ ಸಂರಕ್ಷಣಾ ಕಾಯಿದೆ, 1980 ಜಾರಿಗೊಳಿಸಿದ್ದರಿಂದ ಮತ್ತು ನಂತರದ ಸುಪ್ರೀಂ ಕೋರ್ಟ್ ತೀರ್ಪುಗಳ ಪರಿಣಾಮವಾಗಿ, ಆರ್ಒಡಬ್ಲ್ಯು ಲಭ್ಯವಿದ್ದರೂ ಸಹ ರಸ್ತೆಗಳ ನಿರ್ವಹಣೆ ಮತ್ತು ಅಗಲೀಕರಣಕ್ಕಾಗಿ ಅರಣ್ಯ ಇಲಾಖೆಯಿಂದ (ಎಫ್ಡಿ) ಅನುಮತಿಯ ಅಗತ್ಯವಿದೆ. ಅಲ್ಲದೆ, ಐಆರ್ಸಿ ಎಸ್ಪಿ–19ರ ಕಂಡಿಕೆ–17.3.2ರ ಪ್ರಕಾರ, ಕಾಮಗಾರಿಯ ವೆಚ್ಚವು ಭೂಮಿಯ ವೆಚ್ಚ ಮತ್ತು ಪರಿಹಾರದ ಅರಣ್ಯೀಕರಣವನ್ನು ಸಹ ಒಳಗೊಂಡಿರಬೇಕು.

ಐದು ವಿಭಾಗಗಳಲ್ಲಿ (**ಅನುಬಂಧ–4.15**) ₹41.85 ಕೋಟಿ ವೆಚ್ಚದ ಎಂಟು ಅಂದಾಜುಗಳನ್ನು ಸಿದ್ಧಪಡಿಸುವಾಗ ರಸ್ತೆಮಾರ್ಗದಲ್ಲಿ ಅರಣ್ಯ ಭೂಮಿ ಮತ್ತು ಖಾಸಗಿ ಭೂಮಿ ಅಸ್ತಿತ್ವವನ್ನು ಪರಿಗಣನೆಗೆ ತೆಗೆದುಕೊಂಡಿರಲಿಲ್ಲ ಎಂಬುದು ಲೆಕ್ಕಪರಿಶೋಧನಾ ಪರಿಶೀಲನೆಯಿಂದ ತಿಳಿದುಬಂದಿತು. ಭೂಮಿ ಲಭ್ಯತೆಯನ್ನು ಖಚಿತಪಡಿಸಿಕೊಳ್ಳದೇ ಕಾಮಗಾರಿಗಳನ್ನು ವಹಿಸಲಾಗಿತ್ತು. ಇಲಾಖೆಯು ಹಣಕಾಸು ಇಲಾಖೆಯಿಂದ ಅನುಮತಿಯನ್ನು ಪಡೆಯಲು ಹಾಗೂ ಭೂಸ್ವಾಧೀನ ಪ್ರಕ್ರಿಯೆಯನ್ನು ತಡವಾಗಿ ಆರಂಭಿಸಿತು. ತತ್ಪರಿಣಾಮವಾಗಿ ಈಗಾಗಲೇ ₹21.10 ಕೋಟಿ ವೆಚ್ಚ ಮಾಡಲಾಗಿದ್ದ ಎಂಟು ಕಾಮಗಾರಿಗಳು ಅರಣ್ಯ ಮಂಜೂರಾತಿ ಮತ್ತು ಭೂಸ್ವಾಧೀನದಲ್ಲಿ ವಿಳಂಬದಿಂದಾಗಿ 25ರಿಂದ 61 ತಿಂಗಳು ಕಳೆದರೂ ಸಹ ಅಪೂರ್ಣವಾಗಿಯೇ ಉಳಿದಿವೆ (ಫೆಬ್ರವರಿ 2022). ಕೆಲವು ನಿರ್ದಿಷ್ಟ ಪ್ರಕರಣಗಳನ್ನು ಕೆಳಗೆ ನೀಡಲಾಗಿದೆ:

- ರಾಮನಗರ ತಾಲೂಕಿನ ಕಸಬಾ ಹೋಬಳಿಯಲ್ಲಿ ಕೆಂಚಿಗಾರ ಕಾಲೋನಿಯಿಂದ ಕೆಂಪನಹಳ್ಳಿವರೆಗಿನ ಬಿಎಂ ರಸ್ತೆಯ ಚೈನೇಜ್ 0.00 ಯಿದ 4.00 ಕಿ.ಮೀ.ವರೆಗಿನ ರಸ್ತೆ ಸುಧಾರಣಾ ಕಾಮಗಾರಿಯನ್ನು ಅಂದಾಜು ₹2.70 ಕೋಟಿ ವೆಚ್ಚದಲ್ಲಿ, ಜುಲೈ 2019ರೊಳಗೆ ಪೂರ್ಣಗೊಳಿಸಬೇಕೆಂಬ ಷರತ್ತಿನೊಂದಿಗೆ ವಹಿಸಲಾಯಿತು (ಫೆಬ್ರವರಿ 2019). ಅರಣ್ಯ ಇಲಾಖೆಯ ಪೂರ್ವಾನುಮತಿ ಪಡೆಯದ ಕಾರಣ 2025 ಚದರ ಮೀಟರ್ ಜಿಎಸ್ಬಿ ಮತ್ತು 2813 ಚದರ ಮೀಟರ್ ವೆಟ್ಮಿಕ್ಸ್ ಒದಗಿಸಿದ್ದಕ್ಕೆ ₹1.13 ಕೋಟಿ ಆರ್ಥಿಕ ಪ್ರಗತಿಯನ್ನು ನೀಡಿದ ನಂತರ ಕಾಮಗಾರಿಯನ್ನು ಸ್ಥಗಿತಗೊಳಿಸಬೇಕಾಯಿತು. ಎರಡು ವರ್ಷದಿಂದ ಕಾಮಗಾರಿ ಸ್ಥಗಿತಗೊಂಡಿದ್ದರೂ ಸಹ ಅರಣ್ಯ ಇಲಾಖೆಯಿಂದ ಅನುಮತಿ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸಲು ಪಿಡಬ್ಲ್ಯುಡಿ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಕಾಮಗಾರಿಯನ್ನು ಅಸುರಕ್ಷಿತ ಹಂತದಲ್ಲಿ ನಿಲ್ಲಿಸಿರುವುದರಿಂದ, ಮೂಲ ಪದರಕ್ಕೆ ಹಾನಿಯನ್ನು ತಳ್ಳಿಹಾಕಲಾಗುವುದಿಲ್ಲ.

  ಅರಣ್ಯ ಇಲಾಖೆಯು ಬಾಕಿ ಕಾಮಗಾರಿಯನ್ನು ಕಾರ್ಯಗತಗೊಳಿಸಲು ಅನುಮತಿ ನೀಡದಿದ್ದುದರಿಂದ ಬಾಕಿ ಕಾಮಗಾರಿಯನ್ನು ರದ್ದುಗೊಳಿಸಲಾಯಿತು ಎಂದು ಸರ್ಕಾರು ತಿಳಿಸಿತು (ಆಗಸ್ಟ್ 2022).

  ಡಬ್ಲ್ಯುಎಂಎಂ ಪದರವನ್ನು ಮುಚ್ಚಿದ ಲೇಪನದಿಂದ ರಕ್ಷಿಸದ ಕಾರಣ ಅಸುರಕ್ಷಿತ ಹಂತದಲ್ಲಿ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

- ಪ್ಯಾಕೇಜ್ 223ರಡಿಯಲ್ಲಿ ಎಸ್ಎಚ್ಡಿಪಿಯಲ್ಲಿ ಎರಡು ಕಾಮಗಾರಿಗಳನ್ನು ₹20.50 ಕೋಟಿ ಅಂದಾಜು ವೆಚ್ಚದಲ್ಲಿ ಮೇ 2017ರೊಳಗೆ ಪೂರ್ಣಗೊಳಿಸುವಂತೆ ನಿಗದಿಪಡಿಸಿ ವಹಿಸಲಾಯಿತು (ಜೂನ್ 2016). ಒಂದು ಕಾಮಗಾರಿಯನ್ನು ಎಲ್ಲಾ ರೀತಿಯಲ್ಲಿಯೂ ಪೂರ್ಣಗೊಳಿಸಲಾಯಿತು.. ಆದರೆ, 'ಸಾತನೂರು–ಮುತ್ತತ್ತಿ' ರಸ್ತೆಗೆ ಸಂಬಂಧಿಸಿದಂತೆ ಗುತ್ತಿಗೆದಾರರು 6.30ರಿಂದ 13.80 ಕಿಮೀ ರೀಚ್‌ನಲ್ಲಿ 7.50 ಕಿಮೀ ಉದ್ದದ ಕಾಮಗಾರಿಯನ್ನು ನಿಭಾಯಿಸಿದ್ದರು ಹಾಗೂ ಅಸ್ತಿತ್ವದಲ್ಲಿರುವ ಕ್ಯಾರೇಜ್‌ವೇ 3.75 ಮೀ ನಿಂದ 5.50 ಮೀ ವರೆಗೆ ಅಗಲೀಕರಣವನ್ನು ಒಳಗೊಂಡಿದ್ದ. ಬಾಕಿಯಿದ್ದ

7.50 ಕಿಮೀ ವ್ಯಾಪ್ತಿಯನ್ನು ಕೈಗೆತ್ತಿಕೊಂಡಿರಲಿಲ್ಲ. ಈ 7.50 ಕಿ.ಮೀ ಉದ್ದದ ರಸ್ತೆಯು ಕಾವೇರಿ ವನ್ಯಜೀವಿ ಅಭಯಾರಣ್ಯದ ಮೂಲಕ ಹಾದು ಹೋಗುತ್ತಿದೆ ಎಂಬುದು ಲೆಕ್ಕಪರಿಶೋಧನಾ ಪರಿಶೀಲನೆಯಿಂದ ತಿಳಿದುಬಂದಿತು. ಆದರೆ, 5.5 ಮೀಟರ್ ಅಗಲದ ರಸ್ತೆಗೆ ಅರಣ್ಯ ಇಲಾಖೆಯಿಂದ ಅನುಮತಿ ಪಡೆಯಲು ಇಲಾಖೆ ಪ್ರಸ್ತಾವನೆ ಕಳುಹಿಸಿರಲಿಲ್ಲ.

ಇದಲ್ಲದೆ, ಅರಣ್ಯ ಇಲಾಖೆಯೊಂದಿಗೆ ಅನುಸರಣೆಯು ಯಾವುದೇ ಫಲಿತಾಂಶವನ್ನು ನೀಡದಿದ್ದಾಗ ಅಸ್ತಿತ್ವದಲ್ಲಿರುವ 3.75 ಮೀಟರ್ ರಸ್ತೆಯಲ್ಲಿ ಮಾತ್ರ ಸುಧಾರಣೆ ಕಾರ್ಯಗಳನ್ನು ಕೈಗೊಳ್ಳಲು ಗುತ್ತಿಗೆದಾರರಿಗೆ ಸೂಚಿಸಲಾಯಿತು (ಅಕ್ಟೋಬರ್ 2019). ಆದರೆ, ಗುತ್ತಿಗೆದಾರರು ಕಾಮಗಾರಿಯನ್ನು ಪುನರಾರಂಭಿಸಲಿಲ್ಲ ಹಾಗೂ ವಿಳಂಬ ಮತ್ತು ವಸ್ತುಗಳ ಬೆಲೆಯ ಹೆಚ್ಚಳದ ಆಧಾರದ ಮೇಲೆ ಬಾಕಿ ಕಾಮಗಾರಿಗಳಿಗೆ ಪರಿಷ್ಕೃತ ದರಗಳನ್ನು ನೀಡುವಂತೆ ವಿನಂತಿಸಿದರು (ಜನವರಿ 2020). ಇಲ್ಲಿನವರೆಗಿನ ಕಾಮಗಾರಿಗೆ ಗುತ್ತಿಗೆದಾರರಿಗೆ ₹15.82 ಕೋಟಿ ಮೊತ್ತವನ್ನು ಪಾವತಿಸಲಾಗಿದೆ. ಒಪ್ಪಂದವನ್ನು ಇನ್ನೂ ರದ್ದುಗೊಳಿಸಿರಲಿಲ್ಲ.

- ಅರಕಲಗೂಡು ತಾಲೂಕಿನ ಹಿರೀಸಾವೆ–ಚಟ್ಟಹಳ್ಳಿ ರಸ್ತೆಯ (ಎಸ್‌ಗೆಚ್–8) ಚೈನೇಜ್ 90.60 ಕಿಮೀ ಸೇತುವೆಯ ನಿರ್ಮಾಣವನ್ನು ಸೆಪ್ಟೆಂಬರ್ 2016 ರೊಳಗೆ ಪೂರ್ಣಗೊಳಿಸುವಂತೆ ನಿಗದಿಪಡಿಸಿ ₹1.50 ಕೋಟಿ ಅಂದಾಜು ವೆಚ್ಚದಲ್ಲಿ (ಮಾರ್ಚ್ 2016) ವಹಿಸಲಾಯಿತು. ತಾತ್ಪೂರ್ತಿಕ ಆಧಾರದ ಮೇಲೆ ಅಂದಾಜಿನಲ್ಲಿ ₹5 ಲಕ್ಷ ಮೊತ್ತವನ್ನು ಒದಗಿಸಲಾಯಿತು. 2017ರ ಮಾರ್ಚ್‌ನಲ್ಲಿ ಕಂದಾಯ ಇಲಾಖೆ ನಡೆಸಿದ ಸಮೀಕ್ಷೆ ವೇಳೆ ಸೇತುವೆಯ ಬಳಿಗೆ ಹೋಗುವ ರಸ್ತೆ ನಿರ್ಮಾಣಕ್ಕೆ ಅಗತ್ಯವಿರುವ ಭೂಮಿಯು ಸರಕಾರಿ ಭೂಮಿ ಎಂದು ಸೂಚಿಸಲಾಗಿತ್ತು. ಆದರೆ, ಮರು ಸಮೀಕ್ಷೆಯ ಸಮಯದಲ್ಲಿ (ಫೆಬ್ರವರಿ 2018) ಮೇಲೆ ಹೇಳಲಾದ ಭೂಮಿ (0.09 ಗುಂಟೆಗಳು) ಖಾಸಗಿ ವ್ಯಕ್ತಿಗೆ ಸೇರಿದ್ದು ಎಂಬುದಾಗಿ ತಿಳಿದುಬಂದಿತು. ಅದರಂತೆ, ಜೂನ್ 2018ರಲ್ಲಿ ಭೂಸ್ವಾಧೀನ ಪ್ರಸ್ತಾವನೆಯನ್ನು ಕಂದಾಯ ಇಲಾಖೆಗೆ ಕಳುಹಿಸಲಾಯಿತು. ಭೂಮಿಯನ್ನು ಇಲಾಖೆಗೆ ವರ್ಗಾಯಿಸಿರಲಿಲ್ಲ (ಸೆಪ್ಟೆಂಬರ್ 2021). ಗುತ್ತಿಗೆದಾರರು ಕಾಮಗಾರಿಯನ್ನು ಮುಂದುವರಿಸಲು ಇಚ್ಛಿಸದ ಕಾರಣ, ಗುತ್ತಿಗೆಯನ್ನು ಮುಕ್ತಾಯಗೊಳಿಸಲಾಯಿತು (ಮಾರ್ಚ್ 2018) ಮತ್ತು ಅಪೂರ್ಣ ಕಾಮಗಾರಿಯು ಅದೇ ಸ್ಥಿತಿಯಲ್ಲಿದೆ. ಸೂಕ್ತವಾದ ಸೇತುವೆಯ ಕಾಮಗಾರಿಯ ನಿರ್ಮಾಣಕ್ಕಾಗಿ ₹0.69 ಕೋಟಿಯ ಅಂತಿಮ ಬಿಲ್ಲನ್ನು ಪಾವತಿಸಲಾಯಿತು (ಆಗಸ್ಟ್ 2021). ಹೀಗೆ, ಅಗತ್ಯವಿದ್ದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳದೆ ಕಾಮಗಾರಿ ಆರಂಭಿಸಿದ ಕಾರಣ ಸಂಪರ್ಕ ಕಲ್ಪಿಸುವ ಉದ್ದೇಶ ₹0.69 ಕೋಟಿ ವೆಚ್ಚ ಮಾಡಿದರೂ ಐದು ವರ್ಷಕ್ಕೂ ಹೆಚ್ಚು ವಿಳಂಬವಾಗಿದ್ದಲ್ಲದೇ (ಫೆಬ್ರವರಿ–2022) ಇದುವರೆಗೂ ಸಹ ಪೂರ್ಣಗೊಂಡಿಲ್ಲ.



ಇಲಾಖಾ ಇಂಜಿನಿಯರ್‌ಗಳೊಂದಿಗೆ ಜಂಟಿ ಭೌತಿಕ ತಪಾಸಣೆಯ ಸಮಯದಲ್ಲಿ ತೆಗೆದ ಅಪೂರ್ಣ ಸೇತುವೆಯ ಚಿತ್ರ

- 2018–20ರಲ್ಲಿ ಸುಧಾರಣೆಗಾಗಿ ತೆಗೆದುಕೊಳ್ಳಲಾದ ಮೂರು ರಸ್ತೆ ಕಾಮಗಾರಿಗಳು[18] (₹11 ಕೋಟಿ ಮೌಲ್ಯದ) ಭೂಮಿಯ ಸಮಸ್ಯೆಯಿಂದಾಗಿ ಪ್ರಾರಂಭವಾಗಿರಲಿಲ್ಲ. ರದ್ದಾಗಿರುವ ಈ ಕಾಮಗಾರಿಗಳಿಗೆ ಬದಲಾಗಿ ಪರ್ಯಾಯ ಕಾಮಗಾರಿಗಳನ್ನು ಪ್ರಸ್ತಾವಿಸದ ಕಾರಣ ಅನುದಾನದ ಲೋಪವನ್ನು ತಳ್ಳಿಹಾಕುವಂತಿಲ್ಲ. ಒಂದು ಕಾಮಗಾರಿಯಲ್ಲಿ (ಮಂಡ್ಯ) ಗುತ್ತಿಗೆದಾರರಿಗೆ ಸ್ವೀಕೃತಿ ಪತ್ರವನ್ನು ನೀಡಿರಲಿಲ್ಲವಾದರೆ ಇನ್ನೆರಡು ಕಾಮಗಾರಿಗಳಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲು ಎರಡು ವರ್ಷಕ್ಕೂ ಹೆಚ್ಚು ಕಾಲ ವಿಳಂಬವಾಗಿದ್ದರೂ ಸಹ ಗುತ್ತಿಗೆಯನ್ನು ರದ್ದುಪಡಿಸಲು ವಿಭಾಗದಿಂದ ಯಾವುದೇ ಕ್ರಮ ಕೈಗೊಂಡಿರಲಿಲ್ಲ.

ಭೂಮಾಲೀಕರ ಆಕ್ಷೇಪಣೆಯಿಂದಾಗಿ ಕಾಮಗಾರಿಗಳನ್ನು ಪ್ರಾರಂಭಿಸಲು ಸಾಧ್ಯವಾಗಲಿಲ್ಲ ಮತ್ತು ಹಾಗಾಗಿ ಗುತ್ತಿಗೆಗಳನ್ನು ರದ್ದುಗೊಳಿಸಲಾಯಿತು ಎಂದು, ಸರ್ಕಾರವು ತಿಳಿಸಿತು (ಆಗಸ್ಟ್ 2022). ಮರುಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದೂ ಸಹ ಸರ್ಕಾರವು ತಿಳಿಸಿತು. ಅಗತ್ಯವಿರುವ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಮೌನವಾಗಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಈ ಕಾಮಗಾರಿಗಳನ್ನು ಮರುಟೆಂಡರ್ ಮಾಡಿರುವುದರಿಂದ ಸಮಯದ ಹರಿವಿನ ಕಾರಣದಿಂದ ಬೊಕ್ಕಸಕ್ಕೆ ಹೆಚ್ಚುವರಿ ಹೊರೆ ಬೀಳುವುದನ್ನು ತಳ್ಳಿಹಾಕುವಂತಿಲ್ಲ.

4.4 ಬಳಕೆದಾರ ಏಜೆನ್ಸಿಗಳಿಂದ ವರ್ಗಾವಣೆ ಶುಲ್ಕಗಳನ್ನು ವಸೂಲಿ ಮಾಡದಿರುವುದು

2011ರ ಐಆರ್‌ಸಿ 98ರ ಅಸ್ತಿತ್ವದಲ್ಲಿರುವ ನಿಬಂಧನೆಗಳ ಪ್ರಕಾರ, ರಸ್ತೆಗಳ ಸುಧಾರಣೆ/ಅಗಲೀಕರಣದ ಕಾರಣದಿಂದಾಗಿ ಅಗತ್ಯವಿರುವ ವಿದ್ಯುತ್/ದೂರವಾಣಿ ಮಾರ್ಗಗಳು, ನೀರಿನ ಪೈಪ್‌ಗಳು ಇತ್ಯಾದಿಗಳನ್ನು ಬದಲಾಯಿಸುವುದು ಆಯಾ ಬಳಕೆದಾರ ಏಜೆನ್ಸಿಗಳ ಹೊಣೆಗಾರಿಕೆಯಾಗಿದೆ. ಅಂತಹ ಕೆಲಸದ ವೆಚ್ಚವನ್ನು ಬಳಕೆದಾರ ಏಜೆನ್ಸಿಯು ಭರಿಸತಕ್ಕದ್ದು ಮತ್ತು ಲೋಕೋಪಯೋಗಿ ಇಲಾಖೆಯಿಂದ ಮೂರನೇ–ವ್ಯಕ್ತಿಯ ಏಜೆನ್ಸಿಯ ಮೇಲ್ವಿಚಾರಣೆಯಲ್ಲಿ ಅನುಮೋದಿತ ಗುತ್ತಿಗೆ ಏಜೆನ್ಸಿಗಳ ಮೂಲಕ ನಿರ್ವಹಿಸಲಾಗುವುದು. ಬಳಕೆದಾರ ಏಜೆನ್ಸಿಗಳು ವರ್ಗಾವಣೆಯನ್ನು ಮಾಡದಿದ್ದಲ್ಲಿ, ಹೆಚ್ಚುವರಿ ಪೆನಾಲ್ಟಿಯೊಂದಿಗೆ ಬಳಕೆದಾರ ಏಜೆನ್ಸಿಯ ಅಪಾಯ ಮತ್ತು ವೆಚ್ಚದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಆ ಕೆಲಸವನ್ನು ಮಾಡಲಾಗುತ್ತದೆ ಮತ್ತು ಭವಿಷ್ಯದಲ್ಲಿ ಅವರಿಗೆ ಅನುಮತಿಯನ್ನು ನಿರಾಕರಿಸಲಾಗುತ್ತದೆ.

ಅನುಬಂಧ–4.16ರಲ್ಲಿ ವಿವರಿಸಿದಂತೆ ಉಪಯುಕ್ತತೆಗಳ ವರ್ಗಾವಣೆಗೆ ಲೋಕೋಪಯೋಗಿ ಇಲಾಖೆ ₹15.30 ಕೋಟಿ ವೆಚ್ಚ ಮಾಡಿತ್ತು ಎಂದು ₹185.67 ಕೋಟಿ ಮೌಲ್ಯದ 16 ಕಾಮಗಾರಿಗಳ ಲೆಕ್ಕಪರಿಶೋಧನಾ ಪರಿಶೀಲನೆಯಲ್ಲಿ ತಿಳಿದುಬಂದಿತು.

ನಿರ್ದಿಷ್ಟ ಕಾಯಿದೆಯ ಅನುಪಸ್ಥಿತಿಯಲ್ಲಿ ಸಂಬಂಧಿಸಿದ ಬಳಕೆದಾರ ಏಜೆನ್ಸಿಗಳಿಂದ ಬಳಕೆದಾರ ಶುಲ್ಕಗಳ ವಸೂಲಾತಿಯನ್ನು ಕಾನೂನಿನಡಿಯಲ್ಲಿ ಮಾಡಲಾಗುತ್ತಿಲ್ಲ ಎಂದು ಸರ್ಕಾರವು ತಿಳಿಸಿತು (ಆಗಸ್ಟ್ 2022). ಆದರೂ, ಲೆಕ್ಕಪರಿಶೋಧನೆಯ ದೃಷ್ಟಿಕೋನವನ್ನು ಪರಿಗಣಿಸಲು ಸರ್ಕಾರ ಒಪ್ಪಿಕೊಂಡಿತು.

ಶಿಫಾರಸು–11: ರಸ್ತೆ ಸುಧಾರಣೆ ಅಥವಾ ಅಭಿವೃದ್ಧಿ ಕಾಮಗಾರಿಗಳ ಸ್ಥಳದಿಂದ ಉಪಯುಕ್ತತೆಗಳನ್ನು ವರ್ಗಾಯಿಸಲು ನೀತಿ ಅಥವಾ ಮಾರ್ಗಸೂಚಿಗಳನ್ನು ರೂಪಿಸುವುದನ್ನು ಸರ್ಕಾರವು ಪರಿಗಣಿಸಬೇಕು.

[18] ಮಂಗಳೂರು ವಿಭಾಗದಲ್ಲಿ ಎರಡು ಕಾಮಗಾರಿಗಳು ಮತ್ತು ಮಂಡ್ಯ ವಿಭಾಗದಲ್ಲಿ ಒಂದು ಕಾಮಗಾರಿ.

ಅಧ್ಯಾಯ 05

ಗುತ್ತಿಗೆ ವ್ಯತ್ಯಯಗಳು, ಮುಂಗಡಗಳು ಮತ್ತು ವಸೂಲಾತಿಗಳು

ಅಧ್ಯಾಯ – 5

ಗುತ್ತಿಗೆ ವ್ಯತ್ಯಯಗಳು, ಮುಂಗಡಗಳು ಮತ್ತು ವಸೂಲಾತಿಗಳು

ಮಳೆಯ ಅತಿವೃಷ್ಟಿ, ಗ್ರಾಮಸ್ಥರ ಪ್ರತಿಭಟನೆ, ಜಮೀನು ವ್ಯಾಜ್ಯಗಳು, ಅರಣ್ಯ ಇಲಾಖೆಯಿಂದ ಆಕ್ಷೇಪಣೆ ಮುಂತಾದ ಕ್ಷುಲ್ಲಕ ಕಾರಣಗಳಿಂದ ಹೆಚ್ಚಿನ ಸಂಖ್ಯೆಯ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅಸಾಮಾನ್ಯ ವಿಳಂಬವಾಗಿತ್ತು. ಆದರೆ, ವಿಳಂಬಕ್ಕೆ ನಿರ್ದಿಷ್ಟವಾದ ಕಾರಣಗಳನ್ನು ಸೂಚಿಸುವ ಯಾವುದೇ ದಾಖಲೆಗಳನ್ನು ಲೋಕೋಪಯೋಗಿ ಇಲಾಖೆ ನಿರ್ವಹಿಸಿರಲಿಲ್ಲ ಮತ್ತು ವಾಡಿಕೆಯಂತೆ ಕಾಮಗಾರಿಗಳಿಗೆ ಸಮಯದ ವಿಸ್ತರಣೆಯನ್ನು ನೀಡಲಾಗಿತ್ತು. ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್ ಅಡಿಯಲ್ಲಿ ಒದಗಿಸಲಾದ ಮಾಪನದ ತಾಕ್ಷಣಿಕ ಸಲ್ಲಿಕೆಯನ್ನು ಇಲ್ಲಿಯವರೆಗೆ ಬಳಸಿರಲಿಲ್ಲ (ಜೂನ್ 2022). ಕಾಮಗಾರಿಗಳ ಅಳತೆಗಳನ್ನು ಎಕ್ಸೆಲ್ ಸ್ಪ್ರೆಡ್‌ಶೀಟ್‌ಗಳಲ್ಲಿ ದಾಖಲಿಸಲಾಗಿದ್ದು, ಇದು ಗುತ್ತಿಗೆದಾರರ ಬಿಲ್‌ಗಳನ್ನು ತಯಾರಿಸುವ ಉದ್ದೇಶಕ್ಕೆ ಮಾಹಿತಿಯ ವಿಶ್ವಾಸಾರ್ಹ ಮೂಲವಾಗಿರಲಿಲ್ಲ.

5.1 ಗುತ್ತಿಗೆ ವ್ಯತ್ಯಯಗಳು

ಒಪ್ಪಂದವು ಗುತ್ತಿಗೆದಾರ ಮತ್ತು ಉದ್ಯೋಗದಾತರ ನಡುವಿನ ಕಾನೂನುಬದ್ಧ ಒಪ್ಪಂದವಾಗಿರುತ್ತದೆ, ಇದು ಕೆಲಸದ ವ್ಯಾಪ್ತಿ, ವೆಚ್ಚ, ಸಮಯಾವಕಾಶ ಮತ್ತು ಕಾಮಗಾರಿಯನ್ನು ಕಾರ್ಯಗತಗೊಳಿಸಲು ನಿಯಮಗಳು ಮತ್ತು ಷರತ್ತುಗಳನ್ನು ವ್ಯಾಖ್ಯಾನಿಸುತ್ತದೆ. ಗುತ್ತಿಗೆದಾರರಿಗೆ ಅನಪೇಕ್ಷಿತ ಪ್ರಯೋಜನಗಳನ್ನು ಒದಗಿಸುವ ಒಪ್ಪಂದದ ವ್ಯಾಪ್ತಿ, ವೆಚ್ಚ, ಸಮಯಾವಕಾಶ ಹಾಗೂ ನಿಯಮಗಳು ಮತ್ತು ಷರತ್ತುಗಳಲ್ಲಿನ ಯಾವುದೇ ಬದಲಾವಣೆಯನ್ನು ಸಕ್ಷಮ ಆಡಳಿತ/ಹಣಕಾಸು ಪ್ರಾಧಿಕಾರದ ಅನುಮೋದನೆಯೊಂದಿಗೆ ಮತ್ತು ನಿಯಮಗಳಡಿಯಲ್ಲಿ ನಿಗದಿಪಡಿಸಿದ ಮಿತಿಯೊಳಗೆ ಮಾತ್ರ ಮಾಡಬೇಕು.

ಆದರೆ, ಕೆಳಗೆ ಚರ್ಚಿಸಲಾದ ಹೆಚ್‌ಎಸ್‌ಡಿಪಿಯ ದಾಖಲೆಗಳನ್ನು ಪರಿಶೀಲಿಸುವಾಗ ಅಂತಹ ಹೆಚ್ಚಿನ ಸಂಖ್ಯೆಯ ಪ್ರಕರಣಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು:

5.1.1 ಮಂಜೂರಾದ ಕಾಮಗಾರಿಗಳ ತಪ್ಪಿಸಬಹುದಾಗಿದ್ದ ಮಾರ್ಪಾಡುಗಳು

2016–17ನೇ ಅವಧಿಯಲ್ಲಿ ₹3,500 ಕೋಟಿ ವೆಚ್ಚದಲ್ಲಿ 4,095 ಕಿ.ಮೀ ಉದ್ದದ 399 ರಸ್ತೆ ಸುಧಾರಣೆ ಕಾಮಗಾರಿಗಳಿಗೆ ಸರ್ಕಾರದಿಂದ ಆಡಳಿತಾತ್ಮಕವಾಗಿ ಅನುಮೋದನೆ ನೀಡಲಾಯಿತು (ಡಿಸೆಂಬರ್ 2015). ಕಾಮಗಾರಿಗಳನ್ನು ₹3,673.35 ಕೋಟಿ ಟೆಂಡರ್ ವೆಚ್ಚದಲ್ಲಿ 127 ಪ್ಯಾಕೇಜ್‌ಗಳಲ್ಲಿ ಕೈಗೊಳ್ಳಲಾಗಿತ್ತು. ಕಾರ್ಯಗತಗೊಳಿಸುವ ಹಂತದಲ್ಲಿ ಸಂಭವಿಸಿದ ವ್ಯತ್ಯಾಸಗಳಿಗೆ (₹298.86 ಕೋಟಿ) ಅವಕಾಶ ಕಲ್ಪಿಸಲು ಒಪ್ಪಂದದ ಬೆಲೆಯನ್ನು ನಂತರ ₹3,972.21 ಕೋಟಿಗೆ ಮಾರ್ಪಡಿಸಲಾಯಿತು. ಮಂಜೂರಾದ ಮೊತ್ತದೊಳಗೆ ವೆಚ್ಚವನ್ನು ಮಿತಿಗೊಳಿಸಲು ಡಿಪಿಆರ್‌ನಲ್ಲಿ ಪ್ರಸ್ತಾವಿಸಲಾದ ಉದ್ದವನ್ನು ಎಸ್‌ಹೆಚ್‌ಡಿಪಿ 3841 ಕಿ.ಮೀ.ಗಳೆಂದು ಮಾರ್ಪಡಿಸಿತು. ಸರ್ಕಾರದಿಂದ ಮಂಜೂರಾದ ₹3,500 ಕೋಟಿಗೆ ಮತ್ತು ₹3,972.21 ಕೋಟಿಯ ಪರಿಷ್ಕೃತ ಗುತ್ತಿಗೆ ಬೆಲೆಗೆ ಪ್ರತಿಯಾಗಿ, ₹181.62 ಕೋಟಿಯ ಬಾಕಿ ಬಿಲ್‌ಗಳು ಮತ್ತು ಇತರ ಬದ್ಧ ವೆಚ್ಚಗಳು ಸೇರಿದಂತೆ ಮೂರನೇ ಹಂತದ ಕಾಮಗಾರಿಗಳಿಗೆ ₹4,012 ಕೋಟಿ ಮೊತ್ತವನ್ನು ಈಗಾಗಲೇ ಭರಿಸಲಾಗಿತ್ತು. ಭರಿಸಿದ ವೆಚ್ಚವು ಅನುದಾನಕ್ಕಿಂತ ಅಧಿಕವಾಗಿರುವುದರಿಂದ ಉದ್ದೇಶಿತ ಉದ್ದವನ್ನು ಮಾರ್ಪಡಿಸಲು ಯಾವುದೇ ಸಮರ್ಥನೆ ಇರಲಿಲ್ಲ.

ವ್ಯತ್ಯಯಗಳನ್ನು ತಪ್ಪಿಸಲು ಮುಂಬರುವ ಪ್ರಸ್ತಾವನೆಗಳಲ್ಲಿ ಸೂಕ್ತ ಎಚ್ಚರಿಕೆ ತೆಗೆದುಕೊಳ್ಳುವುದಾಗಿ ಸರ್ಕಾರವು ತಿಳಿಸಿತು (ಆಗಸ್ಟ್ 2022).

ಕೇಸ್ ಸ್ಟಡಿ–5.1

₹17.21 ಕೋಟಿ ವೆಚ್ಚದಲ್ಲಿ ಮೈಸೂರು ಜಿಲ್ಲೆಯ ಐದು ರಸ್ತೆ ಕಾಮಗಾರಿಗಳ ಸುಧಾರಣೆಗೆ ಎಸ್ಎಚ್ಡಿಪಿ ತಾಂತ್ರಿಕ ಮಂಜೂರಾತಿ ನೀಡಿತು (ಫೆಬ್ರವರಿ 2016). ಜೂನ್ 2021ರೊಳಗೆ ಪೂರ್ಣಗೊಳಿಸುವಂತೆ ನಿಗದಿಪಡಿಸಿ ₹18.93 ಕೋಟಿಗೆ ಗುತ್ತಿಗೆದಾರರಿಗೆ ಕಾಮಗಾರಿಯನ್ನು ವಹಿಸಲಾಯಿತು (ಜುಲೈ 2016). 'ಮೈಸೂರು–ಭೋಗಾದಿ–ಗದ್ದಿಗೆ' ರಸ್ತೆಯನ್ನು ಚೈನೇಜ್ 6.00 ರಿಂದ 13.50 ಕಿ.ಮೀವರೆಗೆ ₹ಎರಡು ಕೋಟಿ ವೆಚ್ಚದಲ್ಲಿ ಅಗಲೀಕರಣ ಮಾಡುವುದು ಒಪ್ಪಂದದಲ್ಲಿ ಸೇರಿತ್ತು. ಗುತ್ತಿಗೆದಾರರಿಗೆ ಕಾಮಗಾರಿಯನ್ನು ವಹಿಸಿದ ನಂತರ ಚೈನೇಜ್ 5.00ರಿಂದ 13.50 ಕಿ.ಮೀ.ವರೆಗೆ ಚತುಷ್ಪಥ ರಸ್ತೆ ನಿರ್ಮಾಣದ ಪ್ರಸ್ತಾವನೆಯನ್ನು ಈಗಾಗಲೇ 2017–18ನೇ ಅನುಬಂಧ–ಇ ಯಲ್ಲಿ ಸೇರಿಸಿರುವುದನ್ನು ಗಮನಿಸಲಾಯಿತು. ಆದ್ದರಿಂದ, ರಸ್ತೆಯ ಈ ಭಾಗವನ್ನು ಎಸ್ಹೆಚ್ಡಿಪಿ ಒಪ್ಪಂದದ ವ್ಯಾಪ್ತಿಯಿಂದ ಕೈಬಿಡಲು ನಿರ್ಧರಿಸಲಾಯಿತು. ₹2 ಕೋಟಿಯಷ್ಟು ಉಳಿತಾಯ ಲಭ್ಯವಿದ್ದುದರಿಂದ ರಸ್ತೆ ಹಾಳಾಗಿದೆ ಎಂಬ ಸ್ಥಳೀಯ ಶಾಸಕರ ಮನವಿಯ ಮೇರೆಗೆ ಚೈನೇಜ್ 15.50ರಿಂದ 17.80 ಕಿ.ಮೀ ವರೆಗೆ ಅದೇ ರಸ್ತೆಯ ಮರುನಿರ್ಮಾಣವನ್ನು ಪ್ರಸ್ತಾವಿಸಲಾಯಿತು (ಫೆಬ್ರವರಿ 2017). ರಸ್ತೆ ತುಂಬಾ ಹಾಳಾಗಿದ್ದರೆ, ಈಗಿರುವ ಉತ್ತಮ ರಸ್ತೆಯನ್ನು ಅಗಲೀಕರಣ ಮಾಡುವುದಕ್ಕಿಂತ ಮೊದಲ ಹಂತದಲ್ಲಿ ಆ ಹಾಳಾದ ಭಾಗವನ್ನು ಅಭಿವೃದ್ಧಿಪಡಿಸುವುದು ಇಲಾಖೆಯ ಆದ್ಯತೆಯಾಗಿರಬೇಕಿತ್ತು. ಅಲ್ಲದೆ, ಈ ಹಾನಿಗೊಳಗಾದ ರಸ್ತೆಯ ಭಾಗವನ್ನು ಮೂಲ ಅಂದಾಜಿನಲ್ಲಿ ಸೇರಿಸದಿರುವುದಕ್ಕೆ ಕಾರಣಗಳು ದಾಖಲೆಗಳಿಂದ ಕಂಡುಬರಲಿಲ್ಲ. ಡಿಪಿಆರ್ ಪ್ರಕಾರ ಈ ರಸ್ತೆಯು ಸುಸ್ಥಿತಿಯಲ್ಲಿತ್ತು. ಆದ್ದರಿಂದ, ಅಸ್ತಿತ್ವದಲ್ಲಿರುವ ಸಾಗಾಣಿಕೆ ದಾರಿಯ ಮೇಲ್ಮೈ ದುರಸ್ತಿಯನ್ನು ಪ್ರಸ್ತಾವಿಸದೆ, ಮೂಲ ಡಿಪಿಆರ್‌ನಲ್ಲಿ ಅಗಲೀಕರಣವನ್ನು ಮಾತ್ರ ಪ್ರಸ್ತಾಪಿಸಲಾಗಿತ್ತು. ಲೋಕೋಪಯೋಗಿ ಇಲಾಖೆಯು ಪಾದಚಾರಿ ಮಾರ್ಗದ ರಚನಾತ್ಮಕ ಸಾಮರ್ಥ್ಯದ ಮೌಲ್ಯಮಾಪನಕ್ಕಾಗಿ ಎಫ್ಡಬ್ಲ್ಯುಡಿ ಮತ್ತು ಜಿಪಿಆರ್‌ನಂತಹ ಸಾಧನಗಳನ್ನು ಹೊಂದಿದೆ. ಆದಾಗ್ಯೂ, ಪುನರ್ನಿರ್ಮಾಣ ಕಾರ್ಯವನ್ನು ಪ್ರಸ್ತಾವಿಸುವ ಮೊದಲು ಅಂತಹ ಯಾವುದೇ ಮೌಲ್ಯಮಾಪನವನ್ನು ಕೈಗೊಂಡಿರಲಿಲ್ಲ. ಹೀಗೆ, ವ್ಯತ್ಯಯದ ವಸ್ತುಗಳೆಂದು ಮಂಜೂರಾದ ಅಂದಾಜಿನಲ್ಲಿ ಒದಗಿಸದ ರೀಚ್‌ಗಳಲ್ಲಿ ಕಾಮಗಾರಿಗಳನ್ನು ವಹಿಸಿಕೊಡಲು ಉಳಿತಾಯದ ಬಳಕೆ ಮಾಡಿದ್ದು ಅನಧಿಕೃತವಾಗಿತ್ತು ಮತ್ತು ಅನುಚಿತವಾಗಿತ್ತು ಏಕೆಂದರೆ ವ್ಯತ್ಯಯದ ವಸ್ತುಗಳು ಯಾವಾಗಲೂ ಬಿಲ್ ಆಫ್ ಕ್ವಾಂಟಿಟೀಸ್‌ನಲ್ಲಿ ಮಂಜೂರಾದ ಕಾಮಗಾರಿಗೆ ಪ್ರಾಸಂಗಿಕವಾದ ಬದಲಾವಣೆಯನ್ನು ಉಲ್ಲೇಖಿಸುತ್ತದೆ.

5.1.2 ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬಗಳು

ಪ್ರತಿ ಗುತ್ತಿಗೆ ಒಪ್ಪಂದದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿತ ದಿನಾಂಕವನ್ನು ನಿರ್ದಿಷ್ಟಪಡಿಸಲಾಗಿರುತ್ತದೆ. ಕೆಪಿಡಬ್ಲ್ಯುಡಿ ಸಂಹಿತೆಯ ಕಂಡಿಕೆ 196ರ ಪ್ರಕಾರ, ವಿಳಂಬದ ಸಂದರ್ಭಗಳಲ್ಲಿ ಫಾರ್ಮ್ ಎಫ್10 ನಲ್ಲಿ ಸಮಯದ ವಿಸ್ತರಣೆಗಾಗಿ ಗುತ್ತಿಗೆದಾರರು ಅರ್ಜಿಯನ್ನು ಸಲ್ಲಿಸಬೇಕು. ಒಪ್ಪಂದದ ಅನುಚ್ಛೇದ 26.2ರ ಪ್ರಕಾರ ಇಂಜಿನಿಯರ್‌ರವರು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ 21 ದಿನಗಳಲ್ಲಿ ಸಮಯದ ವಿಸ್ತರಣೆಯನ್ನು ಅನುಮೋದಿಸಲು ನಿರ್ಧರಿಸುತ್ತಾರೆ.

ಒಟ್ಟು 499 ಪರೀಕ್ಷಾ–ತನಿಖೆ ನಡೆಸಿದ ಕಾಮಗಾರಿಗಳ ಪೈಕಿ ₹862.76 ಕೋಟಿ ವೆಚ್ಚದ 116 ಕಾಮಗಾರಿಗಳು ಪ್ರಗತಿಯಲ್ಲಿದ್ದು, ₹2659.80 ಕೋಟಿ ಮೌಲ್ಯದ 374 ಕಾಮಗಾರಿಗಳು ಪೂರ್ಣಗೊಂಡಿದ್ದು, ಒಂಬತ್ತು ಕಾಮಗಾರಿಗಳನ್ನು ಸ್ಥಗಿತಗೊಳಿಸಲಾಗಿದೆ ಅಥವಾ ರದ್ದುಗೊಳಿಸಲಾಗಿದೆ ಎಂದು ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ದಾಖಲೆಗಳ ಪರಿಶೀಲನೆಯಿಂದ ತಿಳಿದುಬಂದಿತು. ಪೂರ್ಣಗೊಂಡಿರುವ 374 ಕಾಮಗಾರಿಗಳಲ್ಲಿ ಕೇವಲ 171 ಕಾಮಗಾರಿಗಳು (ಶೇಕಡಾ 46) ನಿಗದಿತ ದಿನಾಂಕದ ಪ್ರಕಾರ ಪೂರ್ಣಗೊಂಡಿವೆ ಮತ್ತು ಉಳಿದ 203 ಕಾಮಗಾರಿಗಳು ನಿಗದಿತ ದಿನಾಂಕದಿಂದ (**ಅನುಬಂಧ–5.1**) 1,613 ದಿನಗಳ ವಿಳಂಬದೊಂದಿಗೆ ಪೂರ್ಣಗೊಂಡಿವೆ. ಇವುಗಳಲ್ಲಿ ₹499.10 ಕೋಟಿ ಮೌಲ್ಯದ 89 ಪ್ರಕರಣಗಳಲ್ಲಿ ಸಮಯ ವಿಸ್ತರಣೆಯ ಪ್ರಸ್ತಾವನೆಗಳನ್ನು ಅನುಮೋದನೆಗಾಗಿ ಉನ್ನತ ಅಧಿಕಾರಿಗಳಿಗೆ ಕಳುಹಿಸಿರಲಿಲ್ಲ.

ಸಮಯ ವಿಸ್ತರಣೆಗಾಗಿ ಅರ್ಜಿಗಳಲ್ಲಿ ದಿನಾಂಕವನ್ನು ನಮೂದಿಸಿರಲಿಲ್ಲ ಮತ್ತು ಅವುಗಳ ಸ್ವೀಕೃತಿಯನ್ನು ಯಾವುದೇ ರಿಜಿಸ್ಟರ್‌ನಲ್ಲಿ ವಿಭಾಗಗಳು ದಾಖಲಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅಲ್ಲದೆ, ಅತಿವೃಷ್ಟಿ, ಗ್ರಾಮಸ್ಥರ ಪ್ರತಿಭಟನೆ, ಜಮೀನು ವಿವಾದ, ಅರಣ್ಯ ಇಲಾಖೆಯಿಂದ ಆಕ್ಷೇಪಣೆ ಇತ್ಯಾದಿ ಕಾರಣಗಳನ್ನು ಅರ್ಜಿಗಳಲ್ಲಿ ವಿಳಂಬಕ್ಕೆ ಅಧ್ಯಾರೋಪಿಸಲಾಗಿದೆ. ಆದಾಗ್ಯೂ, ಯಾವುದಾದರೂ ಅಡೆತಡೆಗಳಿದ್ದಲ್ಲಿ ಅವುಗಳ ಸರಿಯಾದ ದಾಖಲಾತಿಗಳ ಅನುಪಸ್ಥಿತಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ವಿಳಂಬಕ್ಕೆ ನೀಡಿದ ಕಾರಣಗಳ ನಿಖರತೆಯನ್ನು ಪರಿಶೀಲಿಸಲು ಸಾಧ್ಯವಾಗಲಿಲ್ಲ.

ಕೇಂದ್ರೀಯ ಲೋಕೋಪಯೋಗಿ ಇಲಾಖೆಯಲ್ಲಿ (ಸಿಪಿಡಬ್ಲ್ಯುಡಿ ಸಂಹಿತೆಯ ಕಂಡಿಕೆ–5.15) ಯಾವುದೇ ಅಡಚಣೆಯ ಕಾರಣದಿಂದ ಕಾಮಗಾರಿಯನ್ನು ಸ್ಥಗಿತಗೊಳಿಸುವುದನ್ನು ವಿಭಾಗವು ನಿರ್ವಹಿಸುವ ಅಡಚಣೆ ನೋಂದಣಿಯಲ್ಲಿ ದಾಖಲಿಸುವ ಅಗತ್ಯವಿದೆ ಎಂಬುದನ್ನು ಉಲ್ಲೇಖಿಸುವುದು ಇಲ್ಲಿ ಸೂಕ್ತವಾಗಿದೆ. ಆದರೆ ರಾಜ್ಯ ಪಿಡಬ್ಲ್ಯುಡಿ ನಿಯಮಗಳಲ್ಲಿ ಇದೇ ರೀತಿಯ ನಿಬಂಧನೆಗಳಿಲ್ಲವಾಗಿ ಕಾಮಗಾರಿಗಳನ್ನು ನಿರ್ವಹಿಸುವಲ್ಲಿ ಗುತ್ತಿಗೆದಾರರಿಗೆ ಉಂಟಾದ ಅಡಚಣೆಗಳನ್ನು ವಿಭಾಗಗಳು ವ್ಯವಸ್ಥಿತವಾಗಿ ದಾಖಲಿಸಿರಲಿಲ್ಲ.

ಶಿಫಾರಸು–12: ಕಾಮಗಾರಿಗಳ ಅನುಷ್ಠಾನದಲ್ಲಿ ಉಂಟಾದ ಅಡಚಣೆಯನ್ನು ಸ್ಪಷ್ಟವಾಗಿ ದಾಖಲಿಸುವ ಮತ್ತು ಒಪ್ಪಂದದ ನಿಬಂಧನೆಗಳಿಗೆ ಅನುಸಾರವಾಗಿ ಕಾರ್ಯನಿರ್ವಹಿಸುವ 'ಅಡಚಣೆ ರಿಜಿಸ್ಟರ್' ಅನ್ನು ಲೋಕೋಪಯೋಗಿ ಇಲಾಖೆಯು ನಿರ್ವಹಿಸುವುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು. ಅಲ್ಲದೆ, ಋಣಭಾರ ರಹಿತ ಭೂಮಿಯ ಲಭ್ಯತೆಯನ್ನು ಖಚಿತಪಡಿಸಿಕೊಂಡ ನಂತರ ಮತ್ತು ಅರಣ್ಯ ಇಲಾಖೆಯಿಂದ ಅಗತ್ಯ ಅನುಮತಿಯನ್ನು ಪಡೆದ ನಂತರವೇ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

ಭವಿಷ್ಯದಲ್ಲಿ ಕೇಂದ್ರೀಯ ಲೋಕೋಪಯೋಗಿ ಇಲಾಖೆಯಲ್ಲಿ ಅನುಸರಿಸಿದಂತೆ ಮೇಲಿನ ರಿಜಿಸ್ಟರ್‌ಗಳನ್ನು ನಿರ್ವಹಿಸಲು ಸರ್ಕಾರವು ತನ್ನ ಉತ್ತರದಲ್ಲಿ ಒಪ್ಪಿಕೊಂಡಿತು (ಆಗಸ್ಟ್ 2022).

5.1.3 ಪೂರ್ಣಗೊಂಡ ವರದಿಗಳನ್ನು ಸಲ್ಲಿಸದಿರುವುದು

ಕೆಪಿಡಬ್ಲ್ಯೂಡಿ ಸಂಹಿತೆಯ ಕಂಡಿಕೆ 223ರ ಪ್ರಕಾರ, ಕಾಮಗಾರಿಗಳು ಪೂರ್ಣಗೊಂಡ ತಕ್ಷಣ ಎಲ್ಲಾ ಕಾಮಗಾರಿಗಳ ಲೆಕ್ಕಪತ್ರಗಳನ್ನು ಪೂರ್ಣಗೊಳಿಸಬೇಕು ಮತ್ತು ಮೂರು ತಿಂಗಳೊಳಗೆ ಮಹಾಲೇಖಾಪಾಲರಿಗೆ ಮತ್ತು ಸೂಪರಿಂಟೆಂಡಿಂಗ್ ಇಂಜಿನಿಯರ್‌ಗೆ ಪೂರ್ಣಗೊಂಡ ವರದಿಯನ್ನು ಕಳುಹಿಸಬೇಕು. ಪೂರ್ಣಗೊಂಡ ವರದಿಗಳನ್ನು ಮಹಾಲೇಖಾಪಾಲರಿಗೆ ರವಾನಿಸುವ ಮೊದಲು ಅಂದಾಜುಗಳ ಮಂಜೂರಾತಿ ರಿಜಿಸ್ಟರ್‌ನಲ್ಲಿ ನಮೂದಿಸಬೇಕು ಮತ್ತು ಎಲ್ಲಾ ಪೂರ್ಣಗೊಂಡ ವರದಿಗಳ ಸಂಖ್ಯೆ ಮತ್ತು ದಿನಾಂಕವನ್ನು ಕಾಮಗಾರಿ ರಿಜಿಸ್ಟರ್‌ನ ಪುಟಗಳಲ್ಲಿ ಮುಕ್ತಾಯದ ನಮೂದುಗಳ ಕೆಳಗೆ ಉಲ್ಲೇಖಿಸಬೇಕು.

ಆಯ್ಕೆಮಾಡಿದ 499 ಕಾಮಗಾರಿಗಳಲ್ಲಿ ಪ್ರಗತಿ ವರದಿಯಂತೆ 374 ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿದ್ದವು. ಆದರೆ, ವಿಭಾಗಗಳು 221 ಕಾಮಗಾರಿಗಳಿಗೆ ಪೂರ್ಣಗೊಂಡ ವರದಿಯನ್ನು ತಯಾರಿಸಿರಲಿಲ್ಲ. ವಿವರಗಳನ್ನು **ಅನುಬಂಧ–5.2**ರಲ್ಲಿ ನೀಡಲಾಗಿದೆ.

ತತ್ಪರಿಣಾಮವಾಗಿ, ರಾಜ್ಯದಲ್ಲಿ ಕಾಮಗಾರಿಗಳ ಅನುಷ್ಠಾನದ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಲು ಅತ್ಯಗತ್ಯವಾದ ರಸ್ತೆಗಳ ಪೂರ್ಣಗೊಂಡ ಇಂದೀಕೃತ ಸ್ಥಿತಿಯನ್ನು ಸರ್ಕಾರವು ಪಡೆಯಲಿಲ್ಲ.

ಕ್ಯೂಎ ಅಧಿಕಾರಿಗಳಿಂದ ನಿರಾಕ್ಷೇಪಣಾ ಪತ್ರಗಳ ಮತ್ತು ಸಕ್ಷಮ ಪ್ರಾಧಿಕಾರಗಳಿಂದ ಬದಲಾವಣೆಯ ಐಟಂಗಳ ಅನುಮೋದನೆಯ ಕೊರತೆಯಿಂದ ಪೂರ್ಣಗೊಂಡ ವರದಿಗಳನ್ನು ಸಲ್ಲಿಸಲಾಗಿಲ್ಲ ಎಂದು ಸರ್ಕಾರವು ತಿಳಿಸಿತು (ಆಗಸ್ಟ್ 2022). ಆದ್ದರಿಂದ, ಯೋಜನೆಗಳ ಪೂರ್ಣಗೊಂಡ ವರದಿಗಳನ್ನು

ಸಮಯಕ್ಕೆ ಸರಿಯಾಗಿ ಅಂತಿಮಗೊಳಿಸಲಾಗಲಿಲ್ಲ. ಆದರೆ, ಅಗತ್ಯ ಪರೀಕ್ಷಾ ವರದಿಗಳ ಅನುಪಸ್ಥಿತಿಯಲ್ಲಿ ಕಂಡಿಕೆ–9.2ರಲ್ಲಿ ಸೂಚಿಸಿದಂತೆ ಕ್ಯೂಎ ಅಧಿಕಾರಿಗಳು ನಿರಾಕ್ಷೇಪಣಾ ಪತ್ರಗಳನ್ನು ನೀಡುತ್ತಿರಲಿಲ್ಲ.

5.2 ಅನಧಿಕೃತ ಮುಂಗಡ ಪಾವತಿಗಳು

ಮುಂಗಡ ಪಾವತಿಗೆ ಸಮಾನವಾದ ಮೊತ್ತಕ್ಕೆ ರಾಷ್ಟ್ರೀಕೃತ/ಪರಿಶಿಷ್ಟ ಬ್ಯಾಂಕ್‌ನಿಂದ ನೀಡಲಾದ ಬೇಷರತ್ತಾದ ಬ್ಯಾಂಕ್ ಗ್ಯಾರಂಟಿಯನ್ನು ಸಲ್ಲಿಸಿದ ಮೇಲೆ ಒಪ್ಪಂದದ ಬೆಲೆಯ ಶೇಕಡಾ ಐದುರಷ್ಟು ಮೊತ್ತದ ಸಿದ್ಧತಾ ಮುಂಗಡವನ್ನು ಪಾವತಿ ಮಾಡಲು ಕೆಪಿಡಬ್ಲ್ಯುಡಿ ಸಂಹಿತೆಯ ಕಂಡಿಕೆ 200ರಲ್ಲಿ ಮತ್ತು ಇಲಾಖೆಯು ನಿಗದಿಪಡಿಸಿದ ಎಸ್‌ಟಿಡಿಯ ಅನುಚ್ಛೇದ 42ರಡಿಯಲ್ಲಿ ಅವಕಾಶವಿದೆ. ಆದರೆ, ರಾಜ್ಯ ಲೋಕೋಪಯೋಗಿ ಇಲಾಖೆಯಿಂದ ಬಡ್ಡಿ–ಮುಕ್ತ ಮುಂಗಡಗಳ ಪಾವತಿಯು ಕರ್ನಾಟಕ ಲೋಕೋಪಯೋಗಿ ಇಲಾಖೆಯ ರಾಷ್ಟ್ರೀಯ ಹೆದ್ದಾರಿ ವಿಭಾಗಗಳು, ಸಿಪಿಡಬ್ಲ್ಯುಡಿ ಮತ್ತು ಎನ್‌ಹೆಚ್‌ಎಐ ನಂತಹ ಇತರ ಏಜೆನ್ಸಿಗಳಲ್ಲಿ ಚಾಲ್ತಿಯಲ್ಲಿರುವ ಅಭ್ಯಾಸಕ್ಕೆ ಅನುಗುಣವಾಗಿರಲಿಲ್ಲ, ಅವುಗಳಲ್ಲಿ ಶೇಕಡಾ 10ರಷ್ಟು ಬಡ್ಡಿಯನ್ನು ಒಳಗೊಂಡಿರುವ ಸಿದ್ಧತಾ ಮುಂಗಡಗಳನ್ನು ನೀಡಲಾಗುತ್ತಿತ್ತು.

2016–17ರಲ್ಲಿ 75 ಗುತ್ತಿಗೆದಾರರಿಗೆ ಸಿದ್ಧತಾ ಮುಂಗಡವಾಗಿ ₹167.91 ಕೋಟಿ ಮೊತ್ತವನ್ನು ಪಾವತಿಸಿರುವುದನ್ನು ಎಸ್‌ಹೆಚ್‌ಡಿಪಿಯ IIIನೇ ಹಂತದ ಅಡಿಯಲ್ಲಿ ಪಾವತಿಸಿದ ಮತ್ತು ವಸೂಲಾತಿಯಾದ ಸಿದ್ಧತಾ ಮುಂಗಡಗಳ ವಿವರಗಳನ್ನು ತೋರಿಸುವ ತ:ಖ್ತೆಯ ಪರೀಕ್ಷಾ–ತನಿಖೆಯು ತಿಳಿಯಪಡಿಸಿತು. ಜೊತೆಗೆ, 32 ಪ್ರಕರಣಗಳಲ್ಲಿ ಪ್ರಮುಖ ಸಲಕರಣೆಗಳ ಸಜ್ಜುಗೊಳಿಸುವಿಕೆಗಾಗಿ ₹49.73 ಕೋಟಿ ಮೊತ್ತದ ಶೇಕಡಾ ಐದರಷ್ಟು ಮುಂಗಡವನ್ನು ಬಡ್ಡಿರಹಿತವಾಗಿ ಪಾವತಿಸಲಾಗಿತ್ತು. ಹೆಚ್ಚುವರಿ ಶೇಕಡಾ ಐದು ಸಿದ್ಧತಾ ಮುಂಗಡದ ಪಾವತಿಯು ಕ್ರಮಬದ್ಧವಾಗಿರಲಿಲ್ಲ (**ಅನುಬಂಧ–5.3**).

ಗುತ್ತಿಗೆದಾರರಿಗೆ ಪಾವತಿಸಿದ ಸಿದ್ಧತಾ ಮುಂಗಡಗಳನ್ನು ವಸೂಲಿಸಲು ಎಸ್‌ಟಿಡಿಯಲ್ಲಿ ಯಾವುದೇ ಸಮಯದ ಮಿತಿಯನ್ನು ನಿಗದಿಪಡಿಸದಿರುವುದನ್ನು ಸಹ ಗಮನಿಸಲಾಯಿತು. 15 ಗುತ್ತಿಗೆಗಳಲ್ಲಿ ಮುಂಗಡವಾಗಿ ಪಾವತಿಸಿದ ₹39.69 ಕೋಟಿಯಲ್ಲಿ ₹17.79 ಕೋಟಿಯನ್ನು (ಶೇಕಡಾ 45) ಮುಂಗಡವನ್ನು ನೀಡಿದ್ದ ಕಾಮಗಾರಿಯ ಪ್ರಗತಿಯು ನಿಧಾನವಾಗಿದ್ದರಿಂದ ನಿಗದಿತ ಪೂರ್ಣಗೊಳಿಸುವ ಅವಧಿ ಮುಗಿದ ನಾಲ್ಕರಿಂದ ಆರು ತಿಂಗಳ ವಿಳಂಬದೊಂದಿಗೆ ವಸೂಲಿ ಮಾಡಲಾಗಿತ್ತು. ಅಲ್ಲದೆ, ಎರಡು ಒಪ್ಪಂದಗಳಲ್ಲಿ (ಎಸ್‌ಎಚ್‌ಡಿಪಿಯ ಪ್ಯಾಕೇಜ್ 146 ಮತ್ತು 261), ₹5.49 ಕೋಟಿ ಮುಂಗಡದಲ್ಲಿ, ನಿಗದಿತ ಪೂರ್ಣಗೊಂಡ ಅವಧಿಯ 11 ತಿಂಗಳ ವಿಳಂಬದ ನಂತರ ₹4.97 ಕೋಟಿಯನ್ನು ವಸೂಲು ಮಾಡಲಾಗಿತ್ತು. ಹೀಗೆ, ಮುಂಗಡಗಳ ವಸೂಲಾತಿಗೆ ಸಮಯದ ಮಿತಿಯನ್ನು ನಿಗದಿಪಡಿಸದ ಕಾರಣ, ಗುತ್ತಿಗೆದಾರರು ತಮ್ಮ ಇಚ್ಛೆಯಂತೆ ಮುಂಗಡ ಪಾವತಿಗಳನ್ನು ಬಳಸಿಕೊಳ್ಳಲು ಮುಕ್ತರಾಗಿದ್ದರಿಂದ ಎಸ್‌ಹೆಚ್‌ಡಿಪಿ ಪರೋಕ್ಷವಾಗಿ ಗುತ್ತಿಗೆದಾರರಿಗೆ ಅನುಕೂಲ ಮಾಡಿತು, (**ಅನುಬಂಧ–5.4**).

ಯೋಜನೆಗಳ ತ್ವರಿತ ಕಾರ್ಯಗತಗೊಳಿಸುವಿಕೆಯನ್ನು ಬೆಂಬಲಿಸಲು ಟೆಂಡರ್ ದಾಖಲೆಗಳನ್ನು ಮಾರ್ಪಡಿಸಲಾಗಿದೆ ಮತ್ತು ಗುತ್ತಿಗೆದಾರರಿಗೆ ಗುತ್ತಿಗೆ ಬೆಲೆಯ ಶೇಕಡಾ 5ರಷ್ಟು ಹೆಚ್ಚುವರಿ ಸಿದ್ಧತಾ ಮುಂಗಡವನ್ನು ವಿಸ್ತರಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಆಗಸ್ಟ್ 2022).

ಹಣಕಾಸು ಇಲಾಖೆಯು ಅನುಮೋದಿಸಿದ (2008) ಎಸ್‌ಬಿಡಿ ವ್ಯಾಪ್ತಿಯನ್ನು ಮೀರಿ ಶೇಕಡಾ 5ರಷ್ಟು ಹೆಚ್ಚುವರಿ ಸಿದ್ಧತಾ ಮುಂಗಡವನ್ನು ಮಂಜೂರು ಮಾಡಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

5.3 ಗುತ್ತಿಗೆದಾರರಿಂದ ಅಸಮರ್ಪಕ ಕಾರ್ಯಕ್ಷಮತಾ ಭದ್ರತೆಗಳು

ಯಶಸ್ವಿ ಬಿಡ್ದುದಾರರು ಒಪ್ಪಿಗೆ ಪತ್ರವನ್ನು ಸ್ವೀಕರಿಸಿದ ನಂತರ 20 ದಿನಗಳೊಳಗೆ ಒಪ್ಪಂದದ ಬೆಲೆಯ ಶೇಕಡಾ ಐದರಷ್ಟು ಕಾರ್ಯಕ್ಷಮತಾ ಭದ್ರತೆ ಮತ್ತು ಅಸಮತೋಲಿತ ಬಿಡ್‌ಗಳಿಗೆ ಹೆಚ್ಚುವರಿ ಭದ್ರತೆಯನ್ನು ಉದ್ಯೋಗದಾತರಿಗೆ ನೀಡಬೇಕೆಂದು ಎಸ್‌ಟಿಡಿ ನಿಗದಿಪಡಿಸುತ್ತದೆ[1]. ಅಂತಹ ಭದ್ರತೆಯು ಕಾಮಗಾರಿಯ

[1] ಟೆಂಡರ್‌ದಾರರಿಗೆ ನೀಡುವ ಸೂಚನೆಯ ಅನುಚ್ಛೇದ 29

ಡಿಎಲ್‌ಪಿಯ ಅವಧಿ ಪೂರ್ಣಗೊಳ್ಳುವವರೆಗೆ ಮಾನ್ಯವಾಗಿರುತ್ತದೆ. ಭದ್ರತೆಗಳಿಗೆ ಸಂಬಂಧಿಸಿದಂತೆ ಗಮನಿಸಲಾದ ವಿವಿಧ ರೀತಿಯ ಅಕ್ರಮಗಳನ್ನು ಕೆಳಗೆ ಚರ್ಚಿಸಲಾಗಿದೆ:

- ₹171.79 ಕೋಟಿ ಗುತ್ತಿಗೆ ಮೌಲ್ಯದ 25 ಕಾಮಗಾರಿಗಳಲ್ಲಿ ₹6.85 ಕೋಟಿ ಮೊತ್ತದ ಕಾರ್ಯಕ್ಷಮತಾ ಖಾತರಿಯನ್ನು ಪರಿಶೀಲನೆಗಾಗಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗಿಲ್ಲ.
- ವ್ಯತ್ಯಯದ ವಸ್ತುಗಳಿಗೆ ತೆಗೆದುಕೊಳ್ಳಬೇಕಾದ ಹೆಚ್ಚುವರಿ ಕಾರ್ಯಕ್ಷಮತಾ ಭದ್ರತೆಗೆ ಸಂಬಂಧಿಸಿದಂತೆ, ನಾಲ್ಕು ಪ್ರಕರಣಗಳಲ್ಲಿ ₹ 8.19 ಕೋಟಿ ವೆಚ್ಚದ ವ್ಯತ್ಯಯದ ವಸ್ತುಗಳಿಗೆ ₹0.41 ಕೋಟಿಯಷ್ಟು ಭದ್ರತೆಯನ್ನು ಪಡೆದಿಲ್ಲದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.
- ಅಸಮತೋಲಿತ ಟೆಂಡರ್‌ಗಳಿಗೆ ಪಡೆದ ಭದ್ರತಾ ಠೇವಣಿಗೆ ಸಂಬಂಧಿಸಿದಂತೆ, ಹತ್ತು ಪ್ರಕರಣಗಳಲ್ಲಿ ₹1.72 ಕೋಟಿ ಮೊತ್ತದ ಬ್ಯಾಂಕ್ ಖಾತರಿಗಳನ್ನು ಪಡೆಯದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.
- ₹428.36 ಕೋಟಿ ಮೌಲ್ಯದ 80 ಒಪ್ಪಂದಗಳಿಗೆ ಗುತ್ತಿಗೆದಾರರು ಭದ್ರತೆ ರೂಪದಲ್ಲಿ ಸಲ್ಲಿಸಿದ ₹20.43 ಕೋಟಿ ಮೊತ್ತದ ಬ್ಯಾಂಕ್ ಖಾತರಿಗಳು ಡಿಎಲ್‌ಪಿಗೆ ಮೊದಲೇ ಲೋಪವಾಗಿದ್ದವು. ಈ ತರಹ ಮುಂಚೆಯೇ ಲೋಪವಾಗಿದ್ದ ದಿನಗಳು 76ರಿಂದ 575ರ ವ್ಯಾಪ್ತಿಯಲ್ಲಿದ್ದಿತು.
- 27.12.2016ರ ಕೇಂದ್ರೀಯ ಜಾಗೃತಾ ದಳದ (ಸಿವಿಸಿ) ಸುತ್ತೋಲೆಯ ಪ್ರಕಾರ, ಬ್ಯಾಂಕ್ ಖಾತರಿಗಳನ್ನು ಸಂಬಂಧಿಸಿದ ಬ್ಯಾಂಕ್‌ಗಳ ವಲಯ ಕಚೇರಿಗಳು ಮಾತ್ರ ದೃಢೀಕರಿಸಬೇಕು ಮತ್ತು ವಿತರಣೆಯ ಬ್ಯಾಂಕ್‌ನ ಶಾಖೆಯಿಂದ ಅಲ್ಲ. 248 ಪ್ರಕರಣಗಳಲ್ಲಿ ₹1438.22 ಕೋಟಿ ಗುತ್ತಿಗೆ ಮೌಲ್ಯಕ್ಕೆ ಸಂಬಂಧಿಸಿದಂತೆ ಪಡೆದ ₹70.38 ಕೋಟಿ ಮೊತ್ತದ ಬ್ಯಾಂಕ್ ಖಾತರಿಗಳನ್ನು ಬ್ಯಾಂಕ್‌ನ ವಲಯ ಕಛೇರಿಗಳು ದೃಢೀಕರಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.
- ಮೂರು ಪ್ರಕರಣಗಳಲ್ಲಿ, ಗುತ್ತಿಗೆದಾರರು ಠೇವಣಿ ಮಾಡಿದ ಭದ್ರತೆಗಳು ₹0.63 ಕೋಟಿಗಳಷ್ಟು ಕಡಿಮೆ ಮೊತ್ತದ್ದಾಗಿದ್ದವು.

ಹೀಗೆ, ವಿಭಾಗೀಯ ಅಧಿಕಾರಿಗಳು ಹಣಕಾಸಿನ ನಿಯಮಗಳು ಮತ್ತು ಒಪ್ಪಂದದ ನಿಬಂಧನೆಗಳನ್ನು ಉಲ್ಲಂಘಿಸಿದ್ದರು ಮತ್ತು ಗುತ್ತಿಗೆದಾರರಿಗೆ ಅನುಚಿತ ಲಾಭವನ್ನು ಒದಗಿಸುವುದರ ಜೊತೆಗೆ ಸರ್ಕಾರದ ಹಿತಾಸಕ್ತಿಯನ್ನು ಕಾಪಾಡಲಿಲ್ಲ. ವಿವರಗಳನ್ನು **ಅನುಬಂಧ–5.5**ರಲ್ಲಿ ತೋರಿಸಲಾಗಿದೆ.

25 ಕಾಮಗಾರಿಗಳ ಪೈಕಿ 8 ಕಾಮಗಾರಿಗಳಲ್ಲಿ ಬ್ಯಾಂಕ್ ಖಾತರಿಗಳನ್ನು ಪಡೆಯಲಾಗಿದೆ ಮತ್ತು ಮುಂದಿನ ಲೆಕ್ಕಪರಿಶೋಧನೆಯ ಸಮಯದಲ್ಲಿ ಅದನ್ನು ಸಲ್ಲಿಸಲಾಗುವುದು ಎಂದು ಸರ್ಕಾರವು ತಿಳಿಸಿತು (ಆಗಸ್ಟ್ 2022). ಇದರಿಂದ ಉಳಿದ 17 ಪ್ರಕರಣಗಳಲ್ಲಿ ಬ್ಯಾಂಕ್ ಖಾತರಿಗಳನ್ನು ಪಡೆದಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಸಿವಿಸಿ ಮಾರ್ಗಸೂಚಿಗಳಿಗೆ ಬದ್ಧವಾಗಿರುವುದಕ್ಕೆ ಸಂಬಂಧಿಸಿದಂತೆ ಸಿವಿಸಿ "ಡಿ–ಕೋಡ್"ನ ಭಾಗವಲ್ಲ ಎಂದು ತಿಳಿಸಲಾಯಿತು. ಇತರ ರಾಜ್ಯಗಳಲ್ಲಿ ಅನುಸರಿಸುತ್ತಿರುವ ಸಿವಿಸಿ ಮಾರ್ಗಸೂಚಿಗಳನ್ನು ಸರ್ಕಾರದ ಹಿತಾಸಕ್ತಿಗಳನ್ನು ಕಾಪಾಡಲು ಲೋಕೋಪಯೋಗಿ ಇಲಾಖೆ ಉತ್ತಮ ಅಭ್ಯಾಸವಾಗಿ ಅನುಸರಿಸಬೇಕಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

5.4 ಒಡ್ಡು ಹಾಕಲು ಬಳಸಿದ ಭೂಮಿಯ ಮೇಲೆ ಗೌರವಧನವನ್ನು ವಸೂಲು ಮಾಡದಿರುವುದು

2018–19ನೇ ಸಾಲಿನ ದರಪಟ್ಟಿಯ ಪ್ರಕಾರ, "ರಸ್ತೆ ಅಗೆತದಿಂದ ನೀವೇಶನದಲ್ಲಿ ಹಾಕಿರುವ ಅನುಮೋದಿತ ವಸ್ತುಗಳೊಂದಿಗೆ ಒಡ್ಡು ನಿರ್ಮಾಣ" ದಲ್ಲಿ ಮಣ್ಣಿನ ವೆಚ್ಚವನ್ನು ಪ್ರತಿ ಚದರ ಮೀಟರ್‌ಗೆ ₹30 ಎಂದು ನಿಗದಿಪಡಿಸಲಾಗಿದೆ. ಕಾಮಗಾರಿಗೆ ಬಳಸಲಾದ ಲಭ್ಯವಿರುವ ಮಣ್ಣಿನ ಈ ವೆಚ್ಚವು ಮಣ್ಣಿನ ಮೇಲೆ ಪಾವತಿಸಬೇಕಾದ ಗೌರವಧನದ ಮೊತ್ತವಾಗಿದೆ. ಅಲ್ಲದೆ, ದರಪಟ್ಟಿಯ ಭಾಗವಾಗಿರುವ ಸಾಮಾನ್ಯ ಟಿಪ್ಪಣಿಗಳು (ಕಂಡಿಕೆ–26) ಲಭ್ಯವಿರುವ ಮಣ್ಣನ್ನು ಬಳಸಿಕೊಂಡು ಒಡ್ಡಿನ ನಿರ್ಮಾಣದಲ್ಲಿ ಗೌರವಧನದ ಶುಲ್ಕಗಳನ್ನು ಕಡಿತಗೊಳಿಸಬೇಕೆಂದು ಷರತ್ತು ವಿಧಿಸಿದೆ.

ಆದರೂ ಆಯ್ಕೆಮಾಡಿದ 25 ಕಾಮಗಾರಿಗಳಲ್ಲಿ (ಪಿಡಬ್ಲ್ಯುಡಿ ಮಂಗಳೂರು, ಬೀದರ್ ಮತ್ತು ಮಂಡ್ಯ ವಿಭಾಗಗಳು ಮತ್ತು ಎಸ್ಎಚ್ಡಿಪಿ) 152237.98 ಚದರ ಮೀಟರ್ ಅಗೆದ ಮಣ್ಣನ್ನು ಒಡ್ಡುಗಳಲ್ಲಿ ಬಳಸಲಾಗಿರುವುದನ್ನು ಮತ್ತು **ಅನುಬಂಧ–5.6ರಲ್ಲಿ** ತೋರಿಸಿರುವಂತೆ ₹0.46 ಕೋಟಿ ಮೊತ್ತದ ಗೌರವಧನ ಶುಲ್ಕವನ್ನು ಗುತ್ತಿಗೆದಾರರ ಬಿಲ್ಗಳಿಂದ ಕಡಿತಗೊಳಿಸದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಗೌರವಧನವನ್ನು ವಸೂಲು ಮಾಡುವುದಾಗಿ ಸರ್ಕಾರವು ತಿಳಿಸಿತು (ಆಗಸ್ಟ್ 2022).

5.5 ಇ–ಮಾಪನ ಪುಸ್ತಕ

ಮಾಪನ ಪುಸ್ತಕವು ಗುತ್ತಿಗೆಗಳಲ್ಲಿನ ಕಾಮಗಾರಿಗಳ ಅಳತೆಯಾಗಿದೆ. ಮಾಪನ ಪುಸ್ತಕವು ಕಾಮಗಾರಿಗಳ ಲೆಕ್ಕಪತ್ರಗಳನ್ನು ನಿರ್ವಹಿಸುತ್ತದೆ. ಇದು ಕಾರ್ಯಗತಗೊಳಿಸಿದ ಕಾಮಗಾರಿಗಳ ಪರಿಮಾಣಗಳ ಎಲ್ಲಾ ಲೆಕ್ಕಪತ್ರಗಳ ಆಧಾರವಾಗಿದೆ ಮತ್ತು ನ್ಯಾಯಾಲಯದಲ್ಲಿ ನಿರ್ಣಾಯಕ ಪುರಾವೆಗಳಂತಹ ಸತ್ಯಗಳ ಸಂಪೂರ್ಣ ದಾಖಲೆಯನ್ನು ಅದು ಹೊಂದಿರಬೇಕು. ಅಲ್ಲದೆ, ಕಾರ್ಯಗತಗೊಳಿಸಿದ ಕಾಮಗಾರಿಗಳಿಗೆ ಪ್ರತಿಯಾಗಿ ಎಲ್ಲಾ ಪಾವತಿಗಳನ್ನು ಈ ವ್ಯವಸ್ಥೆಯಲ್ಲಿ ನಿರ್ವಹಿಸಲಾಗುತ್ತದೆ.

ಇ–ಪ್ರೊಕ್ಯೂರ್ಮೆಂಟ್ ಪ್ಲಾಟ್ಫಾರ್ಮ್ ಮಾಪನದ ತಾಕ್ಷಣಿಕ ಸಲ್ಲಿಕೆಗೆ ಅವಕಾಶ ಒದಗಿಸುತ್ತದೆ. ವೆಬ್–ಆಧಾರಿತ ಪ್ರಾಜೆಕ್ಟ್ ಮ್ಯಾನೇಜ್ಮೆಂಟ್ ವ್ಯವಸ್ಥೆಯನ್ನು ಬಳಸಿಕೊಂಡು, ಗುತ್ತಿಗೆದಾರರು ಅವರಿಗೆ ನೀಡಿದ ಬಳಕೆದಾರ ಹೆಸರು ಮತ್ತು ಪಾಸ್ವರ್ಡ್ನೊಂದಿಗೆ ಲಾಗಿನ್–ಆಧಾರಿತ ಅನುಮತಿಗಳ ಮೂಲಕ ಪ್ರಗತಿಯನ್ನು ವರದಿ ಮಾಡಬಹುದು. ಅಂದರೆ ಪಿಎಮ್ಎಸ್ ಬಳಕೆದಾರರು ರಚಿಸಿದ ಮಾಹಿತಿಯನ್ನು ಇತರರು ಪ್ರವೇಶಿಸಲು ಅಥವಾ ತೆಗೆದುಹಾಕಲು/ಇಂದೀಕರಿಸಲು ಸಾಧ್ಯವಿಲ್ಲ. ಈ ಪ್ರಗತಿಯನ್ನು ವೆಬ್ ಪ್ರವೇಶದ ಮೂಲಕ ಸೈಟ್ ಎಂಜಿನಿಯರ್ ಸ್ವೀಕರಿಸಬಹುದು/ತಿರಸ್ಕರಿಸಬಹುದು. ಸೈಟ್ ಎಂಜಿನಿಯರ್ರವರು ಪ್ರಗತಿಯನ್ನು ಒಪ್ಪಿಕೊಂಡ ನಂತರ ಗುತ್ತಿಗೆದಾರರು ಬಿಲ್ಲನ್ನು ರಚಿಸಬಹುದು ಮತ್ತು ಸಲ್ಲಿಸಬಹುದು. ದಿನಾಂಕ 18.01.2005ರ ಸರ್ಕಾರೀ ಆದೇಶದ ಅನ್ವಯ ₹25 ಲಕ್ಷಕ್ಕಿಂತ ಹೆಚ್ಚಿನ ಮೌಲ್ಯದ ಎಲ್ಲಾ ಕಾಮಗಾರಿಗಳ ಗುತ್ತಿಗೆಗಳಿಗೆ ಇ–ಎಂಬಿ ಯನ್ನು ಕಡ್ಡಾಯಗೊಳಿಸಲಾಗಿದೆ. ಈ ಬಿಲ್ಲನ್ನು ಕ್ರಾಸ್–ಚೆಕ್ ಮಾಡಬಹುದು ಮತ್ತು ವರ್ಕ್ ಸ್ಲಿಪ್/ಮಾರ್ಪಾಡು ಏನಾದರೂ ಇದ್ದಲ್ಲಿ ಅನುಮೋದನೆಗಾಗಿ ಸಲ್ಲಿಸಬಹುದು. ಬಿಲ್ಗಳ ಸ್ಥಿತಿಯನ್ನು ಯಾವುದೇ ಸಮಯದಲ್ಲಿಯೂ ತಿಳಿದುಕೊಳ್ಳಬಹುದು. ಬಿಲ್ಲನ್ನು ಅನುಮೋದಿಸಿದ ನಂತರ ಪಾವತಿಯನ್ನು ಪಡೆಯಲು ಗುತ್ತಿಗೆದಾರರಿಗೆ ಮೇಲ್ ಕಳುಹಿಸಲಾಗುತ್ತದೆ.

ಆಯ್ದ ಎಲ್ಲಾ ವಿಭಾಗಗಳಲ್ಲಿನ ದಾಖಲೆಗಳ ಲೆಕ್ಕಪರಿಶೋಧನಾ ಪರಿಶೀಲನೆಯು ಇ–ಪ್ರೊಕ್ಯೂರ್ಮೆಂಟ್ ಪ್ಲಾಟ್ಫಾರ್ಮ್ನಲ್ಲಿ ತಾಕ್ಷಣಿಕ ಪ್ರಗತಿ ವರದಿಯನ್ನು ಇನ್ನೂ ಕಡ್ಡಾಯಗೊಳಿಸಿರಲಿಲ್ಲ ಹಾಗೂ ನಿರ್ವಹಿಸಿದ ಕಾಮಗಾರಿಗಳ ಅಳತೆಗಳನ್ನು ತಿದ್ದುವ ಅಪಾಯವಿರುವ ಎಕ್ಸೆಲ್ ಸ್ಪ್ರೆಡ್ಶೀಟ್ಗಳಲ್ಲಿ ದಾಖಲಿಸಲಾಗುತ್ತಿತ್ತು ಎಂದು ತಿಳಿದುಬಂದಿತು.

ಶಿಫಾರಸು–13: ಇ–ಪ್ರೊಕ್ಯೂರ್ಮೆಂಟ್ ಪ್ಲಾಟ್ಫಾರ್ಮ್ನಲ್ಲಿ ಕಾಮಗಾರಿಯ ಪ್ರಗತಿಯನ್ನು ತಾಕ್ಷಣಿಕವಾಗಿ ವರದಿ ಮಾಡುವುದನ್ನು ಸರ್ಕಾರವು ಕಡ್ಡಾಯ ಮಾಡಬೇಕು. ಇದರಿಂದಾಗಿ ಕಾಮಗಾರಿಯ ಎಲ್ಲಾ ಅಳತೆಗಳನ್ನು ಅಪ್ಲಿಕೇಶನ್ನಲ್ಲಿ ದಾಖಲಿಸಿದಂತಾಗುತ್ತದೆ ಮತ್ತು ಪಾರದರ್ಶಕತೆಯನ್ನು ಕಾಪಾಡಿಕೊಳ್ಳಲು ಇ–ಪಾವತಿಯನ್ನು ಸಕ್ರಿಯಗೊಳಿಸುತ್ತದೆ

ಇದನ್ನು ಸರ್ಕಾರಕ್ಕೆ ತಿಳಿಸಿದ ನಂತರ, ನಿರ್ಗಮನ ಸಭೆಯಲ್ಲಿ (ಏಪ್ರಿಲ್ 2022) ಸರ್ಕಾರವು ಇ–ಪ್ರೊಕ್ಯೂರ್ಮೆಂಟ್ ಪ್ಲಾಟ್ಫಾರ್ಮ್ನಲ್ಲಿ ಕಾಮಗಾರಿಗಳ ಪ್ರಗತಿಯ (ಇ–ಮಾಪನ ಮತ್ತು ಇ–ಪಾವತಿಗಳು) ತಾಕ್ಷಣಿಕ ವರದಿಯನ್ನು ಇನ್ನೂ ಸಕ್ರಿಯಗೊಳಿಸಬೇಕಾಗಿದೆ ಎಂದು ತಿಳಿಸಿತು. ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್ನ ಹಂತ–IIರಲ್ಲಿ ಅದನ್ನು ಮಾಡಲಾಗುವುದು ಎಂದು ತಿಳಿಸಲಾಯಿತು.

ಅಧ್ಯಾಯ 06

ಗುಣಮಟ್ಟ ನಿಯಂತ್ರಣ ಮತ್ತು ಮಾನವ ಸಂಪನ್ಮೂಲ

ಅಧ್ಯಾಯ – 6

ಗುಣಮಟ್ಟ ನಿಯಂತ್ರಣ ಮತ್ತು ಮಾನವ ನಿಯಂತ್ರಣ

ಗುತ್ತಿಗೆದಾರರಿಂದ ಕ್ಷೇತ್ರೀಯ ಪ್ರಯೋಗಶಾಲೆಗಳನ್ನು ಸ್ಥಾಪಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಇಲಾಖೆಯು ವಿಫಲವಾಗಿತ್ತು ಮತ್ತು ಗುಣಮಟ್ಟದ ವಸ್ತುಗಳ ಬಳಕೆ ಮತ್ತು ಗುಣಮಟ್ಟದ ಕಾಮಗಾರಿಗಳನ್ನು ಕಾರ್ಯಗತಗೊಳಿಸಿರುವುದನ್ನು ಖಚಿತಪಡಿಸಿಕೊಳ್ಳಲು ಪರೀಕ್ಷಾ ವರದಿಗಳಿಲ್ಲದೆ ಬಿಲ್‌ಗಳನ್ನು ಪಾವತಿಸಲಾಗುತ್ತಿತ್ತು. ಪರೀಕ್ಷಾ–ತನಿಖೆ ನಡೆಸಿದ ಯಾವುದೇ ಕಾಮಗಾರಿಯನ್ನು ಮೂರನೇ ವ್ಯಕ್ತಿಯ ತಪಾಸಣೆಗೆ ಒಳಪಡಿಸಿರಲಿಲ್ಲ.

ಗುತ್ತಿಗೆದಾರರು ಮತ್ತು ಅಧಿಕಾರವ್ಯಾಪ್ತಿಯ ಕಾರ್ಯನಿರ್ವಾಹಕ ಇಂಜಿನಿಯರ್‌ಗಳು ಪ್ರಾಥಮಿಕವಾಗಿ ಕಾಮಗಾರಿಗಳ ಗುಣಮಟ್ಟದ ಕಾರ್ಯಗತಗೊಳಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು ಹೊಣೆಗಾರರಾಗಿರುತ್ತಾರೆ. ಕ್ವಾಲಿಟಿ ಅಶ್ಯೂರೆನ್ಸ್ (ಕ್ಯೂಎ) ವಿಭಾಗಗಳು ಕಾಮಗಾರಿಯ ಸ್ಥಳದಲ್ಲಿ ಎಮ್‌ಒಆರ್‌ಟಿಹೆಚ್ ಸೂಚಿಸಿದಂತೆ ಕನಿಷ್ಠ ಅಗತ್ಯವಿರುವ ಶೇಕಡಾ 10ರಷ್ಟನ್ನು ಮತ್ತು ಗುಣಮಟ್ಟ ನಿಯಂತ್ರಣ ಉದ್ದೇಶಗಳಿಗಾಗಿ ಕಾಮಗಾರಿಯ ದಾಖಲೆಗಳ ಪರೀಕ್ಷೆಗಳನ್ನು ನಡೆಸಲು ಹೊಣೆಗಾರರಾಗಿರುತ್ತಾರೆ. ಗುತ್ತಿಗೆದಾರರು ನಿರ್ಮಾಣದ ಸಮಯದಲ್ಲಿ ಬಳಸಿದ ವಸ್ತುಗಳನ್ನು ಪರೀಕ್ಷಿಸಲು ಕ್ಷೇತ್ರೀಯ ಪ್ರಯೋಗಶಾಲೆಯನ್ನು ಸ್ಥಾಪಿಸಬೇಕು ಮತ್ತು ಆಯಾ ಕ್ಯೂಎ ವಿಭಾಗಗಳು/ಉಪ–ವಿಭಾಗಗಳು ನೀಡಿದ ಗುಣಮಟ್ಟದ ಭರವಸೆ ಕಾರ್ಯಕ್ರಮದಲ್ಲಿ ಸೂಚಿಸಿದಂತೆ ನಿಗದಿತ ಆವರ್ತನದಲ್ಲಿ ನಿಗದಿತ ಪರೀಕ್ಷೆಗಳನ್ನು ನಡೆಸಬೇಕು ಎಂದು ಒಪ್ಪಂದದ ಷರತ್ತುಗಳಲ್ಲಿ ಸೂಚಿಸಲಾಗಿದೆ. ಈ ಅಧ್ಯಾಯದಲ್ಲಿ ನಿಯಮಿತ ನಿಗದಿತ ನಿವೇಶನ ಪರೀಕ್ಷೆ, ಇಲಾಖಾ ಪ್ರಯೋಗಶಾಲೆ ಪರೀಕ್ಷೆ ಮತ್ತು ನಿರ್ಮಾಣ ಕಾಮಗಾರಿಗಳ ಮೂರನೇ ವ್ಯಕ್ತಿಯ ತಪಾಸಣೆಗಳ ಮೂಲಕ ಗುಣಮಟ್ಟವನ್ನು ಖಾತರಿಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲಾಗಿದೆ.

6.1 ಕ್ಷೇತ್ರೀಯ ಪ್ರಯೋಗಶಾಲೆಗಳನ್ನು ಸ್ಥಾಪಿಸದಿರುವುದು

ಐಆರ್‌ಸಿ ಮಾನದಂಡಗಳ ಪ್ರಕಾರ ನಿರ್ಮಾಣದ ಸಮಯದಲ್ಲಿ ಬಳಸಿದ ವಸ್ತುಗಳನ್ನು ಪರೀಕ್ಷಿಸಲು ಗುತ್ತಿಗೆದಾರರು ಕಾಮಗಾರಿಯ ಸ್ಥಳದಲ್ಲಿ ಪ್ರಯೋಗಶಾಲೆಯನ್ನು ಸ್ಥಾಪಿಸಬೇಕು ಎಂದು ಗುತ್ತಿಗೆ ಒಪ್ಪಂದವು ನಿಗದಿಪಡಿಸುತ್ತದೆ. ಕ್ಷೇತ್ರೀಯ ಪ್ರಯೋಗಶಾಲೆಯು ಗುತ್ತಿಗೆ ಒಪ್ಪಂದದಲ್ಲಿ ನಿರ್ದಿಷ್ಟಪಡಿಸಿದಂತೆ ಉಪಕರಣಗಳನ್ನು ಹೊಂದಿರಬೇಕು ಮತ್ತು ಕಾಮಗಾರಿಯ ಸ್ಥಳದಲ್ಲಿ ಗುಣಮಟ್ಟದ ಪರೀಕ್ಷೆಗಳನ್ನು ನಡೆಸಲಾಗಿದೆ ಎಂಬುದಕ್ಕೆ ಪುರಾವೆಗಳನ್ನು ಒದಗಿಸಬೇಕು. ಗುತ್ತಿಗೆದಾರರು ಕ್ಷೇತ್ರೀಯ ಪ್ರಯೋಗಶಾಲೆಗಳನ್ನು ಸ್ಥಾಪಿಸಲಾಗಿದೆ ಎಂದು ಕ್ಯೂಎ ಉಪವಿಭಾಗದಿಂದ ಪ್ರಮಾಣಪತ್ರವನ್ನು ಒದಗಿಸದ

ಹೊರತು ನಿರ್ಮಾಣ ವಿಭಾಗಗಳು 1ನೇ ಆರ್‌ಎ ಬಿಲ್ಲನ್ನು ಪಾವತಿಸಬಾರದು ಎಂದು ಸರ್ಕಾರವು ನಿರ್ದೇಶಿಸಿತ್ತು (2014).

ಆದರೆ, 333 ಪ್ರಕರಣಗಳಲ್ಲಿ ಗುತ್ತಿಗೆದಾರರು ಕಾಮಗಾರಿ ನಿವೇಶನದಲ್ಲಿ ಕ್ಷೇತ್ರೀಯ ಪ್ರಯೋಗಶಾಲೆಗಳನ್ನು ಸ್ಥಾಪಿಸಿರಲಿಲ್ಲ ಎಂದು ಸಂಬಂಧಪಟ್ಟ ಕ್ಯೂಎ ಉಪವಿಭಾಗಗಳಿಂದ ತಿಳಿದುಬಂದಿತು ಮತ್ತು ಅನುಬಂಧ–6.1ರಲ್ಲಿ ತೋರಿಸಿರುವಂತೆ, ಸರ್ಕಾರದ ಸೂಚನೆಗಳಿಗೆ ವಿರುದ್ಧವಾಗಿ ವಿಭಾಗಗಳು ಗುತ್ತಿಗೆದಾರರಿಗೆ ₹1,480.37 ಕೋಟಿಯನ್ನು ಪಾವತಿ ಮಾಡಿದ್ದವು. ಅಲ್ಲದೆ, ಕ್ಷೇತ್ರೀಯ ಪ್ರಯೋಗಶಾಲೆಗಳಿಗೆ ಅಗತ್ಯವಿರುವ ಕನಿಷ್ಠ ಸಂಖ್ಯೆಯ ಉಪಕರಣಗಳು ಮತ್ತು ತಾಂತ್ರಿಕ ಸಿಬ್ಬಂದಿಯನ್ನು ಬಿಡ್ ಡಾಕ್ಯುಮೆಂಟ್‌ನಲ್ಲಿ ವಿಭಾಗಗಳು ಸೂಚಿಸಿರಲಿಲ್ಲ.

ಕಾಮಗಾರಿಯ ನಿವೇಶನದಲ್ಲಿ ಪ್ರಯೋಗಶಾಲೆಯನ್ನು ಸ್ಥಾಪಿಸಲಾಗಿದೆ ಎಂದು ಹೇಳಿದೆ ಎಂದು ಸರ್ಕಾರವು ತಿಳಿಸಿತು (ಆಗಸ್ಟ್ 2022). ಪರೀಕ್ಷಾ–ತನಿಖೆ ನಡೆಸಿದ ಕಾಮಗಾರಿಗಳಲ್ಲಿ ನಿವೇಶನ ಪ್ರಯೋಗಶಾಲೆಗಳನ್ನು ಸ್ಥಾಪಿಸಲಾಗಿಲ್ಲ ಎಂದು ಕ್ಯೂಎ ಉಪ–ವಿಭಾಗಗಳು ತಿಳಿಸಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

ಶಿಫಾರಸು–14: ಕ್ಷೇತ್ರೀಯ ಪ್ರಯೋಗಶಾಲೆಗಳನ್ನು ಸ್ಥಾಪಿಸದ ಮತ್ತು ಅಗತ್ಯವಿದ್ದ ಪರೀಕ್ಷಾ ವರದಿಗಳನ್ನು ಸಲ್ಲಿಸದ ಗುತ್ತಿಗೆದಾರರ ಕಾರ್ಯಕ್ಷಮತೆ ಬ್ಯಾಂಕ್ ಖಾತರಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಸರ್ಕಾರವು ಅಗತ್ಯ ಆದೇಶಗಳನ್ನು ನೀಡಬೇಕು ಮತ್ತು ಸಂಹಿತೆಯ ನಿಬಂಧನೆಗಳನ್ನು ಅನುಸರಿಸಲು ವಿಫಲವಾದ ಇಇಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು.

6.2 ಪರೀಕ್ಷಾ–ವರದಿಗಳಿಲ್ಲದೇ ಬಿಲ್‌ಗಳನ್ನು ಪಾವತಿ ಮಾಡಿರುವುದು

ಕೆಪಿಡಬ್ಲ್ಯೂಡಿ ಸಂಹಿತೆಯ ಕಂಡಿಕೆ–119ರ ಪ್ರಕಾರ ಗುತ್ತಿಗೆದಾರರು ಮಾದರಿಗಳ ಪರೀಕ್ಷಾ ವರದಿಗಳನ್ನು ಬಿಲ್‌ಗಳೊಂದಿಗೆ ಕಡ್ಡಾಯವಾಗಿ ಲಗತ್ತಿಸಬೇಕು ಮತ್ತು ಪರೀಕ್ಷಾ ವರದಿಗಳು ಗುಣಮಟ್ಟವನ್ನು ಖಾತರಿ ಪಡಿಸುವವರೆಗೆ ಪಾವತಿಗಳನ್ನು ಮಾಡಬಾರದು.

ಗುಣಮಟ್ಟ ಭರವಸೆ ಯೋಜನೆ, ಕ್ಯೂಎ/ಕ್ಯೂಸಿ ಪರೀಕ್ಷಾ ವರದಿಗಳು ಲಭ್ಯವಿರದಿರುವುದು ಮುಂತಾದ ಗುಣಮಟ್ಟಕ್ಕೆ ಸಂಬಂಧಿಸಿದ ಹಲವಾರು ನಿಯತಾಂಕಗಳಲ್ಲಿ ನ್ಯೂನತೆಗಳಿದ್ದರೂ ಸಹ ಒಂಬತ್ತು[1] ಪರೀಕ್ಷಾ–ತನಿಖೆ ವಿಭಾಗಗಳಲ್ಲಿ 499 ಕಾಮಗಾರಿಗಳ ಪೈಕಿ 174 ಕಾಮಗಾರಿಗಳಲ್ಲಿ ಗುತ್ತಿಗೆದಾರರಿಗೆ ₹708.98 ಕೋಟಿ ಮೊತ್ತದ ಕಾಮಗಾರಿ ಬಿಲ್‌ಗಳನ್ನು ಪಾವತಿಸಿರುವುದು ಗಮನಕ್ಕೆ ಬಂದಿದೆ. ವಿವರಗಳನ್ನು ಅನುಬಂಧ–6.2ರಲ್ಲಿ ನೀಡಲಾಗಿದೆ.

[1] ಶಿವಮೊಗ್ಗ, ಕೋಲಾರ, ತುಮಕೂರು, ಚಿಕ್ಕಮಗಳೂರು, ಸಿಸಿ ಮತ್ತು ಕಲಬುರಗಿ

ಹೀಗೆ, ಇಲಾಖಾ ನಿಯಮಾವಳಿಗಳನ್ನು ಇಇಗಳು ಕಡೆಗಣಿಸಿದ್ದರಿಂದ ಗುತ್ತಿಗೆದಾರರಿಗೆ ಲಾಭವಾಗುವಲ್ಲಿ ಪರಿಣಮಿಸಿತು. ಅಲ್ಲದೆ, ಗುಣಮಟ್ಟವಿಲ್ಲದ ವಸ್ತುಗಳ ಬಳಕೆಯು ಕಳಪೆ ಗುಣಮಟ್ಟದ ರಸ್ತೆಗಳಿಗೆ ಕಾರಣವಾಗಬಹುದು ಮತ್ತು ತತ್ಪರಿಣಾಮವಾಗಿ ರಸ್ತೆಗಳ ಅಕಾಲಿಕ ವೈಫಲ್ಯತೆಯನ್ನೂ ಸಹ ತಳ್ಳಿಹಾಕಲಾಗುವುದಿಲ್ಲ.

ಗುತ್ತಿಗೆದಾರರ ಬಿಲ್‌ಗಳನ್ನು ಒಪ್ಪಿಕೊಳ್ಳುವ ಮೊದಲು ಕ್ಯೂಎ ಮಾನದಂಡಗಳನ್ನು ಅನುಸರಿಸಲು ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಗೆ ಅಗತ್ಯ ಸೂಚನೆಗಳನ್ನು ನೀಡಲಾಗುವುದು ಎಂದು ನಿರ್ಗಮನ ಸಭೆಯಲ್ಲಿ ಸರ್ಕಾರವು ತಿಳಿಸಿತು (ಏಪ್ರಿಲ್ 2022).

ಶಿಫಾರಸು–15: ಗುಣಮಟ್ಟ ನಿಯಂತ್ರಣ/ಪರೀಕ್ಷಾ ವರದಿಗಳನ್ನು ಖಚಿತಪಡಿಸಿಕೊಳ್ಳದೇ ಗುತ್ತಿಗೆದಾರರಿಗೆ ಪಾವತಿ ಮಾಡುವ ಅಧಿಕಾರಿಗಳ ಮೇಲೆ ಹೊಣೆಗಾರಿಕೆಯನ್ನು ನಿಗದಿಪಡಿಸಲು ಸರ್ಕಾರವು ಆದೇಶಗಳನ್ನು ಹೊರಡಿಸಬೇಕು.

6.3 ಗುನಮಟ್ಟ ನಿಯಂತ್ರಣದಲ್ಲಿ ಇಲಾಖಾ ಅಧಿಕಾರಿಗಳಿಂದ ಮೇಲ್ವಿಚಾರಣೆಯ ಕೊರತೆ

ಐಆರ್‌ಸಿ ಎಸ್‌ಪಿ–57, 2000ತ ಕ್ರಮಸಂಖ್ಯೆ.4.2, ಕೋಷ್ಟಕ–3.1, ಷರತ್ತು–3.3ರ ಪ್ರಕಾರ, ರಸ್ತೆಗಳ ನಿರ್ಮಾಣದಲ್ಲಿ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ಗ್ರಾಮ ರಸ್ತೆ ಯೋಜನೆಗಳು ಆಂತರಿಕ ಕಣ್ಗಾವಲು ತಂಡವನ್ನು ಹೊಂದಿರಬೇಕು. ಇತರ ಜಿಲ್ಲಾ ರಸ್ತೆಗಳು (ಒಡಿಆರ್) ಮತ್ತು ಪ್ರಮುಖ ಜಿಲ್ಲಾ ರಸ್ತೆಗಳು (ಎಮ್‌ಡಿಆರ್) ಆಂತರಿಕ ಕಣ್ಗಾವಲು ತಂಡದ ಜೊತೆಗೆ ಮೂರನೇ ವ್ಯಕ್ತಿಯ ಸಮಾಲೋಚಕರ ತಂಡವನ್ನು ಹೊಂದಿರಬೇಕು. ರಾಜ್ಯ ಹೆದ್ದಾರಿ ಯೋಜನೆಯ ಸಂದರ್ಭದಲ್ಲಿ ಆಂತರಿಕ ಗುಣಮಟ್ಟದ ಕಣ್ಗಾವಲು ತಂಡದ ಜೊತೆಗೆ ಗುಣಮಟ್ಟದ ಭರವಸೆಯ ಸ್ವತಂತ್ರ ತಂಡವಿರಬೇಕು.

20 ಪರೀಕ್ಷಾ ಪರೀಕ್ಷಿತ ಪಿಡಬ್ಲ್ಯೂಡಿ ವಿಭಾಗಗಳಲ್ಲಿ ಯಾವುದೇ ಗುಣಮಟ್ಟದ ಆಂತರಿಕ ಕಣ್ಗಾವಲು ತಂಡವು ಅಸ್ತಿತ್ವದಲ್ಲಿಲ್ಲ ಮತ್ತು ಪರೀಕ್ಷಾ–ತನಿಖೆ ನಡೆಸಿದ 97 ಎಸ್‌ಎಚ್ ಯೋಜನೆಗಳಲ್ಲಿ ಯಾವುದೇ ಗುಣಮಟ್ಟದ ಭರವಸೆಯ ಸ್ವತಂತ್ರ ತಂಡವನ್ನು ತೊಡಗಿಸಿಕೊಂಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

6.4 ಲೋಕೋಪಯೋಗಿ ಇಲಾಖೆಯ ವಿಭಾಗಗಳಲ್ಲಿ ಮೂರನೇ ವ್ಯಕ್ತಿಯಿಂದ ಕಾಮಗಾರಿಗಳ ತಪಾಸಣೆ

ಕಾರ್ಯಗತಗೊಳಿಸಿದ ಕಾಮಗಾರಿಗಳ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ಇಲಾಖಾ ಅಧಿಕಾರಿಗಳು ಕಾಲಕಾಲಕ್ಕೆ ತಪಾಸಣೆ ಮಾಡಬೇಕು. ಇಲಾಖಾ ಸಂಹಿತೆ 2014ರ ಕಂಡಿಕೆ–183ರ ಅನ್ವಯ ಹಣಕ್ಕೆ ಮೌಲ್ಯವನ್ನು ಪಡೆಯಲು ಗುಣಮಟ್ಟದ ಮಾನದಂಡಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ಮೂರನೇ ವ್ಯಕ್ತಿಯ ಪರಿಶೀಲನೆಯು ಕಡ್ಡಾಯವಾಗಿದೆ.

ವ್ಯವಸ್ಥೆಯಲ್ಲಿ ಸಾರ್ವಜನಿಕ ವಿಶ್ವಾಸವನ್ನು ಗಳಿಸಲು ಕಾರ್ಯಗತಗೊಳಿಸಲಾದ ಕಾಮಗಾರಿಗಳ ಗುಣಮಟ್ಟದ ಮೌಲ್ಯಮಾಪನಕ್ಕೆ ಯಾವುದೇ ಕಾಮಗಾರಿಯನ್ನು ಒಳಪಡಿಸಿರಲಿಲ್ಲ ಎಂಬುದನ್ನು 20 ಪಿಡಬ್ಲ್ಯುಡಿ ವಿಭಾಗಗಳಲ್ಲಿ 459 ಮಾದರಿ ಕಾಮಗಾರಿಗಳ ಲೆಕ್ಕಪರಿಶೋಧನಾ ಪರಿಶೀಲನೆಯು ತಿಳಿಯಪಡಿಸಿತು. ಅಂತಹ ಮೂರನೇ ವ್ಯಕ್ತಿಯ ತಪಾಸಣೆಯ ಅನುಪಸ್ಥಿತಿಯಲ್ಲಿ, ಗುಣಮಟ್ಟದ ಗಮನಾರ್ಹ ಲೋಪಗಳನ್ನು ತಳ್ಳಿಹಾಕಲಾಗುವುದಿಲ್ಲ.

6.5 ವಿವೇಚನೆಯಿಲ್ಲದ ಮಾನವಶಕ್ತಿಯ ನಿಯೋಜನೆ

ಲೋಕೋಪಯೋಗಿ ಇಲಾಖೆಯಲ್ಲಿ, ಜೂನಿಯರ್/ಸಹಾಯಕ ಇಂಜಿನಿಯರ್‌ಗಳು, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ಗಳು ಮತ್ತು ಕಾರ್ಯನಿರ್ವಾಹಕ ಇಂಜಿನಿಯರ್‌ಗಳು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿರುವ ಗುತ್ತಿಗೆದಾರರು ನಿರ್ವಹಿಸುವ ಕಾಮಗಾರಿಗಳಲ್ಲಿ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ಹೊಣೆಗಾರರಾಗಿರುತ್ತಾರೆ. ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳು ಮತ್ತು ಮುಖ್ಯ ಇಂಜಿನಿಯರ್‌ಗಳು ತಮ್ಮ ವಲಯಗಳಲ್ಲಿನ ನಿರ್ಮಾಣ ಕಾರ್ಯಗಳ ಮೇಲ್ವಿಚಾರಣೆಯ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ. ಇದಲ್ಲದೆ, ರಸ್ತೆಗಳ ನಿಯಮಿತ ಸಂಚಾರ ದಟ್ಟಣೆ, ಪ್ರಾಥಮಿಕ ಅಂದಾಜುಗಳ ಮತ್ತು ವಿವರವಾದ ಅಂದಾಜುಗಳ ತಯಾರಿಕೆ, ಗುತ್ತಿಗೆಗಳ ಅಂತಿಮಗೊಳಿಸುವಿಕೆ, ಪ್ರಗತಿ ವರದಿಗಳು, ಕಾರ್ಯಗತಗೊಳಿಸಿದ ಕಾಮಗಾರಿಗಳ ಅಳತೆ, ಬಿಲ್‌ಗಳ ತಯಾರಿಕೆ, ಕಟ್ಟಡ ಕಾಮಗಾರಿಗಳು ಇತ್ಯಾದಿಗಳನ್ನು ಸಹ ಇಂಜಿನಿಯರ್‌ಗಳು ನಿರ್ವಹಿಸಬೇಕು.

2016–21ರ ಅವಧಿಯಲ್ಲಿ ಕಿರಿಯ/ಸಹಾಯಕ ಇಂಜಿನಿಯರ್‌ಗಳ ಪದವೃಂದದಲ್ಲಿ ಗಮನಾರ್ಹ ಕೊರತೆಗಳಿದ್ದವು (ಶೇಕಡಾ 32ರಿಂದ 45). ಈ ಕೊರತೆಗಳ ಹೊರತಾಗಿಯೂ, ಕೆಳಗೆ ಚರ್ಚಿಸಿದಂತೆ, ಕೆಲವು ವಿಭಾಗಗಳಲ್ಲಿ ವಿವೇಚನೆಯಿಲ್ಲದ ಮಾನವಶಕ್ತಿಯ ನಿಯೋಜನೆಯನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಪರೀಕ್ಷಾ–ತನಿಖೆ 20 ವಿಭಾಗಗಳ ಪ್ರತಿ ಉಪ–ವಿಭಾಗಗಳಲ್ಲಿ ಪ್ರತಿ ಜೆಇ/ಎಇ ನಡೆಸಿರುವ ಮೇಲ್ವಿಚಾರಣೆಯ ಸರಾಸರಿ ರಸ್ತೆ ಉದ್ದವು ಬೆಂಗಳೂರಿನಲ್ಲಿ (ಉತ್ತರ) 22 ಕಿ.ಮೀನಿಂದ ಮದ್ದೂರು ಉಪ–ವಿಭಾಗದ 656 ಕಿ.ಮೀವರೆಗೆ ಇದ್ದು ಮೇಲ್ವಿಚಾರಣೆಯಲ್ಲಿ ಗಮನಾರ್ಹ ವ್ಯತ್ಯಾಸಗಳಿದ್ದವು. ಪರೀಕ್ಷಾ–ತನಿಖೆ ನಡೆಸಿದ

ವಿಭಾಗಗಳಲ್ಲಿನ ಇಂಜಿನಿಯರಿಂಗ್ ಪದವೃಂದಕ್ಕೆ ಸಂಬಂಧಿಸಿದಂತೆ ಕೆಲಸದ ಹೊರೆ ಮತ್ತು ನಿಯೋಜಿತ ವ್ಯಕ್ತಿಗಳ ಸ್ಥಿತಿಯನ್ನು **ಅನುಬಂಧ–6.3**ರಲ್ಲಿ ನೀಡಲಾಗಿದೆ. ಜೆಇ/ಎಇಗಳ ಪದವೃಂದದಲ್ಲಿ ಭಾರಿ ಕೊರತೆಗಳಿದ್ದರೂ ಸಹ, ಮುಖ್ಯ ಇಂಜಿನಿಯರ್, ಸಿ&ಬಿ (ದಕ್ಷಿಣ ವಲಯ), ಬೆಂಗಳೂರು ಅವರು ಒದಗಿಸಿದ ಮಾಹಿತಿಯ ಪ್ರಕಾರ 100 ಜೆಇಗಳು/ಎಇಗಳು ಇತರ ಇಲಾಖೆಗಳಲ್ಲಿ ಪ್ರತಿನಿಯೋಜನೆಯ ಮೇಲೆ ಕಾರ್ಯನಿರ್ವಹಿಸುತ್ತಿದ್ದರು..



ಬೆಂಗಳೂರು (ವಿಮಲೇಂದ್ರ ಏ. ಪಟವರ್ಧನ್)
ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–II)
ಕರ್ನಾಟಕ

ಮೇಲುರುಜು ಮಾಡಲಾಗಿದೆ



ಹೊಸದೆಹಲಿ (ಗಿರೀಶ್ ಚಂದ್ರ ಮುರ್ಮು)
ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು

ಅನುಬಂಧಗಳು

ಅನುಬಂಧ 3.1					
(ಕಂಡಿಕೆ 3.1.2, ಪುಟ 14) ಸಂಚಾರ ಗಣತಿಯ ತಿರುಚುವಿಕೆಯಿಂದ ಅನಗತ್ಯ ವೆಚ್ಚ (₹ ಲಕ್ಷಗಳಲ್ಲಿ)					
ಕಾಮಗಾರಿ	ಅಳತೆ	ಪ್ರಮಾಣ (ಕ್ಯೂ. ಮೀ)	ತಪ್ಪಿಸಬಹುದಾಗಿದ್ದ ಪ್ರಮಾಣ (ಕ್ಯೂ. ಮೀ)	ಟೆಂಡರ್ ದರ (₹/ಕ್ಯೂ. ಮೀ)	ಹೆಚ್ಚುವರಿ ವೆಚ್ಚ
ಉಪದರ್ಜೆ ಪದರ	For 7 M = 0.150*2*2.350*7500	5287.5	12375	633	78.33
	For 9 M = 0.300*2*3.925*7500	17662.5			
GSB - 1st ಪದರ	For 7 M = 0.100*2*2.225*7500	3337.5	2250	1592	35.82
	For 9 M = 0.100*2*3.725*7500	5587.5			
GSB - 2nd ಪದರ	For 7 M = 0.100*2*0.95*7500	1425	1650	1592	26.27
	For 9 M = 0.100*2*2.05*7500	3075			
WMM	For 7 M = 0.250*2*0.85*7500	3187.5	3938	1902	74.9
	For 9 M = 0.250*2*1.90*7500	7125			
B.M	For 7 M = 0.05*2*0.75*7500	562.5	750	5885	44.14
	For 9 M = 0.05*2*1.75*7500	1312.5			
S.D.B.C	For 7 M = 0.025*7.00*7500	1312.5	375	7792	29.22
	For 9 M = 0.025*9.00*7500	1687.5			
ಅನಾವಶ್ಯವಾಗಿ 9 ಮೀಟರ್‌ಗೆ ವಿಸ್ತರಿಸಿದ್ದರಿಂದಾದ ತಪ್ಪಿಸಬಹುದಾದ ಒಟ್ಟು ವೆಚ್ಚ					**288.68**

ಅನುಬಂಧ 3.2							
(ಕಂಡಿಕೆ 3.1.3, ಪುಟ 15) ಮಣ್ಣಿನ CBR ಮೌಲ್ಯದ ಮಾಪನ							(₹ ಕೋಟಿಗಳಲ್ಲಿ)
ಕ್ರಮ ಸಂಖ್ಯೆ	ವಿಭಾಗ	ಮಾದರಿ ಕಾಮಗಾರಿ	ಟೆಂಡರ್ ಹಾಕಿದ ಮೊತ್ತ (₹ ಲಕ್ಷಗಳಲ್ಲಿ)	CBR ವರದಿ			
				CBR ವರದಿ ಲಭ್ಯವಿದ್ದ ಕಾಮಗಾರಿಗಳ ಸಂಖ್ಯೆ	ಟೆಂಡರ್ ಹಾಕಿದ ಮೊತ್ತ	CBR ವರದಿ ಲಭ್ಯವಿದ್ದ ಕಾಮಗಾರಿಗಳ ಸಂಖ್ಯೆ	ಟೆಂಡರ್ ಹಾಕಿದ ಮೊತ್ತ
1	ಬಾಗಲಕೋಟೆ	20	188.33	20	188.33	-	-
2	ಬೆಂಗಳೂರು	19	105.86	19	105.86	-	-
3	ಬೆಳಗಾವಿ	20	131.05	20	131.05	-	-
4	ಬಳ್ಳಾರಿ	19	107.53	17	102.62	2	4.90
5	ಬೀದರ್	20	108.39	8	43.83	12	64.55
6	ಚಿಕ್ಕಮಗಳೂರು	27	127.56	12	51.16	15	76.40
7	ಚಿಕ್ಕೋಡಿ	21	84.44	16	66.69	5	17.76
8	ಚಿತ್ರದುರ್ಗ	25	105.34	15	70.74	10	34.60
9	ಧಾರವಾಡ	24	130.75	5	17.12	19	113.62
10	ಹಾಸನ	29	118.73	21	79.50	8	39.23
11	ಕಲಬುರಗಿ	22	73.39	-	-	22	73.39
12	ಕೋಲಾರ	20	87.28	6	27.78	14	59.49
13	ಮಂಡ್ಯ	29	157.26	-	-	29	157.26
14	ಮಂಗಳೂರು	27	132.98	8	30.40	19	102.94
15	ಮೈಸೂರು	22	191.46	-	-	22	191.46
16	ರಾಯಚೂರು	20	161.26	10	102.69	10	58.57
17	ರಾಮನಗರ	23	101.26	4	22.47	19	78.79

ಅನುಬಂಧ 3.2							
(ಕಂಡಿಕೆ 3.1.3, ಪುಟ 15) ಮಣ್ಣಿನ CBR ಮೌಲ್ಯದ ಮಾಪನ (₹ ಕೋಟಿಗಳಲ್ಲಿ)							
ಕ್ರಮ ಸಂಖ್ಯೆ	ವಿಭಾಗ	ಮಾದರಿ ಕಾಮಗಾರಿ	ಟೆಂಡರ್ ಹಾಕಿದ ಮೊತ್ತ (₹ ಲಕ್ಷಗಳಲ್ಲಿ)	CBR ವರದಿ			
				CBR ವರದಿ ಲಭ್ಯವಿದ್ದ ಕಾಮಗಾರಿಗಳ ಸಂಖ್ಯೆ	ಟೆಂಡರ್ ಹಾಕಿದ ಮೊತ್ತ	CBR ವರದಿ ಲಭ್ಯವಿದ್ದ ಕಾಮಗಾರಿಗಳ ಸಂಖ್ಯೆ	ಟೆಂಡರ್ ಹಾಕಿದ ಮೊತ್ತ
18	ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ	40	930.20	40	930.20	-	-
19	ಶಿವಮೊಗ್ಗ	26	76.63	4	6.49	22	70.14
20	ಶಿರಸಿ	20	54.31	6	15.07	14	39.25
21	ತುಮಕೂರು	26	118.68	1	3.96	25	114.72
ಒಟ್ಟು		**499**	**3292.70**	**232**	**1995.96**	**267**	**1297.07**

ಅನುಬಂಧ 3.3						
(ಕಂಡಿಕೆ 3.1.5, ಪುಟ 16) ನೆಡುತೋಪು ಕಾಮಗಾರಿಗಳು						
ನೆಡುತೋಪು ಕಾಮಗಾರಿಗಳಿಗಾಗಿ ಅನುವು ಮಾಡದಿರುವ ಕಾಮಗಾರಿಗಳು						(₹ ಕೋಟಿಗಳಲ್ಲಿ)
ಘಟಕಗಳು	ಕಾಮಗಾರಿಗಳಿಗಾಗಿ ಮಂಜೂರಾದ ಹುದ್ದೆಗಳು - ಜನವರಿ 2017	ಕಾಮಗಾರಿಗಳ ಸಂಖ್ಯೆ	ಆಡಳಿತಾತ್ಮಕ ಅನುಮೋದನೆ ವೆಚ್ಚದ ಮೊತ್ತ	ಮರ ನೆಡುವಿಕೆಗಾಗಿ ಅನುವುಮಾಡಬೇಕಿದ್ದ ಮೊತ್ತ @ 1%	ಮರ ನೆಡುವಿಕೆಗಾಗಿ ಅನುವು ಮಾಡಲಾದ ಮೊತ್ತ	ಕೊರತೆ(+)/ಹೆಚ್ಚುವರಿ (-) ಮೊತ್ತ
ಬಾಗಲಕೋಟೆ	19	8	100.25	1.00	0.00	1.00
ಬೆಂಗಳೂರು	18	3	35.99	0.36	0.00	0.36
ಬೆಳಗಾವಿ	14	4	33.28	0.33	0.00	0.33
ಬಳ್ಳಾರಿ	19	19	118.20	1.18	0.00	1.18
ಬೀದರ್	16	16	95.50	0.96	0.00	0.96
ಚಿಕ್ಕೋಡಿ	20	11	45.77	0.46	0.00	0.46
ಚಿತ್ರದುರ್ಗ	20	17	93.85	0.94	0.00	0.94
ಧಾರವಾಡ	22	22	124.40	1.24	0.00	1.24
ಹಾಸನ	24	1	4.00	0.04	0.00	0.04
ಕಲಬುರಗಿ	20	20	76.55	0.77	0.00	0.77
ಕೋಲಾರ	14	2	9.00	0.09	0.00	0.09
ಮಂಡ್ಯ	24	5	26.15	0.26	0.00	0.26
ಮಂಗಳೂರು	22	1	13.90	0.14	0.00	0.14
ರಾಯಚೂರು	15	15	127.38	1.27	0.00	1.27
ರಾಮನಗರ	20	10	40.26	0.40	0.00	0.40
ಶಿವಮೊಗ್ಗ	21	8	15.30	0.15	0.00	0.15
ಶಿರಸಿ	18	18	58.81	0.59	0.00	0.59
ಸಮಗ್ರ ಒಟ್ಟು	**326**	**180**	**1018.58**	**10.19**	**0.00**	**10.19**

ಅನುಬಂಧ 3.3						
(ಕಂಡಿಕೆ 3.1.5, ಪುಟ 16) ನೆಡುತೋಪು ಕಾಮಗಾರಿಗಳು						
ನೆಡುತೋಪು ಕಾಮಗಾರಿಗಳಿಗಾಗಿ ಅನುವು ಮಾಡದಿರುವ ಕಾಮಗಾರಿಗಳು						(₹ ಕೋಟಿಗಳಲ್ಲಿ)
ಘಟಕಗಳು	ಕಾಮಗಾರಿಗಳಿಗಾಗಿ ಮಂಜೂರಾದ ಹುದ್ದೆಗಳು - ಜನವರಿ 2017	ಕಾಮಗಾರಿಗಳ ಸಂಖ್ಯೆ	ಆಡಳಿತಾತ್ಮಕ ಅನುಮೋದನೆ ವೆಚ್ಚದ ಮೊತ್ತ	ಮರ ನೆಡುವಿಕೆಗಾಗಿ ಅನುವುಮಾಡಬೇಕಿದ್ದ ಮೊತ್ತ @ 1%	ಮರ ನೆಡುವಿಕೆಗಾಗಿ ಅನುವು ಮಾಡಲಾದ ಮೊತ್ತ	ಕೊರತೆ(+)/ಹೆಚ್ಚುವರಿ (-) ಮೊತ್ತ
ನೆಡುತೋಪು ಕಾಮಗಾರಿಗಳಿಗಾಗಿ 0 - 1% ಅನುವು ಮಾಡಿರುವ ಕಾಮಗಾರಿಗಳು						
ಬಾಗಲಕೋಟೆ	19	11	109.63	1.10	0.52	0.58
ಬೆಂಗಳೂರು	18	4	22.70	0.23	0.21	0.02
ಬೆಳಗಾವಿ	14	10	61.60	0.62	0.41	0.21
ಚಿಕ್ಕೋಡಿ	20	9	36.45	0.36	0.17	0.20
ಚಿತ್ರದುರ್ಗ	20	2	5.00	0.05	0.05	0.00
ಹಾಸನ	24	4	17.90	0.18	0.15	0.03
ಕೋಲಾರ	14	4	20.50	0.21	0.17	0.04
ಮಂಡ್ಯ	24	3	20.42	0.20	0.17	0.04
ಮಂಗಳೂರು	22	2	19.95	0.20	0.16	0.04
ಮೈಸೂರು	18	15	144.78	1.45	0.95	0.50
ರಾಮನಗರ	20	2	16.95	0.17	0.13	0.03
ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ	165	163	4430.51	44.31	35.96	8.34
ಶಿವಮೊಗ್ಗ	21	9	38.50	0.39	0.22	0.17
ತುಮಕೂರು	21	12	86.05	0.86	0.75	0.11
ಸಮಗ್ರ ಒಟ್ಟು	**420**	**250**	**5030.94**	**50.31**	**40.01**	**10.31**

ಅನುಬಂಧ 3.3						
(ಕಂಡಿಕೆ 3.1.5, ಪುಟ 16) ನೆಡುತೋಪು ಕಾಮಗಾರಿಗಳು						
ನೆಡುತೋಪು ಕಾಮಗಾರಿಗಳಿಗಾಗಿ ಅನುವು ಮಾಡದಿರುವ ಕಾಮಗಾರಿಗಳು						(₹ ಕೋಟಿಗಳಲ್ಲಿ)
ಘಟಕಗಳು	ಕಾಮಗಾರಿಗಳಿಗಾಗಿ ಮಂಜೂರಾದ ಹುದ್ದೆಗಳು - ಜನವರಿ 2017	ಕಾಮಗಾರಿಗಳ ಸಂಖ್ಯೆ	ಆಡಳಿತಾತ್ಮಕ ಅನುಮೋದನೆ ವೆಚ್ಚದ ಮೊತ್ತ	ಮರ ನೆಡುವಿಕೆಗಾಗಿ ಅನುವುಮಾಡಬೇಕಿದ್ದ ಮೊತ್ತ @ 1%	ಮರ ನೆಡುವಿಕೆಗಾಗಿ ಅನುವು ಮಾಡಲಾದ ಮೊತ್ತ	ಕೊರತೆ(+)/ಹೆಚ್ಚುವರಿ (-) ಮೊತ್ತ
ನೆಡುತೋಪು ಕಾಮಗಾರಿಗಳಿಗಾಗಿ 1% ಅನುವು ಮಾಡಿರುವ ಕಾಮಗಾರಿಗಳು						
ಬೆಂಗಳೂರು	18	11	50.79	0.51	0.51	0.00
ಚಿಕ್ಕಮಗಳೂರು	22	22	103.75	1.04	1.04	0.00
ಚಿತ್ರದುರ್ಗ	20	1	5.50	0.06	0.06	0.00
ಹಾಸನ	24	19	96.86	0.97	0.97	0.00
ಕೋಲಾರ	14	8	36.85	0.37	0.37	0.00
ಮಂಡ್ಯ	24	16	129.65	1.30	1.30	0.00
ಮಂಗಳೂರು	22	19	111.21	1.11	1.11	0.00
ಮೈಸೂರು	18	3	15.97	0.16	0.16	0.00
ರಾಮನಗರ	20	8	55.78	0.56	0.56	0.00
ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ	165	1	22.94	0.23	0.31	-0.08
ಶಿವಮೊಗ್ಗ	21	4	14.70	0.15	0.15	0.00
ತುಮಕೂರು	21	9	32.50	0.33	0.33	0.00
ಸಮಗ್ರ ಒಟ್ಟು	**89**	**121**	676.50	6.76	6.85	-0.083

ಅನುಬಂಧ 3.4

(ಕಂಡಿಕೆ 3.2.1, ಪುಟ 17)) ಹೆಚ್ಚುವರಿ ಅಂದಾಜು ಒದಗಿಸಿರುವುದು

(₹ ಕೋಟಿಗಳಲ್ಲಿ)

ಕ್ರಮ ಸಂಖ್ಯೆ	ವಿಭಾಗ	ಕಾಮಗಾರಿ ಇಂಡೆಂಟ್ ಸಂಖ್ಯೆ	ಅಂದಾಜು ವೆಚ್ಚ	CVPD	CBR ಮೌಲ್ಯ	ಅಳವಡಿಸಿಕೊಂಡ VDF	ಲೆಕ್ಕ ಹಾಕಿದ MSA	IRC ಪ್ರಕಾರ MSA	BM ಪ್ರಮಾಣ (ಕ್ಯೂ.. ಮೀ)	ಟೆಂಡರ್ ದರ (₹/ಕ್ಯೂ.ಮೀ)	ತಪ್ಪಿಸಬಹುದಾಗಿದ್ದ ವೆಚ್ಚ
1	ಶಿರಸಿ	66380	3.50	138	5%	3.5	2.0	1.00	1,462.50	7,068.00	1.03
2	ಶಿರಸಿ	67682	1.75	112	2%	2.86	2.0	0.80	600.00	5,600.00	0.34
3	ಶಿರಸಿ	79426	4.75	122	7%	2.86	2.0	0.88	1,350.00	6,150.00	0.83
4	ಶಿರಸಿ	100127	5.00	110	4%	1.5	2.0	0.79	1,904.29	7,000.00	1.33
5	ಶಿವಮೊಗ್ಗ	37311	2.00	79	7%	3.5	3.0	0.57	1,224.71	7,570.25	0.93
6	ಶಿವಮೊಗ್ಗ	100488	6.00	98	4%	3.5	2.0	0.71	1,193.75	6,589.45	0.79
7	ಕೋಲಾರ	66503	4.20	38	5%	4.5	2.0	0.30	1,582.09	5,349.00	0.85
8	ಮಂಗಳೂರು	67557	2.75	145	9%	3.5	2.4	1.04	937.50	6,600.00	0.62
9	ಮಂಗಳೂರು	81204	4.00	144	7%	3.5	1.8	0.78	2,144.90	7,000.00	1.50
10	ಮಂಗಳೂರು	81440	4.03	142	8%	3.5	1.9	0.77	1,124.92	6,000.00	0.67
11	ಮಂಗಳೂರು	104143	3.00	144	7%	3.5	1.9	0.78	479.94	6,715.00	0.32
12	ಚಿತ್ರದುರ್ಗ	41181	4.95	92	7%	3.5	1.6	0.66	2,279.41	7,000.00	1.60
13	ಹಾಸನ	95130	3.50	121	7.2 - 7.8%	3.5	2.0	0.87	993.75	6,666.86	0.66
14	ಹಾಸನ	77664	1.76	130	8%	3.5	2.2	0.94	862.13	5,030.00	0.43
15	ರಾಮನಗರ	93211 (D)	8.50	104	8%	3.5	2.0	0.84	444.70	9,000.00	0.40
	ರಾಮನಗರ	93211 (B)	8.50	98	8%	3.5	2.0	0.79	99.83	5,498.33	0.05
16	ರಾಮನಗರ	85027 (C)	8.45	120	8-10%	3.5	2.0	0.97	187.50	6,296.97	0.12
	ರಾಮನಗರ	85027 (D)	8.45	98	8-10%	3.5	2.0	0.79	337.50	6,296.97	0.21
17	ತುಮಕೂರು	98936	4.00	125	11%	3.5	4.0	0.67	843.75	5,120.00	0.43
	ಒಟ್ಟು		**89.09**								**13.12**

ಕ್ರ. ಸಂಖ್ಯೆ 4ಕ್ಕೆ ಸಂಬಂಧಿಸಿದಂತೆ, LDF ಮೌಲ್ಯ 1 ರ ವಿರುದ್ಧ, ಮೌಲ್ಯ 2 ಅನ್ನು ತಪ್ಪಾಗಿ ಅಳವಡಿಸಲಾಗಿದೆ

ಅನುಬಂಧ 3.5							
(ಕಂಡಿಕೆ 3.2.2, ಪುಟ 18) GSBಯ ಹೆಚ್ಚುವರಿ ದಪ್ಪಕ್ಕೆ ಅನುವು ಮಾಡಿದುದು ಮತ್ತು ಕಾರ್ಯರೂಪಕ್ಕೆ ಳಿಸಿದ್ದು (₹ ಕೋಟಿಗಳಲ್ಲಿ)							
ಕ್ರಮ ಸಂಖ್ಯೆ	ಕಾಮಗಾರಿ ಇಂಡೆಂಟ್ ಸಂಖ್ಯೆ	ವಿಭಾಗ	ಗುತ್ತಿಗೆ ಮೌಲ್ಯ (₹)	ವಿವರ (ಉ*ಅ*ಆ)	ಪ್ರಮಾಣ (ಕ್ಯೂ.ಮೀ)	ಟೆಂಡರ್ ದರ (₹/ಕ್ಯೂ.ಮೀ)	ತಪ್ಪಿಸಬಹುದಾಗಿದ್ದ ವೆಚ್ಚ (₹)
1	91593	ಚಿಕ್ಕಮಗಳೂರು	5.80	5350*3.3*0.1	1,765.50	1,986.78	0.35
				5350*3.3*0.1	1,765.50	1,986.78	0.35
